ಬಾ ಮತ್ತು ಬಾಪು 150ನೇ ಜನ್ಮ ವರ್ಷಾಚರಣೆ ಪುಸ್ತಕ ಮಾಲಿಕೆ

ಅಂದಿಗೂ-ಇಂದಿಗೂ
ಪ್ರಸ್ತುತ ಗಾಂಧೀಜಿ

ಡಾ. ಎಚ್.ಎಸ್. ದೊರೆಸ್ವಾಮಿ



ಬಾ-ಬಾಪು 150ನೇ



ವರ್ಷಾಚರಣೆ ಪುಸ್ತಕ ಮಾಲಿಕೆ

ಅಂದಿಗೂ-ಇಂದಿಗೂ
ಪ್ರಸ್ತುತ ಗಾಂಧೀಜಿ

ಡಾ. ಎಚ್.ಎಸ್. ದೊರೆಸ್ವಾಮಿ

ಪ್ರಕಾಶಕರು

ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ

ಬೆಂಗಳೂರು - 560001, ದೂರವಾಣಿ : 080-22261967

ಇಮೇಲ್ : gandhibhavanabengaluru@gmail.com

ಅಂದಿಗೂ–ಇಂದಿಗೂ ಪ್ರಸ್ತುತ ಗಾಂಧೀಜಿ

ಲೇಖಕರು : ಡಾ. ಎಚ್.ಎಸ್. ದೊರೆಸ್ವಾಮಿ

ಪ್ರಕಾಶಕರು : ಕರ್ನಾಟಕ ಗಾಂಧಿ ಸ್ಮಾರಕ ನಿಧಿ

ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ

ಬೆಂಗಳೂರು – 560001, ದೂರವಾಣಿ : 080–22261967

ಪುಟಗಳು	:	XII + 124
ಬೆಲೆ	:	ರೂ. 95/-
ಪ್ರತಿಗಳು	:	1000
ಮೊದಲ ಮುದ್ರಣ	:	2021
ಒಳ ಪುಟ ಕಾಗದ	:	58 ಜಿ.ಎಸ್.ಎಂ. ಮ್ಯಾಫ್‌ಲಿತೋ
ಮುಖ ಪುಟ	:	300 ಜಿ.ಎಸ್.ಎಂ. ಆರ್ಟ್ ಕಾರ್ಡ್
ಸಹಕಾರ	:	ರಾಷ್ಟ್ರೀಯ ಸೇವಾ ಯೋಜನೆ
ವಿನ್ಯಾಸ & ಮುದ್ರಣ	:	ಕ್ರಿಯೇಟಿವ್‌ಗೀಕ್ಸ್ ಯಾದವ ಕಾಲೇಜು ರಸ್ತೆ ಮಾಧವನಗರ, ಬೆಂಗಳೂರು–560001 ದೂರವಾಣಿ : 080 40927049




ಅರ್ಪಣೆ

ಸಮಾಜ ಒಳಿತಿಗಾಗಿ ತಮ್ಮನ್ನು ಅರ್ಪಿಸಿಕೊಂಡು,
ಮಹಾತ್ಮ ಗಾಂಧೀ ಅವರ ತತ್ವ ಸಿದ್ಧಾಂತಗಳ
ಪ್ರತಿಪಾದಕರಾದ

ಮೀರಾ ಬೆಹೆನ್ (ಮೆಡೆಲಿನ್ ಸ್ಲೇಡ್)

ಅವರಿಗೆ ಗೌರವಪೂರ್ವಕವಾಗಿ



ನಿಜವಾದ ಪ್ರೀತಿ ವ್ಯಕ್ತವಾಗುವುದು
ಹೊಗಳಿಕೆಯಿಂದಲ್ಲ, ಸೇವೆಯ ಮುಖಾಂತರ.
ಆತ್ಮ ಶುದ್ಧೀಕರಣವು ನಿಜವಾದ ಸೇವೆಯ
ಪ್ರಾಸ್ತಾವಿಕ ವಿಧಾನವಾಗಿರುವುದು ಅವಶ್ಯಕ
ಸಂಗತಿಯಾಗಿರುವುದು.

– ಮಹಾತ್ಮ ಗಾಂಧಿ

ನಿಮ್ಮೊಡನೆ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಹಾಕಿಕೊಂಡಿರುವ ಹಲವಾರು ಕಾರ್ಯ ಯೋಜನೆಗಳಲ್ಲಿ, ಗಾಂಧೀಜಿ ಅವರ ಚಿಂತನೆಗಳು ಮತ್ತು ತತ್ವ ಸಿದ್ಧಾಂತಗಳುಳ್ಳ ಸಾಹಿತ್ಯವನ್ನು ಪ್ರಕಟಿಸುವುದು, ಪ್ರದರ್ಶಿಸುವುದು ಮತ್ತು ವಿತರಿಸುವುದೂ ಪ್ರಮುಖವಾದುದಾಗಿದೆ. ಕರೋನಾ ಭೀತಿಗಳು ಕಡಿತಗೊಳ್ಳುತ್ತಿರುವ ಈ ದಿನಗಳಲ್ಲಿ, ಹೊಸ ಹುರುಪಿನೊಂದಿಗೆ ಹೊಸ ವರ್ಷ – 2021ರಲ್ಲಿ ಡಾ. ಹೆಚ್.ಎಸ್. ದೊರೆಸ್ವಾಮಿ ಅವರ "ಅಂದಿಗೂ–ಇಂದಿಗೂ ಪ್ರಸ್ತುತ ಗಾಂಧೀಜಿ" ಕೃತಿಯನ್ನು ಪ್ರಕಟಿಸಲು ಹರ್ಷವೆನಿಸುತ್ತದೆ.

ನಮ್ಮೆಲ್ಲರ ನೆಚ್ಚಿನ ಡಾ. ಹೆಚ್.ಎಸ್. ದೊರೆಸ್ವಾಮಿ ಅವರು, ಬರವಣಿಗೆಯಲ್ಲಿ ಇಂದಿಗೂ ತೊಡಗಿಸಿಕೊಂಡಿರುವುದು, ನಮ್ಮೆಲ್ಲರಿಗೂ ಸ್ಫೂರ್ತಿದಾಯಕ ವಿಚಾರವಾಗಿದೆ. ಅದರೊಂದಿಗೆ ವರ್ತಮಾನದ ವಿಷಯಗಳನ್ನು ಕೂಲಂಕಷವಾಗಿ ಅವಲೋಕಿಸಿ, ವಿಶ್ಲೇಷಿಸಿದ ಅವರ ಲೇಖನಗಳು ಹೊಸ ಆಲೋಚನಾ ಕ್ರಮಗಳನ್ನು ನಮ್ಮಲ್ಲಿ ಬೆಳೆಸುತ್ತವೆ. ಸಾಮಾಜಿಕ ಚಿಂತಕರು, ರಾಜಕೀಯ ನೇತಾರರಿಗೆ ಮಾರ್ಗದರ್ಶನವಾಗುವ ವಿಚಾರಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಗಾಂಧೀಜಿ ಅವರ ಕುರಿತಾದ ಅವರ ಲೇಖನಗಳು "ಹಿಂದ್ ಸ್ವರಾಜ್, ಗಾಂಧೀಜಿ ಅವರ ದೃಷ್ಟಿಯಲ್ಲಿ ಸುಭಾಷ್‌ಚಂದ್ರ ಬೋಸ್, ಕೋಮು ಸೌಹಾರ್ದ, ಗಾಂಧಿ ಕೊಲೆ ಮತ್ತು ಅನಂತರ" ನಡೆದ ಘಟನೆಗಳನ್ನು ಇಂದಿನ ಮಾಪನದಲ್ಲಿಟ್ಟು, ವಿಶ್ಲೇಷಿಸಿ, ಚರಿತ್ರೆಯನ್ನು ನೋಡುವ ಕ್ರಮವು ಹೊಸ ಮಾದರಿಯದಾಗಿದೆ. "ಹಿಂದ್

ಸ್ವರಾಜ್‌ನ ಮುಖ್ಯ ಪ್ರತಿಪಾದನೆ ತಮ್ಮನ್ನು ತಾವೇ ತಿದ್ದಿಕೊಂಡು ಋಜು ಮಾರ್ಗದಲ್ಲಿ ನಡೆದುಕೊಳ್ಳುವುದು. ಈ ಸಾಧನ ಕ್ರಮವನ್ನು ಸ್ವ ಆತ್ಮ ಶಿಕ್ಷಣ ಎಂದು ಕರೆಯಬಹುದು. ಈ ಸ್ವ ಆತ್ಮ ಶಿಕ್ಷಣವೇ ಭಾರತೀಯ ಶಿಕ್ಷಣ ಪರಂಪರೆಯ ಜೀವ ಜೀವಾಳ", ಎಂದು ಹಿಂದ್ ಸ್ವರಾಜ್‌ನ ಮೂಲ ಆಶಯವನ್ನು ವಿವೇಚನಾತ್ಮಕವಾಗಿ ದರ್ಶಿಸಿದ್ದಾರೆ. "ವಿವಿಧ ಮತಗಳ ಹೊಂದಾಣಿಕೆಯೇ ಧರ್ಮ, ಮತಗಳು ಬೇರೆ ಬೇರೆಯಾಗಿದ್ದರೂ ಅವು ಒಂದುಗೂಡಿ ಸೌಹಾರ್ದದಿಂದ ಬಾಳುವಂತೆ ಮಾಡುವುದನ್ನು ಧರ್ಮ ಎನ್ನುವುದು, ಮೈತ್ರಿಯಿಂದ ಬಾಳಿದರೆ ವಿಶ್ವ ಒಂದೇ, ಮಾನವ ಸಮುದಾಯ ಒಂದೇ ಎಂಬ ಅರಿವು ಮೂಡುತ್ತದೆ." ಎಂಬ ವಿವೇಕಯುತ ನುಡಿಗಳು "ಮನುಜ ಮತ, ವಿಶ್ವ ಪಥದ" ಕೈದೀವಿಗೆಗಳಾಗಿವೆ. ಇಂಥಹ ಅನೇಕ ವಿವೇಕಯುತ ದೃಷ್ಟಿಕೋನದಿಂದ "ಅಂದಿಗೂ-ಇಂದಿಗೂ ಪ್ರಸ್ತುತ ಗಾಂಧೀಜಿ" ಅತ್ಯಂತ ಸಕಾಲಿಕ, ಸಂಪನ್ಮೂಲ ಕೃತಿಯಾಗಿದೆ. ಇಂಥಹ ಲೇಖನಗಳನ್ನು ಬರೆದು ಗಾಂಧಿ ಭವನದಿಂದ ಪ್ರಕಟಿಸಲು ಕೊಟ್ಟಿರುವುದಕ್ಕಾಗಿ ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಈ ಕೃತಿಯನ್ನು ಲೋಕಾರ್ಪಣೆ ಮಾಡಲು ಸಿದ್ಧಗೊಳಿಸಿದ ಗಾಂಧಿ ಭವನದ ಗೌ. ಕಾರ್ಯದರ್ಶಿ, ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರಿಗೆ ಅಭಿನಂದನೆಗಳು ಸಲ್ಲುತ್ತವೆ. ಈ ಕೃತಿಯನ್ನು ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡಕ್ಕೆ ಆತ್ಮೀಯ ನಮನಗಳು.

ನಾಡೋಜ ಡಾ. ವೂಡೇ ಪಿ. ಕೃಷ್ಣ
ಅಧ್ಯಕ್ಷರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ನಮ್ಮ ನಮ್ಮಲ್ಲಿ

ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆಯ ಸುಸಂದರ್ಭದಲ್ಲಿ, ಗಾಂಧೀಜಿ ಅವರ ತತ್ವ ಸಿದ್ಧಾಂತಗಳ ಆಶಯದ ಕುರಿತಾದ ಈ ಕೃತಿಯನ್ನು ಲೋಕಾರ್ಪಣೆ ಮಾಡಲು ಹರ್ಷವೆನಿಸುತ್ತದೆ. ಗಾಂಧೀಜಿ ಚಿಂತನೆ, ಸಂದೇಶ ಹಾಗೂ ಆದರ್ಶಗಳಿಗೆ ಪೂರಕವಾದ ಕೃತಿಯನ್ನು ಡಾ. ಹೆಚ್.ಎಸ್. ದೊರೆಸ್ವಾಮಿ ಅವರು ರಚಿಸಿ ನಮ್ಮ ಅರಿವಿಗೆ ಇಲ್ಲಿ ತೆರೆದಿಟ್ಟಿದ್ದಾರೆ.

ವರ್ತಮಾನದ ಜನತೆ ಮತ್ತು ಯುವಜನರು ಗಾಂಧೀಜಿ ಅವರ ವಿಚಾರಗಳನ್ನು ತಿಳಿದುಕೊಳ್ಳಲಿ, ಅವರ ಆಶಯಗಳನ್ನು ಸಾಕಾರಗೊಳಿಸಲಿ ಎಂಬ ಸದಾಶಯದಿಂದ ಡಾ. ಹೆಚ್. ಎಸ್. ದೊರೆಸ್ವಾಮಿ ಅವರು ಈ ಕೃತಿಯನ್ನು ರಚಿಸಿದ್ದಾರೆ. ಅವರು ವರ್ತಮಾನದ ಸಂಕಷ್ಟಗಳನ್ನು ನೋಡುವ ವಿಧಾನ ಮತ್ತು ಪರಿಹಾರದ ಮಾರ್ಗಗಳನ್ನು ಗಾಂಧಿ ಅವರ ಜೀವನದ ನಡೆನುಡಿಗಳಿಂದ ಕಂಡುಕೊಳ್ಳುವುದನ್ನು ಇಲ್ಲಿ ತಿಳಿಸುತ್ತಾ ಸಾಗಿದ್ದಾರೆ. ಗಾಂಧಿ ಅವರ ಚಳುವಳಿಗಳು, ಅಹಿಂಸೆ, ಕೋಮುಸೌಹಾರ್ದ, ಜಾತ್ಯಾತೀತತೆಯ ನೆಲೆಗಟ್ಟಿನ ಮೇಲೆ ನಡೆಸಿದ್ದನ್ನು "ಗಾಂಧಿ ಅವರ ಹೋರಾಟದ ವೈಖರಿ, ಸ್ವಾತಂತ್ರ್ಯ ಸಂಗ್ರಾಮ, ಅಹಿಂಸೆ, ಧರ್ಮ ಮತ್ತು ರಾಜಕೀಯ, ಅಣುಬಾಂಬ್‌ರಹಿತ ವಿಶ್ವ, ಜಾತ್ಯಾತೀತ ರಾಜ್ಯ" ಲೇಖನಗಳಲ್ಲಿ ವರ್ತಮಾನದ ದೃಷ್ಟಿಕೋನದಿಂದ ವಿಶ್ಲೇಷಿಸಿರುವುದನ್ನು ಗಮನಿಸಬಹುದಾಗಿದೆ. ಪ್ರಸ್ತುತ ಸಂದರ್ಭದಲ್ಲಿಯೂ ಗಾಂಧಿ-ಅಂಬೇಡ್ಕರ್ ಮತ್ತು ಗಾಂಧಿ-ಸುಭಾಷ್‌ಚಂದ್ರ ಬೋಸ್ ಅವರ ನಡುವಿನ ಭಿನ್ನಾಬಿಪ್ರಾಯಗಳ ಅಪವ್ಯಾಖ್ಯಾನಗಳನ್ನು ಮಾಡುತ್ತಾ, ಜನರ ಮನಸ್ಸುಗಳನ್ನು ಒಡೆಯುತ್ತಿರುವ ಮಂದಿ ಇಂದಿಗೂ ಇದ್ದಾರೆ. ಇಂಥಹ ವಿರೋಧಾತ್ಮಕ ಭಾವಗಳನ್ನು ಹೆಚ್.ಎಸ್. ದೊರೆಸ್ವಾಮಿ ಅವರು ಸಮಚಿತ್ತಭಾವದಿಂದ ಅಧ್ಯಯನ ನಡೆಸಿ, ಮಹಾನ್ ವ್ಯಕ್ತಿಗಳ ಉದಾತ್ತ ಜೀವನಾದರ್ಶಗಳನ್ನೂ

ಮತ್ತು ಅವರ ನಡೆನುಡಿಗಳನ್ನು ಅನೇಕ ನಿದರ್ಶನಗಳ ಮೂಲಕ ಇಲ್ಲಿ ವಿವರಿಸಿದ್ದಾರೆ. ವಿಶ್ವಕ್ಕೆ ಇಂದಿಗೂ ತುರ್ತಾಗಿ ಅನ್ವಯವಾಗುವ ಸಮಾಜವಾದಿ ಸಿದ್ಧಾಂತ, ವಿಶ್ವಶಾಂತಿ, ಮಾನವೀಯ ರಾಜಕಾರಣ, ಕೋಮುಸೌಹಾರ್ದದ ಬಗ್ಗೆ ಇಲ್ಲಿನ ಲೇಖನಗಳಲ್ಲಿ ಚರ್ಚಿಸಿದ್ದಾರೆ. ಹಿರಿಯರು, ಗಾಂಧಿವಾದಿಗಳು, ಸ್ವಾತಂತ್ರ್ಯ ಹೋರಾಟಗಾರರು ಆಗಿರುವ 103 ವರ್ಷಗಳ ವಯೋಮಾನದಲ್ಲಿ, ಇಂಥಹ ಎಚ್ಚೆತ್ತ ಪ್ರಜ್ಞೆ, ವರ್ತಮಾನದ ಸ್ಪಂದನೆ, ರಾಷ್ಟ್ರಪ್ರೇಮ, ಸಾಮಾಜಿಕ ಕಳಕಳಿ ಮತ್ತು ಯುವಜನರ ಮೇಲಿನ ಭರವಸೆ ಹೊಂದಿರುವ ಹೆಚ್.ಎಸ್. ದೊರೆಸ್ವಾಮಿ ಅವರು ನಮ್ಮ ನಾಡಿನ ಅದಮ್ಯ ಚೇತನವಾಗಿದ್ದಾರೆ. ಗಾಂಧಿ ಭವನದ ಶ್ರೇಯಸ್ಸು ಮತ್ತು ಯಶಸ್ಸನ್ನು ಸದಾ ಬಯಸುವ ದೊರೆಸ್ವಾಮಿ ಅವರು ಈ ಕೃತಿಯನ್ನು ಗಾಂಧಿ ಭವನದಿಂದ ಪ್ರಕಟಣೆಗೆ ಕೊಟ್ಟಿರುವುದು ಸಹ ನಮಗೆ ಸಂತೋಷದಾಯಕ ವಿಷಯವಾಗಿದೆ. ಆದ್ದರಿಂದ ಅವರಿಗೆ ಆತ್ಮೀಯ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಕೃತಿಯನ್ನು ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇಂತಹ ಅಪೂರ್ವ ಕೃತಿಗಳನ್ನು ಈ ವರ್ಷಾಚರಣೆಯಲ್ಲಿ ಪ್ರಕಟಿಸಲು ಸದಾ ಉತ್ಸುಕರಾಗಿರುವ ಗಾಂಧೀ ಭವನದ ಅಧ್ಯಕ್ಷರಾಗಿರುವ ಡಾ. ವೂಡೇ ಪಿ. ಕೃಷ್ಣ ಅವರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಕೃತಿಯ ಪರಿಷ್ಕರಣೆ ಮತ್ತು ಕರಡು ತಿದ್ದುಪಡಿಗೆ ಸಹಕರಿಸಿದ ಶ್ರೀ ಇಂದ್ರಕುಮಾರ್ ಅವರಿಗೂ ಹಾಗೂ ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡದವರಿಗೆ ಆತ್ಮೀಯ ನಮನಗಳು.


ಇಂದಿರಾ ಕೃಷ್ಣಪ್ಪ
ಗೌ॥ ಕಾರ್ಯದರ್ಶಿ

ಲೇಖಕರ ನುಡಿ

ಗಾಂಧೀಜಿ ಅವರನ್ನು ಕುರಿತು ಬರೆದಿರುವ ಈ ಲೇಖನಗಳು ನನ್ನ ಅಧ್ಯಯನ ಮತ್ತು ಅನುಭವದಿಂದ ಹೊರಹೊಮ್ಮಿದ ಸಾಹಿತ್ಯ. ನಾನು ಇಲ್ಲಿ ಪ್ರಸ್ತಾಪಿಸಿರುವ ವಿಚಾರಗಳನ್ನು ಎಲ್ಲ ಕನ್ನಡಿಗರೂ ಅದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳು ಅಧ್ಯಯನ ಮಾಡಲಿ ಎಂಬುದು ನನ್ನ ಸದಾಶಯ. ಗಾಂಧೀಜಿ ಒಬ್ಬ ಅಸಾಧಾರಣ ಬುದ್ಧಿವಂತರು. ಸಾಮಾನ್ಯ ಜನರನ್ನು ಒಗ್ಗೂಡಿಸಿ ಭಾರತ ಸ್ವಾತಂತ್ರ್ಯ ಸಮರದಲ್ಲಿ ತೊಡಗಿಸಿದ ಕುಶಲಮತಿ, ಅದ್ವಿತೀಯ ಸಂಘಟನಕಾರರು. ಬಡವರು, ಶೋಷಣೆಗೊಳಗಾದವರ ಒಳಿತಿಗಾಗಿಯೇ ಸ್ವಾತಂತ್ರ್ಯ ಬೇಕು ಎಂದವರು. ಸ್ವರಾಜ್ಯ ಬಂದ ಮೇಲೆ, ಈ ತುಳಿತಕ್ಕೊಳಗಾದವರ ಉಜ್ವಲ ಭವಿಷ್ಯವನ್ನು ಹಸನಾಗಿಸುವುದು ಸ್ವತಂತ್ರ ಸರ್ಕಾರದ ಕರ್ತವ್ಯವೆಂಬುದು ಸಾರಿ ಹೇಳಿ, ದೇಶದಲ್ಲಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವವನ್ನು ಪ್ರಾಮಾಣಿಕವಾಗಿ ಕಾರ್ಯರೂಪಕ್ಕಿಳಿಸುವುದೇ ಆದ್ಯತೆಯ ಪವಿತ್ರ ಕಾರ್ಯ ಎಂದು ಸಾರಿದವರು. ಸ್ವಾತಂತ್ರ್ಯ ಬಂದು 75 ವರ್ಷಗಳೇ ಆದರೂ ಅವರ ಆಶಯಗಳು ಕೈಗೂಡಿಲ್ಲ. ಆದ್ದರಿಂದ ಯುವಜನರಿಗೆ ಗಾಂಧಿ ಅವರ ಆಶಯಗಳನ್ನು ಸಾಕಾರಗೊಳಿಸುವ ಸಂಕಲ್ಪ ಮಾಡಲಿ ಎಂದು ನಾನು ಆಶಿಸುತ್ತೇನೆ.

ಗಾಂದಿ ಸ್ಮಾರಕ ನಿಧಿ ಈ ಪುಸ್ತಕವನ್ನು ಪ್ರಕಟಿಸಲು ಒಪ್ಪಿದ್ದಕ್ಕಾಗಿ ನಿಧಿಯ ಅಧ್ಯಕ್ಷರನ್ನೂ, ಕಾರ್ಯದರ್ಶಿ ಅವರನ್ನು ಅಭಿನಂದಿಸುತ್ತೇನೆ.

ಡಾ. ಎಚ್.ಎಸ್. ದೊರೆಸ್ವಾಮಿ



ಸುಖ-ಸಂತೋಷಗಳಿಲ್ಲದೇ ಮಾಡಿದ ಸೇವೆಯು
ಸೇವಕನಿಗೂ ಸೇವ್ಯನಿಗೂ ಉಪಯುಕ್ತವಿರುವದಿಲ್ಲ.
ಆದರೆ ಸಂತೋಷದಿಂದ ಸಲ್ಲಿಸಿದ ಸೇವೆಯಲ್ಲಿ ಎಲ್ಲವೂ
ಅಡಗಿರುತ್ತದೆ, ಉಪಯುಕ್ತವೆನಿಸುತ್ತದೆ. ಅದರೆದುರು
ಸ್ಥಾನಮಾನಗಳು, ಸುಖವು ಮಹತ್ವದ್ದೆನಿಸುವುದಿಲ್ಲ.

– ಮಹಾತ್ಮ ಗಾಂಧಿ

ಪರಿವಿಡಿ

ಗಾಂಧೀಜಿ ಅವರ ಹಿಂದ್ ಸ್ವರಾಜ್ ಒಂದು ಅವಲೋಕನ

ಗಾಂಧೀಜಿ ಹಿಂದ್ ಸ್ವರಾಜ್‌ನ್ನು 1906ರಲ್ಲಿ ಇಂಗ್ಲೆಂಡಿನಿಂದ ಭಾರತಕ್ಕೆ ಹಡಗಿನಲ್ಲಿ ಬರುವಾಗ ಬರೆದರು. ಈ ಚಿಕ್ಕ ಪುಸ್ತಕವನ್ನು **Dialogue on the Sea** ಎಂದೂ ಕರೆಯಲಾಗುತ್ತದೆ. ಈ ಪುಸ್ತಕ ಸಂಭಾಷಣೆಯ ರೂಪದಲ್ಲಿದೆ. ಈ ಪುಸ್ತಕದಲ್ಲಿ ಅವರು **(Means and Aims)** ಮಾರ್ಗ ಮತ್ತು ಗುರಿಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ಬ್ರಿಟಿಷರನ್ನು ನ್ಯಾಯಸಮ್ಮತ ರೀತಿಯಲ್ಲಾಗಲಿ, ದುಷ್ಟತನದಿಂದಾಗಲಿ ಓಡಿಸಿಬಿಡಬೇಕು ಎಂದು ಹೇಳುವವರು ಇದ್ದಾರೆ. 'ಬ್ರಿಟಿಷರನ್ನು ನಾವು ದುಷ್ಟತನದಿಂದ ಓಡಿಸುವೆವಾದರೆ, ಸ್ವಾತಂತ್ರ್ಯ ಬಂದ ಮೇಲೂ ಇಂಗ್ಲೀಷರಿಲ್ಲದ ಇಂಗ್ಲೀಷ್ ಆಳ್ವಿಕೆ ಮುಂದುವರೆಯಬಹುದು' ಎಂದಿದ್ದಾರೆ ಗಾಂಧೀಜಿ.

ಗಾಂಧೀಜಿ ಮಾತಿಗಿಂತ ಅವರ ಕೃತಿಯಿಂದ ದೊಡ್ಡದಾಗಿ ಬೆಳೆದರು. ತತ್ವಗಳ ಅನ್ವೇಷಣೆಗಿಂತ ತತ್ವಾನುಷ್ಠಾನ ಅವರಿಗೆ ಹೆಚ್ಚು ಮುಖ್ಯವಾಗಿ ಕಂಡಿತು. ತರ್ಕಕ್ಕಿಂತ ಸೃಜನಾತ್ಮಕ ಜೀವನ ನಡೆಸುವುದರಲ್ಲಿ ಅವರಿಗೆ ಹೆಚ್ಚಿನ ಶ್ರದ್ಧೆ ಇತ್ತು. ಹಿಂದ್ ಸ್ವರಾಜ್‌ನಲ್ಲಿ ಗಾಂಧೀಜಿ ಪಾಶ್ಚಾತ್ಯ ಆಧುನಿಕ ನಾಗರಿಕತೆಯ ವಿರುದ್ಧ ಸೊಲ್ಲೆತ್ತಿದ್ದಾರೆ. 'ನಮ್ಮೊಳಗಿರುವ ಹಿಂಸಾ ಪ್ರವೃತ್ತಿಯನ್ನು ದೂರಮಾಡದಿದ್ದರೆ, ಬಾಹ್ಯದಲ್ಲಿ ಕಾಣುವ ಹಿಂಸಾಚಾರವನ್ನು ಭಾರತೀಯರಾದ ನಾವು ತಡೆಗಟ್ಟಲಾರೆವು' ಎಂದಿದ್ದಾರೆ ಗಾಂಧೀಜಿ.

ಪುಸ್ತಕದ ಕೊನೆಯಲ್ಲಿ ಈ ಪುಸ್ತಕದ ಸಂದೇಶವೇನು ಎಂಬುದನ್ನು ತಿಳಿಸಿದ್ದಾರೆ. **Home Rule**ನ ನಿಜವಾದ ಅರ್ಥ ಸ್ವಯಮಾಡಳಿತ ಅಥವಾ ಆತ್ಮ ಸಂಯಮ. ಸ್ವರಾಜ್ಯವೆಂದರೆ ನಮ್ಮನ್ನು ನಾವು ಹತೋಟಿಯಲ್ಲಿಟ್ಟುಕೊಳ್ಳುವುದು. ಪ್ರತಿಯೊಬ್ಬರೂ ಜವಾಬ್ದಾರಿಯುತ ಪ್ರಜೆಯಾಗುವುದು. ಇದನ್ನು ನಾವು ನಮ್ಮ ಆತ್ಮ ಬಲದಿಂದ

ಸಾಧಿಸಬೇಕು. ತನ್ನ ಮೇಲೆ ತನಗೆ ಹತೋಟಿ ಇಲ್ಲದವನಿಗೆ ಇತರರನ್ನು ಹತೋಟಿಗೆ ತರುವುದು ಹೇಗೆ ಸಾಧ್ಯವಾದೀತು? ನಮ್ಮ ಗುರಿ ರಾಜಕೀಯ ಸ್ವಾತಂತ್ರ್ಯ ಮಾತ್ರವಲ್ಲ; ಆರ್ಥಿಕ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಸ್ವಾತಂತ್ರ್ಯವನ್ನೂ ನಾವು ಸಾಧಿಸಬೇಕು.

ನಾಗರಿಕತೆಯ ನಿಜವಾದ ಗುರಿ ಎಂದರೆ ನಮ್ಮ ಮನಸ್ಸಿನ ಮೇಲೆ ಪ್ರಭುತ್ವ ಸಾಧಿಸುವುದು. ಮನಸ್ಸನ್ನು ನಿಗ್ರಹಿಸುವ ಸಾಮರ್ಥ್ಯವನ್ನು ಪಡೆದುಕೊಳ್ಳುವುದು. ನಾಗರಿಕತೆ ನಮ್ಮ ಕರ್ತವ್ಯ ನಿಷ್ಠೆಯನ್ನು ಬೆಳೆಸಬೇಕು. ನೈತಿಕತೆಯನ್ನು ವೃದ್ಧಿ ಮಾಡಬೇಕು. ಗುಜರಾತಿ ಭಾಷೆಯಲ್ಲಿ ನಾಗರಿಕತೆ ಎಂದರೆ ಸನ್ನಡತೆ, ಸ್ವರಾಜ್ಯವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅನುಭವಕ್ಕೆ ತಂದುಕೊಳ್ಳಬೇಕು. ರೈಲು, ಆಸ್ಪತ್ರೆ, ಪೊಲೀಸ್ ಸ್ಟೇಷನ್ ಇವು ಪ್ರಗತಿಯ ಲಕ್ಷಣಗಳಲ್ಲ ಎಂದರು ಗಾಂಧೀಜಿ. ಆದರೆ ಅವರು ರೈಲಿನಲ್ಲೇ ಪ್ರವಾಸ ಮಾಡುತ್ತಿದ್ದರು. ಇದು ವಿರೋಧಾಭಾಸ ಅಲ್ಲವೇ? ರೈಲ್ವೆ ವ್ಯವಸ್ಥೆ ಇಲ್ಲದಿದ್ದರೆ ಬ್ರಿಟಿಷರು ಭಾರತವನ್ನು ಆಳಲು ಆಗುತ್ತಿರಲಿಲ್ಲ. ರೈಲಿನಿಂದ ರೋಗ ಹರಡುತ್ತದೆ. ಅವು ಪ್ಲೇಗ್ ಹರಡಲು ಕಾರಣವಾಗಿದೆ. ರೈತರು ಬೆಳೆದದ್ದನ್ನೆಲ್ಲ ವರ್ತಕರು ಹಾಗೂ ಸರ್ಕಾರ ನಡೆಸುವವರು ಬಳಿದು ಹಾಕಿಕೊಂಡು ರೈಲ್ವೆ ಮೂಲಕ ಸಾಗಿಸಿ ಸೈನ್ಯಕ್ಕೆ ಸರಬರಾಜು ಮಾಡುತ್ತಾರೆ.

ನಮ್ಮ ತೀರ್ಥಯಾತ್ರೆಯ ತಾಣಗಳು ರೈಲಿನಿಂದ ತನ್ನ ಪಾವಿತ್ರ್ಯತೆ ಕಳೆದುಕೊಂಡಿವೆ. ಅದು ಹಗಲುಗಳ್ಳರನ್ನು ಸೃಷ್ಟಿಸಿದೆ. ಯಾತ್ರೆಗೆ ಬರುವವರು ತೀರ್ಥ ಕ್ಷೇತ್ರ ಸೇರುವ ಮೊದಲೇ ರೈಲುಗಳಲ್ಲಿ ಕಳ್ಳರುಕಾಕರು, ಜೇಬುಗಳ್ಳರು, ಕೊಲೆಗಡುಕರು ಅಲ್ಲಿ ಬಂದು ಜಮಾಯಿಸಿರುತ್ತಾರೆ. ಮನುಷ್ಯ ತಿನ್ನಬಾರದ್ದನ್ನು ತಿಂದು ರೋಗ ಬರಿಸಿಕೊಳ್ಳುತ್ತಾನೆ. ಪರಿಣಿತ ವೈದ್ಯರು ಅದನ್ನು ವಾಸಿಮಾಡುತ್ತಾರೆ. ವೈದ್ಯ ಇಲ್ಲದಿದ್ದರೆ ಅವನಿಗೆ ಪ್ರಕೃತಿ ತಾನೇ ಪಾಠ ಕಲಿಸುತ್ತಿತ್ತು. ಆಗ ಮಾನವ ತನ್ನ ಸ್ವಾಸ್ಥ್ಯದ ಮೇಲೆ ಪ್ರಭುತ್ವ ಸಾಧಿಸುತ್ತಿದ್ದ. ಮನುಷ್ಯ ಕೆಟ್ಟ ನಡತೆಯಿಂದ ದೂರ ಇರುತ್ತಿದ್ದ. ಆಸ್ಪತ್ರೆಗಳು ಪಾಪಕರ್ಮಗಳನ್ನು ಪ್ರಚಾರ ಮಾಡುವ ಸಂಸ್ಥೆಗಳು ಅಥವಾ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ

ಜನ ತಮ್ಮ ಆರೋಗ್ಯದ ಬಗೆಗೆ ಅಜಾಗರೂಕರಾಗುತ್ತಾರೆ. ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ಕಡಿಮೆ ನಿಗಾ ಕೊಡುತ್ತಾರೆ. ಸಮಾಜದಲ್ಲಿ ಅನೈತಿಕತೆ ವೃದ್ಧಿಸುತ್ತದೆ. ರೈಲು ಭಾರತಕ್ಕೆ ಬಂದದ್ದು ಜನರ ಅನುಕೂಲಕ್ಕಾಗಿ ಅಲ್ಲ. ಬ್ರಿಟಿಷ್ ಮಿಲಿಟರಿಯ ಸ್ಥಳಾಂತರಕ್ಕಾಗಿ, ಅವರಿಗೆ ಆಹಾರ ಪದಾರ್ಥಗಳನ್ನೂ, ಶಸ್ತ್ರಾಸ್ತ್ರಗಳನ್ನೂ ಪೂರೈಸುವ ಸಲುವಾಗಿ. ಆಸ್ಪತ್ರೆಗಳು ಶೋಷಣೆಯ ತಾಣಗಳು. ಎಲ್ಲ ಬಗೆಯ ರೋಗಿಗಳೂ ಒಂದೇ ಆವರಣದಲ್ಲಿ ಇರುವುದರಿಂದ, ಆಸ್ಪತ್ರೆಗಳಲ್ಲಿ ಬೇರೆ ಬೇರೆ ಸೋಂಕು ರೋಗಗಳು ಅಲ್ಲಿರುವ ರೋಗಿಗಳಿಗೆ ಒಬ್ಬರಿಂದ ಒಬ್ಬರಿಗೆ ಹರಡುವ ಅವಕಾಶಗಳು ಹೆಚ್ಚು.

ಸೆರೆಮನೆಗಳು ಹೆಚ್ಚಾದುದರ ಅರ್ಥ ಜನರು ಅನೀತಿ-ಯುತರಾಗುತ್ತಿದ್ದಾರೆ, ಹಿಂಸಾಚಾರಿಗಳಾಗುತ್ತಿದ್ದಾರೆ, ದುಷ್ಟರಾಗುತ್ತಿದ್ದಾರೆ ಎಂದೇ ಅಲ್ಲವೇ? ಪೊಲೀಸ್ ಠಾಣೆಗಳು, ಸೆರೆಮನೆಗಳು, ನ್ಯಾಯಾಲಯಗಳು, ಆಸ್ಪತ್ರೆಗಳು, ಹೆಚ್ಚಿತೆಂದರೆ ಅದು ಪ್ರಗತಿಯ ಚಿಹ್ನೆಯಲ್ಲ. ಜನರು ಚಾರಿತ್ರ್ಯಹೀನರಾಗುತ್ತಿದ್ದಾರೆ, ಆರೋಗ್ಯ ನಿಯಮಗಳನ್ನು ಪಾಲಿಸುತ್ತಿಲ್ಲ. ಆಹಾರ, ವಿಹಾರಗಳಲ್ಲಿ ಸಂಯಮದಿಂದಿರಬೇಕೆಂಬುದನ್ನು ಮರೆತಿದ್ದಾರೆ ಎಂದೇ ಇದರ ಅರ್ಥ.

ಆಧುನಿಕ ಶಿಕ್ಷಣ ಪದ್ಧತಿ ಸಮರ್ಥರಾದ ಇಂಜಿನಿಯರ್‌ಗಳನ್ನು, ಡಾಕ್ಟರುಗಳನ್ನು, ವಿಜ್ಞಾನಿಗಳನ್ನು, ಆರ್ಥಿಕ ತಜ್ಞರನ್ನು ರೂಪಿಸಲು ಸಹಕಾರಿಯಾಗಿದೆ. ಆದರೆ ಅದು ಒಳ್ಳೆಯ ಮಾನವರನ್ನು ಸೃಷ್ಟಿಸುವುದರಲ್ಲಿ ಸೋತಿದೆ. ನಾವು ಎಲ್ಲ ಅಂಶಗಳನ್ನೂ ವರ್ಗೀಕರಿಸಿ ನೋಡಲು ತೊಡಗಿದ್ದೇವೆ. ಅದನ್ನು ಬಿಟ್ಟು ಇಡಿಯಾಗಿ ನೋಡುವುದನ್ನು ಕಲಿಯಬೇಕು. ಆಗ ನಾವು ಜೀವನವನ್ನು ವರ್ಗೀಕರಣವಲ್ಲದ ಮಾರ್ಗದಲ್ಲಿ ಇಡಿಯಾಗಿ ನೋಡಲು ಸಾಧ್ಯವಾಗುತ್ತದೆ. ವಿಜ್ಞಾನಿ ಕ್ಯಾಪ್ರಾ ಅವರ ಇತ್ತೀಚಿನ ಗ್ರಂಥ **Turning Point** ನಲ್ಲಿ ಸಾಮಾಜಿಕ, ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಕೊಂಡವರಿಗೆ ಒಂದು ಹೊಸ ವಿಶ್ವ ಅವಲೋಕನ

ಮಾರ್ಗವನ್ನು ಸೂಚಿಸಿದ್ದಾರೆ. ಅವರ ಈ ಅಭಿಪ್ರಾಯಗಳು ಗಾಂಧೀಜಿಯ ಆಲೋಚನೆಗಳಿಗೆ ಸಂಪರ್ಕ ಕಲ್ಪಿಸುತ್ತವೆ.

ಸ್ಪರ್ಧಾತ್ಮಕ ಜೀವನಕ್ರಮ ಬಿಟ್ಟು ಸಹಕಾರ ನೀತಿಗೆ, ಆಕಾಶದೆತ್ತರಕ್ಕೆ ಬೃಹತ್ತಾಗಿ ಬೆಳೆಯುವ ಬದಲು ಕಣ್ಣಿನ ನೋಟಕ್ಕೆಟಕುವ ಭೌತಿಕ ಬೆಳವಣಿಗೆಗೆ, ಕೇಂದ್ರೀಕೃತ ಅಧಿಕಾರ ಕೈಬಿಟ್ಟು ವಿಕೇಂದ್ರಿತ ವ್ಯವಸ್ಥೆಗೆ, **Hard Technology**ಯಿಂದ **Soft Technology**, ವಿಶೇಷ ತಜ್ಞತೆ ಕೈಬಿಟ್ಟು, ವೈವಿಧ್ಯಮಯ ಅಧ್ಯಯನ ಮಾರ್ಗಕ್ಕೆ ತೊಡಗಬೇಕು ಎಂಬುದು ಕ್ಯಾಪ್ರಾ ವಿಚಾರ. ಆಧುನಿಕ ಶಿಕ್ಷಣ ಪದ್ಧತಿ ಬುದ್ಧಿವಂತಿಕೆಯನ್ನು ವಿವೇಕಕ್ಕೆ ಸಮೀಕರಿಸುತ್ತದೆ. ಇದೇ ಒಂದು ದುರಂತ. ಅದು ಶುದ್ಧ ತಪ್ಪು. ಒಬ್ಬರಿಗೆ ಬಹಳ ಕಡಿಮೆ ಬುದ್ಧಿವಂತಿಕೆ ಇರಬಹುದು. ಪ್ರಾಥಮಿಕ ವಿದ್ಯಾಭ್ಯಾಸದಲ್ಲೂ ನಪಾಸಾಗುವಷ್ಟು. ಆದರೆ ಅಂತಹವರು ಕುಶಾಗ್ರಮತಿಗಳಾಗಿರಲು ಸಾಧ್ಯ. ನಮ್ಮ ಮೆದುಳಿನ ಎಡ ಅರ್ಧಭಾಗ ಬುದ್ಧಿವಂತಿಕೆಯನ್ನು ಬೆಳೆಸುತ್ತದೆ. ಬಲಭಾಗದ ಮೆದುಳಿನ ಬೆಳವಣಿಗೆಯಿಂದ ವಿವೇಕ ಬೆಳೆಯುತ್ತದೆ. ಈ ಎರಡನ್ನೂ ಒಬ್ಬನೇ ವ್ಯಕ್ತಿ ಏಕಕಾಲದಲ್ಲಿ ಬೆಳೆಸಿಕೊಳ್ಳಬಹುದು. ಇದು ಸಾಧ್ಯವೆಂದು ಐನ್‌ಸ್ಟೀನ್ ಮತ್ತು ಷೂಮೇಕರ್ ಹೇಳುತ್ತಾರೆ. ಆದರೆ ಆಧುನಿಕ ಶಿಕ್ಷಣ, ವಿವೇಕದ ಬೆಳವಣಿಗೆಗೆ ಒತ್ತುಕೊಡುತ್ತಿಲ್ಲ. ಅದನ್ನು ಉಪೇಕ್ಷೆ ಮಾಡಲಾಗುತ್ತದೆ. ಹೀಗಾಗಿ ಬುದ್ಧಿವಂತರಿಗೆ ವಿವೇಕ ಬಹಳ ಕಡಿಮೆ. ಐನ್‌ಸ್ಟೀನ್ ಅವರನ್ನು ಅವರು ಕಲಿಯುತ್ತಿದ್ದ ಕಾಲದಲ್ಲಿ **Lazy Dog** ಎಂದು ಅವರ ಪ್ರಾಧ್ಯಾಪಕರು ಕರೆಯುತ್ತಿದ್ದರಂತೆ. ಆದರೆ ಅವರು ಕ್ರಮೇಣ ವಿವೇಕ ಬೆಳೆಸಿಕೊಂಡರು.

ಒಬ್ಬ ಅನಕ್ಷರಸ್ಥ ಹಳ್ಳಿ ದೋಭಿ, ಅಡುಗೆ ಮನೆಗೆ ಸೀಮಿತವಾಗಿರುವ ಗೃಹಿಣಿ, ನನಗಿಂತ ನಿಮಗಿಂತ ಹೆಚ್ಚಿನ ವಿವೇಕಿಗಳಾಗಿರುತ್ತಾರೆ. ಮನಮೋಹನಸಿಂಗ್, ಅಡ್ವಾನಿ, ಸುಷ್ಮಾ ಸ್ವರಾಜ್. ಚಿದಂಬರಂ ತಮ್ಮ **intellect** ಬೆಳೆಸಿಕೊಂಡು ನಮ್ಮ ಹಣೆಬರಹ ಬರೆಯಲು ಹೊರಟಿದ್ದಾರೆ. ಆದರೆ ಬುದ್ಧ, ಕ್ರಿಸ್ತ, ಬಸವ, ಗಾಂಧಿ, ಲೆನಿನ್ ಇವರು ನಮ್ಮ ಇತಿಹಾಸ ರೂಪಿಸಿದ್ದಾರೆ. ಮೌಂಟ್ ಬ್ಯಾಟನ್ ಕೋಮುಸೌಹಾರ್ದಕ್ಕಾಗಿ ಗಾಂಧಿಯವರು ಮಾಡಿದ ಕೆಲಸವನ್ನು

ಎದೆತುಂಬಿ ಹೊಗಳಿದಾಗ ಗಾಂಧಿಯವರು ಹೇಳಿದ್ದೇನು? :- 'ನಾವು ದೇವರ ಕೈನ ಬೊಂಬೆಗಳು. ಅವನು ಕುಣಿಸಿದಂತೆ ಕುಣಿಯುವುದು ನಮ್ಮ ಕೆಲಸ.' ಈ ನಮ್ರತೆ ಎಲ್ಲರಲ್ಲೂ ಬೆಳೆಯಬೇಕು. ಹಿಂದ್ ಸ್ವರಾಜ್ (**Hind Swaraj**) ಆಧುನಿಕ, ಪಾಶ್ಚಾತ್ಯ, ಪೌರ್ವಾತ್ಯ ನಾಗರಿಕತೆಗಳನ್ನು ತೀವ್ರವಾಗಿ ಖಂಡನೆ ಮಾಡುತ್ತದೆ. ಈ ಆಧುನಿಕ ನಾಗರಿಕತೆಯಿಂದ ಪಾರಾದರೆ ಮಾತ್ರ ಭಾರತದ ಭವಿಷ್ಯ ಭವ್ಯವಾಗಬಹುದು.

ಭಾರತದ ದಾಸ್ಯದ ಬಿಡುಗಡೆ ಮಾನವನ ವಿಮೋಚನೆಗೆ ನಾಂದಿ ಹಾಡುತ್ತದೆ ಎಂಬುದು ಗಾಂಧೀಜಿಯ ಅಭಿಪ್ರಾಯವಾಗಿತ್ತು. ಅಹಿಂಸೆ ವಿಶ್ವಮಾನ್ಯವಾಗುವುದಾದರೆ, ದೇವರು ಸ್ವರ್ಗವನ್ನು ಆಳುವಂತೆ ಭೂಲೋಕವನ್ನೂ ಆಳುವವನು, ಎಂದು ಅವರು ಭಾವಿಸಿದ್ದರು. ವೈಯಕ್ತಿಕ ಸ್ವಾತಂತ್ರ್ಯವೇ ಸ್ವರಾಜ್ಯದ ಗುರಿ. ನಿಸರ್ಗವನ್ನು ಲೂಟಿ ಮಾಡುವ ಮೂಲಕ ಸ್ವಾರ್ಥಿ ಮಾನವ ಮನುಷ್ಯಕುಲಕ್ಕೇ ಕುಠಾರಪ್ರಾಯನಾಗಿದ್ದಾನೆ. ಅಹಿಂಸೆಯನ್ನು ನಾವು ಅಭ್ಯಾಸ ಮಾಡುವ ಮೂಲಕ ಮನುಕುಲವನ್ನು ಸಂರಕ್ಷಿಸಬೇಕು. ನಾವೀಗ ಪ್ರಕೃತಿಯ ಲೂಟಿಯಾಗುವುದನ್ನು ಅಸಹಾಯಕರಂತೆ ನೋಡುತ್ತಾ ಕುಳಿತಿದ್ದೇವೆ. ನವನಾಗರಿಕತೆ ಪಾಶ್ಚಾತ್ಯದಿಂದ ಜನ್ಮ ಪಡೆಯಿತು. ಈ ನವನಾಗರಿಕತೆಯನ್ನು ಕೊನೆಗಾಣಿಸುವ ಕೆಲಸ ಭಾರತದಿಂದ ಆಗಬೇಕು. ಅದನ್ನು ಕೊನೆಗಾಣಿಸದಿದ್ದರೆ, ಇಡೀ ವಿಶ್ವದ ಮಾನವರ ಸ್ವಯಂನಾಶಕ್ಕೆ ಅದು ಕಾರಣವಾಗುತ್ತದೆ.

ಈ ಅಣುಯುಗದಲ್ಲಿ ನಮಗಿರುವುದು ಎರಡೇ ಆಯ್ಕೆ-ವಿಶ್ವ ಕುಟುಂಬದ ರಚನೆ ಇಲ್ಲವೇ ಸರ್ವನಾಶ.

ಗಾಂಧೀಜಿ ಭಾರತದ ರಾಜಕೀಯದಲ್ಲಿ ಪ್ರಮುಖ ಸ್ಥಾನ ಪಡೆದ ಮೇಲೆ, ಜನರು ಅವರು ಬರೆದ 'ಹಿಂದ್ ಸ್ವರಾಜ್' ಓದಲು ಆರಂಭಿಸಿದರು. ಪುಸ್ತಕ 8 ಸಾರಿ ಪುನರ್ಮುದ್ರಣಗೊಂಡಿತು. ಈ ಪುಸ್ತಕದಲ್ಲಿ ಗಾಂಧೀಜಿ ವ್ಯಕ್ತಪಡಿಸಿದ ಅನೇಕ ಅಭಿಪ್ರಾಯಗಳನ್ನು ಬಹಳ ಜನ ಒಪ್ಪಲಿಲ್ಲ. ಒಪ್ಪದಿದ್ದವರಲ್ಲಿ ಜವಾಹರ್‌ಲಾಲ್ ನೆಹರು ಕೂಡ ಒಬ್ಬರು. ಆದರೆ ಗಾಂಧೀಜಿ ತಾವು ಬರೆದಿರುವುದರಲ್ಲಿ ಒಂದು

ಪದವನ್ನೂ ತೆಗೆದುಹಾಕುವುದಿಲ್ಲ ಎಂದರು. ಆದರೆ ಇತರ ಟೀಕಾಕಾರರ ಆಶಯದಂತೆ ತಾವು ಆಧುನಿಕ ಸಂಸ್ಕೃತಿಯ ವಿರೋಧವಾಗಿ ಈ ಕೂಡಲೇ ದಾಳಿ ನಡೆಸುವುದಿಲ್ಲವೆಂದೂ ಸ್ಪಷ್ಟಪಡಿಸಿದರು.

ನಾನು ಪ್ರತಿಪಾದಿಸುವ ರೀತಿಯ ಸ್ವರಾಜ್ಯವನ್ನು ಸ್ಥಾಪಿಸುವ ಗುರಿ ಈಗ ಸದ್ಯಕ್ಕಿಲ್ಲ. ಭಾರತ ಇನ್ನೂ ಅಷ್ಟು ಪ್ರಬುದ್ಧವಾಗಿಲ್ಲ. ನಾನು ಸ್ವರಾಜ್ಯ ಪರಿಕಲ್ಪನೆಯನ್ನು ಜನರ ಮನಸ್ಸಿನಲ್ಲಿ ಮೂಡಿಸಲು ಪ್ರಯತ್ನಪಡುತ್ತೇನೆ. ಸ್ವರಾಜ್ಯ ಎಂದರೆ ದೇಶವನ್ನು ಸ್ವತಂತ್ರಗೊಳಿಸುವುದು ಮಾತ್ರ ಎಂದು ಯಾರೂ ಅರ್ಥೈಸಬಾರದು. ಗಾಂಧೀಜಿಯವರ ಕಲ್ಪನೆಯ ಸ್ವರಾಜ್ಯದ ಬಗೆಗೆ ಅನೇಕ ಪ್ರಯೋಗಗಳು ವಿಶ್ವದ ಬೇರೆ ಬೇರೆ ಕಡೆ ನಡೆಯುತ್ತಿವೆ.

ಬ್ರಿಟಿಷ್ ಅಧಿಕಾರಿಗಳನ್ನು ಕೊಲ್ಲುವ ಮೂಲಕ ಇಂಗ್ಲೀಷರನ್ನು ದೇಶ ಬಿಟ್ಟು ಓಡಿಸಿ, ಸ್ವರಾಜ್ಯವನ್ನು ಪಡೆಯುವೆವು ಎಂದು ಹೇಳುವ ಹಿಂಸಾವಾದಿಗಳನ್ನು 'ನೀವು ಅವಿವೇಕಿಗಳು' ಎಂದರು ಗಾಂಧೀಜಿ. ಯಾವುದೇ ವಿಶ್ವಾಸಘಾತಕತನದ ಕೃತ್ಯದಿಂದ ಭಾರತಕ್ಕೆ ಯಾವುದೇ ಪ್ರಯೋಜನ ಆಗುವುದಿಲ್ಲ. ಇಂತಹ ಕೊಲೆಗಡಕತನದಿಂದ, ಬ್ರಿಟಿಷರು ಭಾರತ ಬಿಟ್ಟು ಹೊರಟುಹೋಗುತ್ತಾರೆ ಎಂದೇ ಇಟ್ಟುಕೊಳ್ಳೋಣ. ಅನಂತರ ನಮ್ಮಲ್ಲಿ ಆಡಳಿತ ನಡೆಸುವವರು ಯಾರು? 'ಈ ಕೊಲೆಗಡುಕರೇ', ಎಂಬುದು ಗಾಂಧೀಜಿಯ ಉತ್ತರ. ಕೊಲೆಗಡುಕರ ರಾಜ್ಯದಲ್ಲಿ ಸುಖ ಸಂತೋಷ ಇರಲು ಸಾಧ್ಯವೇ? ಕೊಲೆಗಡುಕರು ಬಿಳಿಯರಿರಲಿ, ಕರಿಯ ಜನರಿರಲಿ ಕೊಲೆಗಡುಕರ ಆಡಳಿತದಿಂದ ಭಾರತಕ್ಕೆ ಯಾವ ಪ್ರಯೋಜನವೂ ಇಲ್ಲ.

ಭಾರತ ಸ್ವಾತಂತ್ರ್ಯ ಪಡೆದಮೇಲೆ ಭಾರತೀಯರು ಹೇಗೆ ನಡೆದುಕೊಳ್ಳಬೇಕು ಎಂದು ಚಿಂತಿಸಲು ಈ ಹಿಂಸಾವಾದದ ಪ್ರಕರಣಗಳು ಗಾಂಧಿಯವರನ್ನು ಚಿಂತನೆಗೀಡು ಮಾಡಿದವು. ಇದು ಗಾಂಧೀಜಿಯನ್ನು ಸಾಧನೆ ಮತ್ತು ಗುರಿ ಬಗೆಗೆ ಯೋಚಿಸುವಂತೆ ಮಾಡಿತು.

ಗಾಂಧೀಜಿ ರಾಜಕೀಯ ಹೋರಾಟದಲ್ಲಿ ಅಹಿಂಸೆಯನ್ನು ಪ್ರಯೋಗ ಮಾಡಿದ ಮೊದಲಿಗರು. ಇದು ನಮ್ಮ ಹೆಗ್ಗಳಿಕೆ. ಅನಂತರದಲ್ಲಿ ಈ ಪ್ರಯೋಗ ಮಾಡಿ ಗುರಿಯನ್ನು ತಲುಪಿದವರು ದಕ್ಷಿಣ ಆಫ್ರಿಕದ ನೀಗ್ರೊ ನಾಯಕ ಮಂಡೇಲಾ ಮತ್ತು ಅಮೇರಿಕದ ನೀಗ್ರೋ ನಾಯಕ ಲೂಥರ್ ಕಿಂಗ್ (ಜ್ಯೂನಿಯರ್). ಮಂಡೇಲಾ 27 ವರ್ಷ ಕಾಲ ಸೆರೆಮನೆ ವಾಸ ಅನುಭವಿಸಿದರು. ಅವರು ಎಂದೂ ಆಡಳಿತ ನಡೆಸುತ್ತಿದ್ದ ಬಿಳಿಯರ ಮೇಲೆ ಹಿಂಸಾಚಾರ ನಡೆಸಲಿಲ್ಲ. ಕಿಂಗ್ ಬಿಳಿಯರಿಂದ ನೀಗ್ರೋಗಳಿಗೆ ಆಗುತ್ತಿದ್ದ ಅಪಮಾನವನ್ನು ತಡೆಗಟ್ಟುವುದಕ್ಕಾಗಿ ಮತ್ತು ನೀಗ್ರೋಗಳ ಹಕ್ಕು ಬಾಧ್ಯತೆಯನ್ನು ಪಡೆಯಲು ಅಹಿಂಸಕ ಹೋರಾಟ ನಡೆಸಿ ಅದರಲ್ಲಿ ಜಯಗಳಿಸಿದರು. ಇದೇ ರೀತಿಯ ಅಹಿಂಸಕ ಹೋರಾಟ ನಡೆಸಿ 26 ವರ್ಷಕಾಲ ಗೃಹ ಬಂಧನದಲ್ಲಿದ್ದ ಆಂಗ್ ಸ್ಯಾಂಗ್ ಸೂಕಿ ಅಹಿಂಸಕ ಹೋರಾಟದಲ್ಲಿ ಜಯಗಳಿಸಿದ ಏಕೈಕ ಮಹಿಳೆ.

ಅಹಿಂಸಾವೃತ್ತಿಯನ್ನು ಹಿಂದು, ಕ್ರಿಶ್ಚಿಯನ್, ಇಸ್ಲಾಂ, ಬೌದ್ಧ, ಯಹೂದಿ ಜನಾಂಗಗಳು ಪ್ರತಿಪಾದಿಸುವುವಾದರೂ, ಕ್ರಿಶ್ಚಿಯನ್ ಮತ್ತು ಇಸ್ಲಾಂಗಳು ನಡೆಸಿರುವಷ್ಟು ಯುದ್ಧಗಳನ್ನು ಬೇರೆ ಯಾರೂ ನಡೆಸಿಲ್ಲ. ಯುದ್ಧವೆಂದರೆ ಹಿಂಸೆಯ ಪರಾಕಾಷ್ಠತೆ. ಗಾಂಧೀಜಿ ಅಹಿಂಸಾ ಪ್ರಯೋಗವನ್ನು ಬಹುಕಾಲ ನಡೆಸಿದರು. ಅವರ ಪ್ರಯೋಗ ದಕ್ಷಿಣ ಆಫ್ರಿಕಾ ಮತ್ತು ಭಾರತ ಎರಡರಲ್ಲೂ ಯಶಸ್ವಿಯಾಗಿ ನಡೆಯಿತು. ಸಾಮಾನ್ಯ ಜನರನ್ನು ಈ ಪ್ರಯೋಗಕ್ಕೆ ಅವರು ಬಳಸಿಕೊಂಡದ್ದು ಒಂದು ವಿಶೇಷ. ಅಹಿಂಸಕರಾಗಿ ನಡೆದುಕೊಳ್ಳಲು ಭಾರತೀಯರಿಗೆ ಶಿಕ್ಷಣ ನೀಡಿದರು. ಸತ್ಯಾಗ್ರಹದ ಸಂದರ್ಭದಲ್ಲಿ ಜನ ಹಿಂಸೆಗೆ ಇಳಿದಾಗ, ತಮ್ಮ ಹೋರಾಟವನ್ನೇ ಹಿಂದಕ್ಕೆ ತೆಗೆದುಕೊಂಡರು. ಹಿಂಸಾಚಾರದಿಂದ ದೊರಕುವ ಸ್ವಾತಂತ್ರ್ಯ ತನಗೆ ಬೇಡವೇ ಬೇಡ ಎಂದರು.

ಗಾಂಧೀಜಿ ಹೊಟ್ಟೆಬಾಕ ಸಂಸ್ಕೃತಿಯ ವಿರುದ್ಧ, ತಿನ್ನುಬಾಕ ಸಂಸ್ಕೃತಿಯ ವಿರುದ್ಧ, ಮಾರುಕಟ್ಟೆಯ ವಿಸ್ತರಣೆಯ ವಿರುದ್ಧ, ಅವಶ್ಯಕತೆಗಿಂತ ಹೆಚ್ಚಿಗೆ ಇಟ್ಟುಕೊಳ್ಳುವುದರ ವಿರುದ್ಧ, ಉತ್ಪ್ರೇಕ್ಷಿತ

ಮತ್ತು ಸುಳ್ಳು ಜಾಹಿರಾತುಗಳ ವಿರುದ್ಧ 'ಹಿಂದ್ ಸ್ವರಾಜ್'ನಲ್ಲಿ ಸಮರ ಸಾರಿದ್ದಾರೆ. ಅವಶ್ಯಕತೆಗಿಂತ ಹೆಚ್ಚಿಗೆ ಇಟ್ಟುಕೊಳ್ಳುವುದು ಕಳ್ಳತನ ಎಂದಿದ್ದಾರೆ. ಬಕಾಸುರ ಬುದ್ಧಿ ಮನುಷ್ಯನನ್ನು ಮನುಷ್ಯನನ್ನಾಗಿ ಉಳಿಸುವುದಿಲ್ಲ ಎಂಬುದು ಅವರ ಸದೃಢ ನಂಬಿಕೆ.

ಅನ್ಯಾಯ, ಹಿಂಸೆ, ಧರ್ಮದ ದುರುಪಯೋಗ ಈಗ ಅವ್ಯಾಹತವಾಗಿ ನಡೆಯುತ್ತಿದೆ. ಇವುಗಳೆಲ್ಲದರ ವಿರುದ್ಧವಾಗಿ ಸೊಲ್ಲೆತ್ತಿದ ಗಾಂಧಿ ಇಂದಿಗೂ ನಮಗೆ ಬೇಕು. ನ್ಯಾಯಕ್ಕಾಗಿ, ಅನ್ಯಾಯದ ವಿರುದ್ಧವಾಗಿ ಹೋರಾಟ ನಡೆಯುವ ಕಡೆ ಗಾಂಧೀಜಿ ಇರುತ್ತಾರೆ. ಗಾಂಧಿ ಒಂದು ಶಕ್ತಿ. ಅವರನ್ನು ಬಳಸಿಕೊಳ್ಳುವುದು ನಮಗೆ ಬಿಟ್ಟ ವಿಚಾರ. ಗಾಂಧೀಜಿಯ ಹಿಂದ್ ಸ್ವರಾಜ್ ನೆನಪಿಸಿಕೊಳ್ಳುವ ಕಾಲ ಈಗ ಸನ್ನಿಹಿತವಾಗಿದೆ. ಪ್ರಪಂಚವೇ ಈಗ ಆರ್ಥಿಕ ಹಿಂಜರಿತಕ್ಕೆ ಸಿಲುಕಿದೆ. ಅದರಿಂದ ಪಾರಾಗಲು ಬಲಿಷ್ಠ ರಾಷ್ಟ್ರಗಳು ತಿಣುಕಾಡುತ್ತಿವೆ. ಅಮೇರಿಕದಲ್ಲಿ ಶ್ರೀಮಂತರ 53 ಲಕ್ಷ ಮನೆಗಳು ಹರಾಜಿಗೆ ಬಂದವು. ವರ್ತಮಾನವನ್ನು, ಭವಿಷ್ಯವನ್ನು ಈ ಹಿಂಜರಿಕೆಯಿಂದ ದೂರ ಮಾಡಲು ಆಸಕ್ತಿಯುಳ್ಳ ಎಲ್ಲರೂ ಹಿಂದ್ ಸ್ವರಾಜ್‌ನಲ್ಲಿ ಹೇಳಿರುವ ಸತ್ಯಾಂಶಗಳನ್ನು ಮನಗಾಣಬೇಕು. ಅಮೇರಿಕ ಮುಂತಾದ ರಾಷ್ಟ್ರಗಳು ಬಹುಮಟ್ಟಿಗೆ ಇಂದಿನ ದುಃಸ್ಥಿತಿಗೆ ಕಾರಣ. ಸಾಮ್ರಾಜ್ಯಶಾಹಿ ಬ್ರಿಟಿಷರು ಭಾರತವನ್ನು ಆಳಿದ್ದು ಇತಿಹಾಸವಲ್ಲ. ಅವರು ನಡೆಸಿದ ಶೋಷಣೆ ಇತಿಹಾಸವಾಗುವುದಿಲ್ಲ. ಮಾನವ ಪ್ರೇಮವನ್ನು ಬೆಳೆಸಿದ ಸನ್ನಿವೇಶಗಳು, ಮಾನವೀಯತೆಯನ್ನು ಬೆಳಗಿಸಿದ ಪ್ರಸಂಗಗಳು ಮಾತ್ರ ಇತಿಹಾಸವಾಗಬಲ್ಲದು.

ನಮ್ಮ ದೈನಂದಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಗಾಂಧಿ ಮಾರ್ಗ ಸಹಕಾರಿ. 40 ಭೂಮಂಡಲಗಳನ್ನು ನಾಶಮಾಡುವಷ್ಟು ಬಾಂಬ್‌ಗಳು ವಿಶ್ವದ ಬಲಿಷ್ಠರ ಕೈಲಿದೆ. ಬಾಂಬ್ ಪೇರಿಸಿಟ್ಟುಕೊಂಡಿರುವವರಿಗೆ ಹಿಂಸೆ ಹಿಂಸೆಯನ್ನೇ ಸೃಷ್ಟಿಸುತ್ತದೆ ಎಂಬುದರ ಅರಿವಿಲ್ಲ. ಕೋಮುವಾದಿ, ಬಾಂಬ್‌ವಾದಿ ಇಬ್ಬರೂ ಒಂದೇ ನಾಣ್ಯದ ಎರಡು ಮಗ್ಗಲುಗಳು. ಬಾಂಬ್ ಹಿಡಿದವರು ಬಾಂಬಿನಿಂದಲೇ ನಾಶವಾಗುತ್ತಾರೆ. ಕೋಮುವಾದಿಗಳು, ಕೋಮು

ಘರ್ಷಣೆಯಿಂದಲೇ ಸಾಯುತ್ತಾರೆ. ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ನಾವು ಬ್ರಿಟಿಷ್ ಪದ್ಧತಿಗಳನ್ನು ಕೊಡವಿಕೊಳ್ಳುವ ಯಾವ ಪ್ರಯತ್ನವನ್ನೂ ಮಾಡಿಲ್ಲ. ನಮ್ಮ ಪೊಲೀಸ್ ವ್ಯವಸ್ಥೆ, ಆಡಳಿತ ವ್ಯವಸ್ಥೆ, ಶಿಕ್ಷಣ ಪದ್ಧತಿ ಎಲ್ಲದರಲ್ಲೂ ನಾವು ಬ್ರಿಟಿಷರು ಬಿಟ್ಟು ಹೋದ ಪದ್ಧತಿಗಳನ್ನೇ ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ಇವೆಲ್ಲ ಆಮೂಲಾಗ್ರವಾಗಿ ಬದಲಾಗಬೇಕು. ಯಾವ ರಾಜಕೀಯ ಪಕ್ಷವೂ ಈ ಕುರಿತು ಚಿಂತಿಸುತ್ತಿಲ್ಲ.

ಸ್ವದೇಶಿ, ಸ್ವರಾಜ್ಯ, ಸ್ವಾಯತ್ತತೆ, ಸ್ವಾವಲಂಬನೆ, ಸಂಪನ್ಮೂಲಗಳ ಮಿತಬಳಕೆ, ಸ್ವಯಂನಿಯಂತ್ರಣ ತತ್ವಗಳ ಆಧಾರದ ಮೇಲೆ 'ಹಿಂದ್ ಸ್ವರಾಜ್'ನ್ನು ಗಾಂಧೀಜಿ ರಚಿಸಿದ್ದಾರೆ. ಸ್ವರಾಜ್ ಎಂದರೆ ಸಾವಿನ ಭಯವನ್ನು ದೂರೀಕರಿಸುವುದು. ಯಾವ ರಾಷ್ಟ್ರ ಅಥವಾ ಪ್ರಜೆ ಸಾವಿನ ಭಯದಿಂದ ತತ್ತರಿಸುತ್ತದೋ ಅದು ಸ್ವರಾಜ್ಯವನ್ನು ಪಡೆಯಲಾರದು. ಪಡೆದ ಸ್ವರಾಜ್ಯವನ್ನು ಉಳಿಸಿಕೊಳ್ಳಲಾರದು.

ಸಾಮಾನ್ಯವಾಗಿ ನಾವು ಓದುವುದೆಲ್ಲ ದುಷ್ಟ ನಾಗರಿಕತೆಯನ್ನು ಸಮರ್ಥನೆ ಮಾಡುವ ಪುಸ್ತಕಗಳನ್ನೇ. ಇದಕ್ಕೆ ವಿರುದ್ಧವಾಗಿ ಯೋಚಿಸುವವರು ವಿರಳ. ಈ ಆಧುನಿಕ ನಾಗರಿಕತೆ ಶರೀರ ಸುಖವನ್ನು ಹೆಚ್ಚಿಸುವುದಕ್ಕೆ ಒತ್ತು ಕೊಡುತ್ತದೆ. ಎಂತಹ ಆಧ್ಯಾತ್ಮಿಕ ದೇಶವಾದರೂ ಅದಕ್ಕೆ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆ ಬೇಕೇ ಬೇಕು. ಆದರೆ ಅದು ಅತಿಯಾಗಬಾರದು.

ಔದ್ಯೋಗಿಕ ನಾಗರಿಕತೆ ನೈತಿಕ ನಿಯಮವನ್ನು ಶಂಕಿಸುತ್ತದೆ ಎಂದು ಗಾಂಧೀಜಿ ಯೋಚಿಸುವಂತೆ ಮಾಡಿತು. ಮಾರ್ಗ ಮತ್ತು ಗುರಿಯ ಬಗೆಗೂ ವಿಚಾರ ಮಾಡುವಂತಾಯಿತು. ಮಾರ್ಗ ಯೋಗ್ಯವಾದದ್ದಾಗಿರದಿದ್ದರೇನು, ಇಂಗ್ಲೀಷರನ್ನು ಭಾರತದಿಂದ ಹೊರಗಟ್ಟುವುದು ಮುಖ್ಯ ಎಂದು ಭಾವಿಸುವವರಿಗೆ ಉತ್ತರವಾಗಿ ಬರೆದ ಪುಸ್ತಕ 'ಹಿಂದ್ ಸ್ವರಾಜ್'. ಹಿಂಸಾ ಮಾರ್ಗದಿಂದ ಬ್ರಿಟಿಷ್ ಆಡಳಿತವನ್ನು ತೆಗೆದುಹಾಕುವೆವಾದರೆ, ಇಂಗ್ಲೀಷರಿಲ್ಲದ ಆಂಗ್ಲರಾಜ್ಯವಾಗಿ ಭಾರತ ರೂಪುಗೊಳ್ಳುತ್ತದೆ. ದೇಶಪ್ರೇಮ ಎಂದರೆ ಸಮಾಜದ ಸಮಸ್ತರ ಅಭ್ಯುದಯ ಎಂದು ನಾನು ಭಾವಿಸುತ್ತೇನೆ.

ಇಂಗ್ಲೆಂಡಿನಲ್ಲಿ ರೂಪುಗೊಂಡ ಪ್ರಜಾಪ್ರಭುತ್ವ ಇಂತಹ ಒಂದು ಸಮಾಜವನ್ನು ಸೃಷ್ಟಿಸಲಾರದು. ಬಹುಮತದ ಆಧಾರದ ಮೇಲೆ ಕೈಗೊಂಡ ತೀರ್ಮಾನ ಎಲ್ಲರಿಗೂ ಒಪ್ಪಿಗೆಯಾಗುವ ಸಂಭವವಿಲ್ಲ. ಬಹುಮತ ಆಧಾರದ ಮೇಲೆ ಕೈಗೊಂಡ ಎಲ್ಲ ನ್ಯಾಯಯುತವಲ್ಲದ ಕಾನೂನುಗಳನ್ನು ವಿರೋಧಿಸಬೇಕು. ಸ್ವರಾಜ್ಯಕ್ಕೆ ಇದು ಕೀಲಿಕೈ. 'ಹಿಂದ್ ಸ್ವರಾಜ್'ನಲ್ಲಿ ಗಾಂಧಿ ತತ್ವಗಳ ಸಾರವನ್ನು ಅದರ ಶುದ್ಧರೂಪದಲ್ಲಿ ಉಗ್ರರೂಪದಲ್ಲಿ, ಪ್ರಾಕೃತಿಕ ರೂಪದಲ್ಲಿ ಭಟ್ಟಿ ಇಳಿಸಲಾಗಿದೆ.

'ಬ್ರಿಟನ್ನಿನ ಪರಿಸ್ಥಿತಿ ಕರುಣಾಜನಕವಾಗಿದೆ. ಭಾರತ ಎಂದೂ ಆ ಸ್ಥಿತಿಗೆ ಬರಬಾರದು. ಬ್ರಿಟಿಷ್ ಪಾರ್ಲಿಮೆಂಟನ್ನು ಬಂಜೆ, ವೇಶ್ಯೆಗೆ ಗಾಂಧೀಜಿ ಹೋಲಿಸಿದ್ದಾರೆ. ಒತ್ತಡ ಬೀಳದೆ ಅದು ಯಾವ ಕೆಲಸವನ್ನೂ ಮಾಡದು', ಎನ್ನುತ್ತಾರೆ ಗಾಂಧೀಜಿ. ನಮ್ಮ ದೇಶದ ಹಣ ಪರದೇಶಕ್ಕೆ ಹರಿದುಹೋಗುತ್ತಿದೆ. ಹಳ್ಳಿಗಳಲ್ಲಿ ಬಡತನ, ಅಜ್ಞಾನ ಹೆಚ್ಚುತ್ತಿದೆ. ರೋಗರುಜಿನ ಕಾಡುತ್ತಿದೆ. ಆಡಳಿತ ನಡೆಸುವವರಿಗೆ ಸೇವೆಗಿಂತ ಲಾಭವೇ ಮುಖ್ಯ. ಭಾರತ ಸ್ವಾತಂತ್ರ್ಯ ಪಡೆಯಬಹುದು. ಆದರೆ ಆಡಳಿತಗಾರರು ದುರಾಸೆ ಹಾಗೂ ಸ್ವಾರ್ಥಗಳನ್ನು ಗೆಲ್ಲದೆ ಹೋದರೆ ಜನಸಾಮಾನ್ಯರ ಜೀವನ ದುರ್ಭರವಾಗುತ್ತದೆ. ಬಾರಿ ಜನನಿಬಿಡವಾದ ಪಟ್ಟಣಗಳು ಬೆಳೆಯುತ್ತಿವೆ. ಗುಣಕ್ಕಿಂತ ಹಣಕ್ಕೇ ಹೆಚ್ಚು ಗೌರವ ನೀಡುವುದನ್ನು ಆಧುನಿಕ ಶಿಕ್ಷಣ ಕಲಿಸುತ್ತಿದೆ. ಬ್ರಿಟಿಷರನ್ನು ದ್ವೇಷಿಸಬಾರದು. ಆದರೆ ಅವರು ಭಾರತಕ್ಕೆ ತಂದ ಆಧುನಿಕ ನಾಗರಿಕತೆಯ ವಿರುದ್ಧವಾಗಿ ನಾವು ಹೋರಾಡಬೇಕು.

ಗಾಂಧೀಜಿ ಅವರ ಕೆಲವು ಟೀಕೆಗಳಾದರೋ ಅವರು ಭವಿಷ್ಯ ನುಡಿದಂತೆಯೇ ಸಂಭವಿಸಿದೆ. ಹಿಂದೆ ಬ್ರಿಟನ್ನಿನ ಜನ ಮೃಗಗಳ ಚರ್ಮ ತೊಡುತ್ತಿದ್ದರು. ಈಗ ಷರಾಯಿ ತೊಡುತ್ತಾರೆ. ಭರ್ಜಿಗಳನ್ನು ಆಯುಧವಾಗಿ ಉಪಯೋಗಿಸುತ್ತಿದ್ದರು. ಈಗ ಫಿರಂಗಿ, ರೈಫಲ್ ಬಳಸುತ್ತಾರೆ. ಆಗ ಜನ ಕುದುರೆ ಗಾಡಿಗಳಲ್ಲಿ ಓಡಾಡುತ್ತಿದ್ದರು. ಈಗ **Bullet Train** ಬಂದಿದೆ. ಗುಂಡಿ ಒತ್ತಿದರೆ ಸಾಕು ಬೇಕಾದ

ಪದಾರ್ಥಗಳು ನಿಮ್ಮ ಮುಂದೆ ಬಂದು ನಿಲ್ಲುತ್ತವೆ. ಇದರ ಜೊತೆಜೊತೆಗೇ ಮನುಷ್ಯನ ದುರಾಸೆಯೂ ಬೆಳೆಯುತ್ತಿದೆ.

ಹಿಂದೆ ರೋಗಗಳು ಕಡಿಮೆ ಇತ್ತು. ನವನಾಗರಿಕತೆ ಬೆಳೆದುದರ ಪರಿಣಾಮವಾಗಿ ಹಿಂದೆ ನಾವು ಕೇಳಿ ಅರಿಯದಿದ್ದ ಅನೇಕ ಭಯಂಕರ ರೋಗಗಳು ಈಗ ಕಾಣಿಸಿಕೊಂಡಿವೆ. ಅವುಗಳಲ್ಲಿ ಕೊರೋನಾ ಕೂಡ ಒಂದು. ಅವುಗಳಿಗೆ ಚಿಕಿತ್ಸೆ ನೀಡಲು ಸಂಶೋಧನೆ ನಡೆಯುತ್ತಿದೆ. ವೈದ್ಯರ ಪಡೆಯು ಸನ್ನದ್ಧವಾಗಿವೆ. ಈಗ ಜನ ಅರೆಹುಚ್ಚರಾಗಿದ್ದಾರೆ. ಸೈತಾನ್ ನಾಗರಿಕತೆಯ ಫಲ ಇದು.

ಒಂದನೇ ಮಹಾಯುದ್ಧದಲ್ಲಿ ಯೂರೋಪ್, ಉತ್ತರ ಆಫ್ರಿಕಾ, ದಕ್ಷಿಣ, ಪೂರ್ವ ಏಷ್ಯಾಗಳ 4 ಕೋಟಿಗೂ ಹೆಚ್ಚು ಜನ ಹತರಾದರು. ನೂರಾರು ಊರುಗಳು ನಾಶವಾದವು. ಎರಡನೇ ಮಹಾಯುದ್ಧ ಕಾಲದಲ್ಲಿ ಅಮೆರಿಕನ್ ಸೈನಿಕರು ಜಪಾನಿನ ನಾಗಸಾಕಿ, ಹಿರೋಷಿಮಾ ಪಟ್ಟಣಗಳ ಮೇಲೆ ಅಣುಬಾಂಬುಗಳನ್ನು ಪ್ರಯೋಗಾರ್ಥವಾಗಿ ಹಾಕಿದರು. ಉದ್ಯಾನದಲ್ಲಿ ಆಟವಾಡುತ್ತಿದ್ದ ಹತ್ತಾರು ಸಾವಿರ ಮುಗ್ಧ ಮಕ್ಕಳು ಹತರಾದರು. ಜರ್ಮನಿಯಲ್ಲಿ ಯುದ್ಧದ ಕೊನೆಯ 3 ವರ್ಷಗಳಲ್ಲಿ 60 ಲಕ್ಷಕ್ಕೂ ಹೆಚ್ಚು ಜ್ಯೂಗಳು ಗ್ಯಾಸ್ ಛೇಂಬರ್‌ನಲ್ಲಿ ಭಸ್ಮರಾಗಿ ಹೋದರು. ಮುಂಚೂಣಿಯಲ್ಲಿರುವ ಅಮೆರಿಕ, ಜರ್ಮನಿ, ಬ್ರಿಟನ್ ಮುಂತಾದ ರಾಷ್ಟ್ರಗಳ ನಾಯಕರು ನರಮೇಧದಲ್ಲಿ ತೊಡಗಿದ್ದರು. ಅಂದ ಮೇಲೆ ಇಂದಿನ ನಾಗರಿಕತೆಯನ್ನು ಸೈತಾನ್ ನಾಗರಿಕತೆ ಎಂದು ಕರೆಯುವುದರಲ್ಲಿ ತಪ್ಪೇನು?

ಗಂಡಾಂತರ ಸೃಷ್ಟಿ ಮಾಡಿ ಆ ಗಂಡಾಂತರದಿಂದ ಪಾರು ಮಾಡುವ ಮಾತನ್ನಾಡುತ್ತೇವೆ. ಜನಸಂಖ್ಯೆ ಹುಚ್ಚಾಪಟ್ಟೆ ಬೆಳೆಸಿ ಬಿಟ್ಟು ಜನಸಂಖ್ಯೆಯ ನಿಯಂತ್ರಣದ ಮಾತನ್ನಾಡುತ್ತೇವೆ. ಬಾಂಬ್ ತಯಾರಿಸಿಟ್ಟುಕೊಂಡು ವಿಶ್ವಶಾಂತಿಗೆ ಬಾಂಬ್ ಅಡ್ಡಿಯಾಗಿದೆ, ವಿಶ್ವನಾಶಕ್ಕೆ ಬಾಂಬ್ ದಾರಿ ಮಾಡಿದೆ ಎಂದು ಹಲುಬುತ್ತೇವೆ. ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳನ್ನು ಬಳಸಿ ನಮ್ಮ ಆಹಾರ ಧಾನ್ಯಗಳನ್ನು, ಹಣ್ಣುಗಳನ್ನು, ತರಕಾರಿಗಳನ್ನು ವಿಷಮಯ ಮಾಡಿ,

ಸಾವಯವ ಕೃಷಿ ಕೈಬಿಟ್ಟದ್ದಕ್ಕೆ ನಮ್ಮ ರೈತ ಪರಿತಪಿಸುತ್ತಿದ್ದಾನೆ. ದೇಶವನ್ನು ಔದ್ಯೋಗಿಕ ರಾಷ್ಟ್ರವನ್ನಾಗಿ ಮಾಡುವ ಭರದಲ್ಲಿ, ಗ್ರಾಮ ಕೈಗಾರಿಕೆಗಳನ್ನು ನಾಶಮಾಡಿದ್ದೇವೆ. ಸೂರ್ಯನ ಸುತ್ತಿನ ಓಜೋನ್ ಪದರವನ್ನು ತಿಂದುಹಾಕುವ ರಾಸಾಯನಿಕಗಳನ್ನು ಆಕಾಶಕ್ಕೆ ಬಿಟ್ಟು ಪರಿಸರವನ್ನು ರಕ್ಷಿಸುವ ಮಾತನ್ನಾಡುತ್ತಿದ್ದೇವೆ. ಗಣಿಕೈಗಾರಿಕೆಯನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಸಿ ಭ್ರಷ್ಟಾಚಾರ ತಾರಕಕ್ಕೇರುವ ಹಾಗೆ ಮಾಡಿ, ದಿಢೀರ್ ಶ್ರೀಮಂತರಾಗುವುದಕ್ಕೆ ಅವಕಾಶ ಮಾಡಿಕೊಟ್ಟು ಮುಂದಿನ ಪೀಳಿಗೆಗೆ ಕಲ್ಲು, ಖನಿಜಗಳು ದೊರಕದಂತೆ ಮಾಡಿ, ಈಗ ಅದಕ್ಕಾಗಿ ಪರಿತಪಿಸುತ್ತಿದ್ದೇವೆ.

ಯಾವ ಸಮಸ್ಯೆಯನ್ನು ಹುಟ್ಟು ಹಾಕಿದೆವೋ ಅದೇ ಮನಸ್ಥಿತಿಯಲ್ಲಿ ಇದ್ದುಕೊಂಡು ಆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ ಎಂದು ಐನ್‌ಸ್ಟೀನ್ ಹೇಳಿದರು. ಬಾಂಬ್ ತಯಾರಿಕೆಗೆ, ಪರಿಸರ ಸಂಬಂಧಪಟ್ಟ ಸಮಸ್ಯೆಗಳ ಹುಟ್ಟಿಗೆ ನಮ್ಮೊಳಗಿರುವ ಭಯವೇ ಕಾರಣ. ವಿಶ್ವ ನಾಶದ ಭಯ ಬೀಳಿಸಿದವರು ನಮ್ಮ ಪರಿಸರ ಸಂಬಂಧಿತ ಭಯವನ್ನು ಪರಿಹರಿಸಲಾರರು.

ಪರಿಸರ ಸ್ನೇಹಿಯಾಗು ಇಲ್ಲವಾದರೆ ನಮ್ಮ ನಾಗರಿಕತೆಯೇ ಸಮಾಪ್ತಿಗೊಳ್ಳುವುದು ಎಂದು ಹೇಳಲು ಆರಂಭಿಸಿದ್ದೇವೆ. ಭೂಮಿಯ ಬಗೆಗೆ ಕಾಳಜಿ ವಹಿಸಬೇಕೆಂಬುದಕ್ಕೆ ಬೇರೆ ಕಾರಣಗಳೂ ಇವೆ. ಅಹಿಂಸಾ ಸಂಸ್ಕೃತಿ, ಜೀವರಾಶಿಯ ಬಗೆಗೆ ಗೌರವ ಮತ್ತು ಪೂಜ್ಯ ಭಾವನೆಯಿಂದ ಕೂಡಿದ ಮನೋವೃತ್ತಿಯನ್ನು ನಾವು ಬೆಳೆಸಿಕೊಳ್ಳಬೇಕು. ನದಿಯ ನೀರಿನ ಪ್ರದೂಷಣ, ಬೆಳೆಗೆ ವಿಷದ ಗೊಬ್ಬರ ಹಾಕುವುದು, ಬೆಟ್ಟಗಳನ್ನು ಕರಗಿಸುವುದು, ಅರಣ್ಯನಾಶ ಮಾಡುವುದು, ಆಕಾಶಕ್ಕೆ ರಾಸಾಯನಿಕ ಅನಿಲಗಳನ್ನು ರವಾನಿಸುವ ಮೂಲಕ ಶಾಖವನ್ನು ತಡೆಹಿಡಿಯುವ ಓಜೋನ್ ಪದರವನ್ನು ಕಬಳಿಸುವಂತೆ ಮಾಡುವುದು **Acid Rain** ಗೆ ದಾರಿ ಮಾಡುವುದು ಇವೆಲ್ಲವೂ ಸೈತಾನ್ ಸಂಸ್ಕೃತಿಯ ಕೃತ್ಯಗಳೇ ಅಲ್ಲವೇ? **Hind Swaraj** ನಲ್ಲಿ ಮುಖ್ಯವಾಗಿ ಗಮನಿಸಬೇಕಾದ ಈ ಮೂಲಭೂತ ತತ್ವಗಳನ್ನು ಮರೆಯಬಾರದು.

ಸಮಾನತೆಯ ಬಗೆಗೆ ಮಾತನಾಡುವುದು ಸುಲಭ, ಹಂಚಿಕೊಂಡು ಬಾಳಬೇಕೆಂದು ಹೇಳುವುದೂ ಸುಲಭ. ಸತ್ಯಸಂಧರಾಗಿರಬೇಕು, ಪ್ರಾಮಾಣಿಕರಾಗಿರಬೇಕು ಎಂದು ಮಾತನಾಡುವುದೂ ಸುಲಭ. ಆದರೆ ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಕಷ್ಟ. ಆಧುನಿಕ ಶಿಕ್ಷಣ ನಮಗೆ ಆತ್ಮನಿಗ್ರಹ ಅಥವಾ ಆತ್ಮ ಸಂಯಮವನ್ನು ಹೇಳಿಕೊಡುವುದಿಲ್ಲ. ನಮ್ಮ ಆಲೋಚನೆಗಳನ್ನು ನಮ್ಮ ಮನಸ್ಸುಗಳನ್ನು ನಮ್ಮ ಅಧೀನದಲ್ಲಿಟ್ಟುಕೊಳ್ಳುವುದು ಹೇಗೆ ಎಂಬುದನ್ನು ಹೇಳಿಕೊಡುವುದಿಲ್ಲ. ಯಾರು ಬೇಕಾದರೂ ಡಾಕ್ಟರ್, ಇಂಜನಿಯರ್‌ಗಳಾಗಬಹುದು ಒಳ್ಳೆಯ ಮನುಷ್ಯರಾಗುವುದು ಕಠಿಣ.

ಗಾಂಧೀಜಿ ಸ್ವರಾಜ್ಯವನ್ನು ಆತ್ಮಸಂಯಮ ಎಂದು ಅರ್ಥೈಸಿದರು. ತಮ್ಮನ್ನು ತಾವು ಹತೋಟಿಯಲ್ಲಿಟ್ಟುಕೊಳ್ಳುವುದೇ ಸ್ವರಾಜ್ಯದ ಮೊದಲ ಹೆಜ್ಜೆ ಎಂದರು. **Home Rule** ಎಂದರೆ ತಮ್ಮನ್ನು ತಾವು ಹತೋಟಿಯಲ್ಲಿಟ್ಟುಕೊಳ್ಳುವುದು. ಆತ್ಮಬಲ ಬೆಳೆಸಿಕೊಳ್ಳುವುದು. ರಾಜಕೀಯ ಸ್ವಾತಂತ್ರ್ಯ ಎಂದರೆ ಸ್ವರಾಜ್ಯದ ಫಲವನ್ನು ಪ್ರತಿಯೊಬ್ಬ ವ್ಯಕ್ತಿಯೂ ಅನುಭವಿಸುವಂತಾಗಬೇಕು. ಆಗ ಮಾತ್ರ ಸ್ವಾತಂತ್ರ್ಯ ಅರ್ಥಪೂರ್ಣವೆನಿಸುತ್ತದೆ. ಜನಸಾಮಾನ್ಯರ ಮೇಲೆ ಗಾಂಧೀಜಿಗೆ ಇಷ್ಟೊಂದು ಹಿಡಿತ ಇತ್ತಲ್ಲಾ ಅದಕ್ಕೆ ಕಾರಣವೇನಿರಬಹುದು? ಅದಕ್ಕೆ ಉತ್ತರ ಗಾಂಧೀಜಿಗೆ ಜನರ ಮೇಲಿದ್ದ ಗಾಢವಾದ ಪ್ರೀತಿ. ಗಾಂಧೀಜಿ ಕಾಮ, ಕ್ರೋಧ ಮತ್ತು ಲೋಭಗಳಿಂದ ಮುಕ್ತರಾಗಿದ್ದರು. ನಮ್ಮ ಇಂದಿನ ಶಿಕ್ಷಣ ಪದ್ಧತಿಯಲ್ಲಿ ನೇರವಾಗಿ ಗ್ರಹಿಸುವ ಶಕ್ತಿ, ವಿವೇಚನಾ ಶಕ್ತಿ, ಸಮಗ್ರ ಸಂಪೂರ್ಣ ಗ್ರಹಣಶಕ್ತಿ ಇವುಗಳ ಬೆಳವಣಿಗೆ ಅಪೂರ್ಣವಾಗಿದೆ. ಮಿದುಳಿಗೆ ಸಂಬಂಧಪಟ್ಟಂತೆ ಇತ್ತೀಚೆಗೆ ನಡೆದಿರುವ ಸಂಶೋಧನೆಯ ರೀತ್ಯಾ ಮನಶ್ಶಾಸ್ತ್ರ ಪರಿಣತರು ಹೇಳುವುದೇನೆಂದರೆ ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ನಾವು ಪಡೆಯಬೇಕಾಗಿರುವ ಬುದ್ಧಿಶಕ್ತಿಗೆ ಸಂಬಂಧಪಟ್ಟ ತರಬೇತಿಗೆ ಮಿದುಳಿನ ಒಟ್ಟು ಧಾರಣ ಶಕ್ತಿಯ ಸ್ವಲ್ಪ ಭಾಗ ಮಾತ್ರ ಬಳಕೆಯಾಗುತ್ತಿದೆ. ಅಂತರ್ಬೋಧೆ, ಬುದ್ಧಿಮತ್ತೆ, ಪ್ರೇಮ ಮತ್ತಿತರ ವಿಶೇಷ ಲಕ್ಷಣಗಳನ್ನು

ವೃದ್ಧಿಪಡಿಸುವ ಬಲಭಾಗದ ಮೆದುಳಿನ ಉಪಯೋಗವನ್ನು ಸಂಪೂರ್ಣವಾಗಿ ಕಡೆಗಾಣಿಸಲಾಗಿದೆ. ಆತ್ಮ ಸಂಯಮದ ಶಿಕ್ಷಣ ನೀಡಿದರೆ ಈ ಅಸಮತೋಲನವನ್ನು ಸರಿಪಡಿಸಬಹುದು.

ಪ್ರಪಂಚದಲ್ಲಿದ್ದರೂ ಅದರ ಭಾಗವಾಗಿಲ್ಲದ ಹಾಗೆ ಇರೋಣ. ಹಾಗೆ ನಾವು ಇರಲು ಇಚ್ಛಿಸದಿದ್ದರೆ ನಾವು ಯಾವುದೇ ಕ್ರಾಂತಿ ತರಲು ಸಾಧ್ಯವಾಗುವುದಿಲ್ಲ. ಈಗ ಧರ್ಮರಹಿತ ನಾಗರಿಕತೆ ಬೆಳೆಯುತ್ತಿದೆ. ಇದರಿಂದ ಜನ ಈಗ ಅರೆ ಹುಚ್ಚರಾಗಿದ್ದಾರೆ. ಗಾಂಧೀಜಿ ನಮ್ಮ ಕಾಲದ ಯುಗಪುರುಷರೇ ಹೌದು. ಹಿಂಸೆ ನಡೆದಾಗ ಅಹಿಂಸೆಯ ಮಹತ್ವ ಕುರಿತೂ, ಮಾನವತೆಯ ಅಧಃಪತನ ಆದಾಗ ಶಾಂತಿ ಮತ್ತು ಸಹೋದರತ್ವ ಕುರಿತೂ ಧೀರರಂತೆ ಮಾತನಾಡಿದರು. ಪ್ರಸ್ತುತ ಎನಿಸುವುದು ಐತಿಹಾಸಿಕ ಗಾಂಧಿ ಅಲ್ಲ. ethical ಗಾಂಧಿ. ಸಮಾಜ ಜೀವನದಲ್ಲಿ ಚಿಗುರೊಡೆಯಬೇಕಾಗಿರುವುದು ಸರಳತೆ, ಪ್ರಾಮಾಣಿಕತೆ, ಮಾನವೀಯತೆಗಳು. ಅಧಃಪತನ ಹೊಂದಿರುವ ಈ ಸಮಾಜ ಗಾಂಧಿತತ್ವವನ್ನು ಬೀಜಾಕ್ಷರವಾಗಿ ಸ್ವೀಕರಿಸುವ ಮೂಲಕ ತನ್ನ ಹಲವು ರೋಗಗಳನ್ನು ನಿವಾರಿಸಿಕೊಳ್ಳಲು ಸಾಧ್ಯ.

ಗಾಂಧೀಜಿ ಬ್ರಿಟಿಷರನ್ನು ನಮ್ಮ ನಿಜವಾದ ಶತ್ರುಗಳೆಂದು ಭಾವಿಸಿರಲಿಲ್ಲ. 'ಇಂಗ್ಲೀಷರು ಭಾರತದಲ್ಲಿ ತಾವಾಗಿ ಉಳಿದಿಲ್ಲ. ನಾವು ಅವರನ್ನು ಇರಗೊಟ್ಟಿದ್ದೇವೆ' ಎಂಬ ಗಾಂಧೀಜಿಯ ಮಾತನ್ನು ನಾವು ಸ್ವೀಕರಿಸಬೇಕು. ಯಾವುದೇ ರಾಷ್ಟ್ರಕ್ಕೆ ಹೊರಶತ್ರುಗಳು ಇದ್ದೇ ಇರುತ್ತಾರೆ. ಅವರ ಜೊತೆಜೊತೆಗೇ ಈಗ ನಾವು ಆಂತರಿಕ ಶತ್ರುಗಳನ್ನು ಬೆಳೆಯಲೂ ಅವಕಾಶ ಮಾಡಿಕೊಟ್ಟಿದ್ದೇವೆ. ಆ ಆಂತರಿಕ ಶತ್ರುಗಳಿಂದ ಅನೈಕ್ಯತೆ ಮತ್ತು ಸ್ವಾರ್ಥ ಬೆಳೆಯುತ್ತದೆ. ಹೊರಗಿನ ಶತ್ರುವನ್ನು ಗುರುತಿಸುವುದು ಸುಲಭ. ಆದರೆ ಒಳಗಣ ಶತ್ರುವನ್ನು ಗುರುತಿಸುವುದು ಸುಲಭವಲ್ಲ. ಈ ಎರಡೂ ಅಪಾಯಗಳ ಬಗೆಗೆ ಎಚ್ಚರಿಕೆಯಿಂದ ವ್ಯವಹರಿಸಬೇಕೇ ಹೊರತು, ಹೊರಗಿನ ಶತ್ರುವನ್ನು ಗುರುತಿಸುವ ಆತುರದಲ್ಲಿ ಒಳಗಿನ ಶತ್ರುವನ್ನು ಮರೆಯುವುದು ಸರಿಯಲ್ಲ.

ಇಂದಿನ ರಾಜಕಾರಣಿಗಳು ಜನರನ್ನು ಭಾವೋದ್ರೇಕಗೊಳಿಸಿ ಹೊರಗಣ ಅಪಾಯದ ಕಡೆಗೇ ನಮ್ಮ ಮನಸ್ಸನ್ನು ಸೆಳೆಯುತ್ತಾರೆ. ಒಳಗಣ ವೈರಿಯನ್ನು ಗುರುತಿಸುವುದಕ್ಕೆ ಗಾಂಧೀಜಿ ನಮಗೆ ನೆರವಾಗುತ್ತಾರೆ. ಗಾಂಧೀಜಿ 'ಹಿಂದ್ ಸ್ವರಾಜ್' ಮೂಲಕ ನಮ್ಮ ಒಳಗಿನ ಮತ್ತು ಹೊರಗಿನ ಶತ್ರುಗಳ ಬಗೆಗೆ ನಮ್ಮ ಗಮನ ಸೆಳೆಯುತ್ತಾರೆ. ಆದರೆ ಅವರು ಒತ್ತು ಕೊಡುವುದು ಆಂತರಿಕ ಶತ್ರುಗಳ ಬಗೆಗೆ.

ಹಿಂದ್ ಸ್ವರಾಜ್‌ನ ಎಷ್ಟೋ ವಿಚಾರಗಳನ್ನು ಉಂಡುಂಡೆಯಾಗಿ ಸ್ವೀಕರಿಸುವುದು ಕಷ್ಟ. ಕ್ರಾಂತಿಕಾರಿಗಳ ಬಗೆಗೆ ಬರೆಯುತ್ತಾ ಗಾಂಧಿಜಿ, 'ಡಿಂಗ್ರಾ ದೇಶಭಕ್ತರು. ಆದರೆ ಅವರದು ಕುರುಡು ದೇಶಪ್ರೇಮ. ಡಿಂಗ್ರಾ ಅಂತಹವರನ್ನು ಹೊಗಳಿ ಹಾಡಿ ಉದ್ರೇಕಗೊಳಿಸುವ ತುಚ್ಛ ಸಾಹಿತ್ಯವನ್ನು ರಚಿಸುವ ಜನರನ್ನು ದಂಡಿಸಬೇಕು' ಎನ್ನುತ್ತಾರೆ. ಯಾವುದೇ ಸಿದ್ಧಾಂತ ಪರಿಪೂರ್ಣವಲ್ಲ. ಆ ಸಿದ್ಧಾಂತವನ್ನು ಬಳಕೆಗೆ ತರುವುದರಲ್ಲೂ ತನ್ನದೇ ದಾರಿ ಹಿಡಿಯಲಾಗುತ್ತದೆ. ಎಲ್ಲ ಸಿದ್ಧಾಂತಗಳನ್ನೂ ಸ್ವಾರ್ಥಿಗಳು ದುರುಪಯೋಗಪಡಿಸಿಕೊಳ್ಳುತ್ತಾರೆ. ಗಾಂಧೀಜಿ ಕೆಲವು ಸಮಸ್ಯೆಗಳನ್ನು ಸಾಮಾಜಿಕ ನೆಲೆಯಲ್ಲಿ ನೋಡುತ್ತಾರೆ. ಮತ್ತೆ ಕೆಲವನ್ನು ಆಧ್ಯಾತ್ಮಿಕ ನೆಲೆಯಲ್ಲಿ ನೋಡುತ್ತಾರೆ. ಮತ್ತೆ ಕೆಲವನ್ನು ನೈತಿಕ ನೆಲೆಯಲ್ಲಿ ಕಾಣುತ್ತಾರೆ. ಈ ಮಿಶ್ರ ನಿಲುವು ಹಲವು ಗೊಂದಲಗಳಿಗೆ ಅವಕಾಶಮಾಡಿಕೊಡುತ್ತದೆ.

ಹಿಂದ್ ಸ್ವರಾಜ್‌ದ ಮುಖ್ಯ ಪ್ರತಿಪಾದನೆ, ತಮ್ಮನ್ನು ತಾವೇ ಅವಲೋಕನ ಮಾಡಿಕೊಳ್ಳುವುದು. ತಮ್ಮನ್ನು ತಾವೇ ತಿದ್ದಿಕೊಂಡು, ಋಜು ಮಾರ್ಗದಲ್ಲಿ ನಡೆದುಕೊಳ್ಳುವುದು. ಈ ಸಾಧನ ಕ್ರಮವನ್ನು ಸ್ವಾತ್ಮ ಶಿಕ್ಷಣ ಎಂದು ಕರೆಯಬಹುದು. ಈ ಸ್ವ ಆತ್ಮ ಶಿಕ್ಷಣವೇ ಭಾರತೀಯ ಶಿಕ್ಷಣ ಪರಂಪರೆಯ ಜೀವ ಜೀವಾಳ. ನಮಗೆ ಇಂಗ್ಲೀಷ್ ಬೇಕು. ಇಂಗ್ಲೀಷ್ ರಾಜ್ಯ ಬೇಡ, ಇಂಗ್ಲೀಷ್ ಸಂಸ್ಕೃತಿ ಬೇಕು. ಹುಲಿಯ ಗುಣ ಬೇಕು, ಹುಲಿ ಬೇಡ ಎಂದರೆ ಹೇಗೆ? ಹಿಂದುಸ್ತಾನವನ್ನು ಇಂಗ್ಲೀಷ್‌ಸ್ತಾನ ಮಾಡಬೇಕು ಎಂದು ಹೇಳಿದ

ಹಾಗಾಯಿತು. ಇಂತಹ ಸ್ವರಾಜ್ಯ ಬೇಡ ಎನ್ನುತ್ತಾರೆ ಗಾಂಧೀಜಿ ಹಿಂದ್ ಸ್ವರಾಜ್ಯದ ಮೂಲ ಉದ್ದೇಶವೇ ಇದು.

ಇಂಗ್ಲೀಷರು ಇಂದು ನಮ್ಮನ್ನು ನೇರವಾಗಿ ಆಳುತ್ತಿಲ್ಲ ನಿಜ. ಆದರೆ ನಾವು ಪಾಶ್ಚಾತ್ಯ ಸಂಸ್ಕೃತಿಯ ಗುಲಾಮರಾಗಿಲ್ಲವೇ? ಪಾಶ್ಚಿಮಾತ್ಯರ ಇತಿಹಾಸ ಎಂದರೆ ಜಗತ್ತಿನ ಯುದ್ಧಗಳ ಕತೆ. ಜೀವನ್ಮುಖಿಯಾದ ಸಂಸ್ಕೃತಿಯೇ ದಿಟವಾದ ಸಂಸ್ಕೃತಿ. ಹಿಂದಿನ ಕಾಲದ ರಾಜರ ಸ್ಥಾನದಲ್ಲಿ ಇಂದಿನ ರಾಜಕಾರಣಿಗಳನ್ನೂ, ಅಂದಿನ ಯುದ್ಧಗಳ ಬದಲಿಗೆ ಇಂದಿನ ಚುನಾವಣೆಗಳನ್ನೂ ಕಲ್ಪಿಸಿಕೊಂಡು, ಪ್ರಸ್ತುತ ಇತಿಹಾಸವನ್ನು ಅವಲೋಕಿಸುವೆವಾದರೆ ನಮ್ಮ ಇಂದಿನ ರಾಜಕೀಯದ ಅಧೋಗತಿಯನ್ನು ಅರ್ಥೈಸಬಹುದು.

ಕೇವಲ ಭೌತಿಕ ಸುಖವೇ, ಶಾರೀರಿಕ ಸುಖವೇ ಸರ್ವಸ್ವ ಎಂಬುದು ಇಂದಿನ ಯುವ ಪೀಳಿಗೆಯ ಅನಿಸಿಕೆ. ಅಕ್ಷರಜ್ಞಾನದ ಜೊತೆಗೆ ನೈತಿಕ ಶಿಕ್ಷಣದ ಅಗತ್ಯತೆ ಕುರಿತು ಗಾಂಧೀಜಿ ದನಿ ಎತ್ತಿದ್ದಾರೆ. ನಮ್ಮ ಶಿಕ್ಷಣ ಪದ್ಧತಿಯಲ್ಲಿನ ದೋಷವೇ ಇಂದಿನ ನಮ್ಮ ಅನೇಕ ಸಮಸ್ಯೆಗಳಿಗೆ ಕಾರಣವಾಗಿವೆ ಎನ್ನುತ್ತಾರೆ ಗಾಂಧೀಜಿ. ದಾರಿದ್ರ್ಯದಿಂದ ಕೂಡಿದ ಹಿಂದೂಸ್ಥಾನ, ಸ್ವತಂತ್ರವೂ ಸ್ವಪರಿಪೂರ್ಣವೂ ಆಗಬಲ್ಲದು. ಆದರೆ ಅತಿ ಭ್ರಷ್ಟವಾದ ಕಲುಷಿತ ರಾಜಕೀಯದಿಂದ ತುಂಬಿರುವ ಭಾರತ, ಅರಾಜಕತೆಯ ಬೀಡಾದರೂ ಯಾರೂ ಆಶ್ಚರ್ಯಪಡಬೇಕಾಗಿಲ್ಲ.

ಹಿಂದ್ ಸ್ವರಾಜ್‌ನಲ್ಲಿ **Radical** ಚಿಂತನೆ ಇದೆ. 'ಹಿಂದ್ ಸ್ವರಾಜ್' ರಾಷ್ಟ್ರೀಯತೆಯ ಹೋರಾಟದ ಪ್ರಣಾಳಿಕೆ, ಗಾಂಧಿ ಚಿಂತನೆಯ ಹೆಮ್ಮರ, ಪಾಶ್ಚಿಮಾತ್ಯ ಆಧುನಿಕತೆಯ ವಿಮರ್ಶೆ ಎಂದೆಲ್ಲ ವರ್ಣಿಸಲಾಗಿದೆ. ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಇದೊಂದು ಮಹತ್ತರ ಕೃತಿ ಎನಿಸಿತು. ಹೋರಾಟಕ್ಕೆ ಹೊಸ ಅಲೆಯನ್ನೂ ಆಯಾಮವನ್ನೂ, ಹಾಗೂ ದೃಷ್ಟಿಕೋನವನ್ನು ನೀಡಿತು.

ಹಿಂದ್ ಸ್ವರಾಜ್ ಬರೆದ ಕಾಲದಲ್ಲಿ ಭಾರತದಲ್ಲಿ ತೀವ್ರವಾದಿಗಳ ರಾಜಕೀಯ ಬಹಳ ಜೋರಾಗಿತ್ತು. ಲಂಡನ್ನಿನಲ್ಲಿ ಭಾರತೀಯ

ಶಕ್ತಿಗಳು ಕೂಡಿಕೊಂಡು ಬ್ರಿಟಿಷರ ಹತ್ಯೆಯನ್ನು ಮಾಡಿದ್ದವು. ಗಾಂಧಿ-ವೀರ ಸಾವರ್ಕರ್ ಮಧ್ಯೆ ಚರ್ಚೆಗಳೂ ಆಗಿದ್ದವು. ಗಾಂಧಿಗೆ ತಮ್ಮದೇ ಆದ Radicalism ನ್ನು ಪ್ರತಿಪಾದಿಸುವುದು ಅಗತ್ಯವೆನಿಸಿತ್ತು. ಅವರ ಅಹಿಂಸೆ ಮಾರ್ಕ್ಸ್‌ವಾದಕ್ಕಿಂತ ಭಿನ್ನವಾದದ್ದೇ ಇತ್ತು. ಹಿಂದ್‌ಸ್ವರಾಜ್ ಬರೆದ ಕೆಲದಿನಗಳ ಹಿಂದೆ ಗಾಂಧೀಜಿ ವೀರಸಾವರ್ಕರ್ ಅವರಿಗೆ ತಮ್ಮ ಒಂದು ಪತ್ರದಲ್ಲಿ ಹೀಗೆಬರೆದಿದ್ದರು. **I may say that those who belive in the arguement that such murders may do good to India are ignorant men indeed.**

Radicalism ಅಹಿಂಸೆಯ ವಿರೋಧಿ ಎನ್ನುತ್ತಾರೆ ಕೆಲವರು. ಏಕೆಂದರೆ ಅದು ಎಡಪಂಥೀಯ ಚಿಂತನೆಗಳಿಂದ ಪ್ರೇರೇಪಿತವಾದ ವಿಚಾರ. ಅದು ಕ್ರಾಂತಿಕಾರಿ ಬದಲಾವಣೆಗಳನ್ನು ಹಿಂಸಾಮಾರ್ಗದಲ್ಲಿ ತರಲು ಬಯಸುತ್ತದೆ. ಗಾಂಧೀಜಿಯ ರ್‍ಯಾಡಿಕ್ಯಾಲಿಸಂನಲ್ಲಿ ಕೆಲವು ವೈರುಧ್ಯಗಳು ಇವೆ. ತೀವ್ರವಾದ ವಿಮರ್ಶೆಯೂ ಇದೆ. ಭವಿಷ್ಯತ್ತಿನ ಕುರಿತಾದ ಗಂಭೀರವಾದ ಕಲ್ಪನೆಗಳೂ ಇವೆ.

ಗಾಂಧೀಜಿಯ Radicalism ನಿಂತಿರುವುದು ಕೆಲವು ಅಂಶಗಳ ಮೇಲೆ. ಅದರಲ್ಲಿ ಪಾಶ್ಚಾತ್ಯ ನಾಗರಿಕತೆ ಬಹಳ ಮುಖ್ಯವಾದದ್ದು. ಪಾಶ್ಚಿಮಾತ್ಯ ನಾಗರಿಕತೆಯನ್ನು ಸೈತಾನ್ ನಾಗರಿಕತೆ ಎಂದು ಗಾಂಧೀ ಕರೆದರು. ಗಾಂಧಿ ದೃಷ್ಟಿಯಲ್ಲಿ ಪಾಶ್ಚಾತ್ಯ ನಾಗರಿಕತೆ 'ಹುಚ್ಚುತನ', 'ಅಧರ್ಮ', ಮಾಯಾಜಾಲ ಮದ್ಯದ ಅಮಲು ವಿನಾಶಕಾರಿ 'ಗೆದ್ದಲುಹುಳು'. ಈ ಸಂಸ್ಕೃತಿಯಲ್ಲಿ ನೀತಿಯೂ ಇಲ್ಲ ಧರ್ಮವೂ ಇಲ್ಲ. ನಾವು ತಾಳ್ಮೆಯಿಂದಿದ್ದರೆ, ಈ ಸಂಸ್ಕೃತಿ ತನ್ನ ಬೆಂಕಿಗೆ ತಾನೇ ಸುಟ್ಟು ಭಸ್ಮವಾಗುತ್ತದೆ. ಈ ಪುಸ್ತಕ ಬರೆದಾಗ ಮಾರ್ಕ್ಸ್‌ವಾದಿಗಳು ಭಾರತದಲ್ಲಿ ರಾಜಕೀಯವಾಗಿ ಬೆಳೆದಿರಲಿಲ್ಲ. ಅವರಿಗೆ ಆಗ ಭಾರತದಲ್ಲಿ ಬೆಲೆ ಇರಲಿಲ್ಲ. ಈ ತೀವ್ರಗಾಮಿಗಳಿಗೆ ತಕ್ಷಣದ ಲಾಭದ ಬಗ್ಗೆ ಗಮನವಿತ್ತೇ ಹೊರತು ವಸಾಹತುಶಾಹಿ ಸೈತಾನ ಸಂಸ್ಕೃತಿಯನ್ನು ಪ್ರಶ್ನಿಸುವ ಇಚ್ಛಾಶಕ್ತಿ ಇರಲಿಲ್ಲ. ಹಿಂದ್ ಸ್ವರಾಜ್ ನಿಂತಿರುವುದೇ ನೈತಿಕ ತಳಹದಿಯ ಮೇಲೆ.

ಗಾಂಧೀಜಿಯ ಹೋರಾಟದ ವೈಖರಿ

ಗಾಂಧೀಜಿಯ ಹೋರಾಟದ strategy ಏನೆಂದರೆ ಸಂಧಾನಕ್ಕೆ ಬಾಗಿಲು ತೆರೆದಿಟ್ಟು ಚಳುವಳಿ ಹೂಡುವುದು. ಚಳುವಳಿ, ಸಂಧಾನ ಇವು ಅವರ ದೃಷ್ಟಿಯಲ್ಲಿ ಪೂರಕ ತಂತ್ರಗಳು. ಬ್ರಿಟಿಷರದೂ ಅಂಥದೇ ದ್ವಂದ್ವ ನೀತಿ, ಅದೆಂದರೆ ದಬ್ಬಾಳಿಕೆ, ಸುಧಾರಣೆ. ಬ್ರಿಟಿಷರ ಉದ್ದೇಶ ಭಾರತವನ್ನು ಶಾಶ್ವತವಾಗಿ ತಮ್ಮ ಅಧೀನದಲ್ಲಿಟ್ಟುಕೊಳ್ಳುವುದೇ ಆಗಿತ್ತು. ಸ್ವದೇಶಿ ಚಳುವಳಿ, ಆಗದೇ ಇದ್ದಿದ್ದರೆ ಮಾರ್ಲೆ ಮಿಂಟೋ ಸುಧಾರಣೆ ಜಾರಿಗೆ ಬರುತ್ತಿರಲಿಲ್ಲ. ಚಳುವಳಿ ಸಂಧಾನಗಳ ಜೋಡಿತಂತ್ರ ಚಳುವಳಿಗೆ ಬಲಗೊಳ್ಳುವ ಸಾಮರ್ಥ್ಯವನ್ನು ನೀಡಿತು. ಸಂಘಟನೆ ಮತ್ತು ಪ್ರಚಾರಕಾರ್ಯಗಳಿಂದ ಚಳುವಳಿಯನ್ನು ಬಲಗೊಳಿಸುವುದು. ಆ ಬಲವನ್ನು ಬಳಸಿ, ಚಳುವಳಿ ಹೂಡುವುದು, ಚಳುವಳಿಯ ಕಾವು ಇಳಿಮುಖವಾದಾಗ ಚಳುವಳಿಯನ್ನು ಬಿಟ್ಟು ಹಿಂದೆ ಸರಿಯುವುದು. ಮತ್ತೊಂದು ಚಳವಳಿಗೆ ಅಣಿಮಾಡಲು ಪ್ರಚಾರ ಕಾರ್ಯದಲ್ಲಿ ತೊಡಗುವುದು. ಹೀಗೆ ಒಂದು ವಿಧವಾದ ಲಯಬದ್ಧವಾದ ಏರಿಳಿತವನ್ನು ನಮ್ಮ ರಾಷ್ಟ್ರೀಯ ಹೋರಾಟದಲ್ಲಿ ಕಾಣುತ್ತೇವೆ.

ಗಾಂಧೀಜಿ ಭಾರತದ ರಾಜಕೀಯ ಪ್ರವೇಶ ಮಾಡುವುದಕ್ಕೆ ಮೊದಲು ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ತೀವ್ರಗಾಮಿ, ಮಂದಗಾಮಿಗಳ ಸಂಘರ್ಷ ನಡೆಯುತ್ತಿತ್ತು. ಗೋಪಾಲಕೃಷ್ಣ ಗೋಖಲೆ ಅವರು ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಕಾಲ. ಗೋಖಲೆ ಅವರು ಶಾಸನಾನುವರ್ತಿಗಳು. ಇಂಗ್ಲಿಷರು ರೂಪಿಸಿರುವ ಭಾರತೀಯ ಸಂವಿಧಾನವನ್ನು ಭಾರತೀಯರ ಪರವಾಗಿ ಬಳಸಿಕೊಳ್ಳಬೇಕು. ಆ ಸಂವಿಧಾನವನ್ನು ಉತ್ತಮಗೊಳಿಸಬೇಕು. ಅದಕ್ಕಾಗಿ ಅಧಿಕಾರಶಾಹಿಯೊಂದಿಗೆ ಕೈಜೋಡಿಸಿ ಕೆಲಸ ಮಾಡಬೇಕು ಎಂಬುದು ಅವರ ಕಾರ್ಯತಂತ್ರ. ಇಂಗ್ಲೀಷರ ಅಧೀನದಲ್ಲೇ ಭಾರತ

ಸರ್ಕಾರ ಸರ್ವತಂತ್ರ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕು ಎಂಬುದು ಅವರ ನಿಲುವು. **Dominian Status** ಅವರ ಗುರಿ. ಗಾಂಧೀಜಿ ತಮ್ಮ ರಾಜಕೀಯ ಗುರುಗಳಾದ ಗೋಖಲೆಯವರ ನಿಲುವಿಗೇ ಮೊದಲಲ್ಲಿ ಬೆಂಬಲವಿತ್ತರು. ರಾಷ್ಟ್ರೀಯ ಕಾಂಗ್ರೆಸ್ ಕೂಡ **Dominian Status** ತನ್ನ ಗುರಿ ಎಂದು ಘೋಷಿಸಿತ್ತು.

ಬಾಲಗಂಗಾಧರ ತಿಲಕರು ಕಾಂಗ್ರೆಸ್ ಸಂಸ್ಥೆಯ ಪ್ರಮುಖ ನಾಯಕರಾಗಿದ್ದರು. ಆದರೆ ಅವರು ತೀವ್ರಗಾಮಿಗಳಾಗಿದ್ದರು. ಬ್ರಿಟಿಷರು ತಯಾರಿಸಿರುವ ಭಾರತ ಸಂವಿಧಾನವನ್ನು ಪುನರ್ರಚಿಸಬೇಕು ಎಂದು ಆಗ್ರಹಪೂರ್ವಕವಾಗಿ ಅವರು ಹೇಳುತ್ತಿದ್ದರು. 'ಅಧಿಕಾರಶಾಹಿಯೊಂದಿಗೆ ಸಂಘರ್ಷಕ್ಕೆ ಇಳಿಯಬೇಕು. ಕಷ್ಟಾನುಭವಕ್ಕೆ ಸಿದ್ಧರಾಗಬೇಕು. ಬ್ರಿಟಿಷರೊಡನೆ ಹೊಂದಾಣಿಕೆ ಮಾಡಿಕೊಳ್ಳುವುದಲ್ಲ ನನ್ನ ಗುರಿ. ರಾಜಕೀಯ ಹಕ್ಕುಗಳನ್ನು ಹೋರಾಡಿ ಗಳಿಸಿಕೊಳ್ಳಬೇಕೇ ವಿನಃ ಬ್ರಿಟಿಷರ ಮನ ಒಲಿಸುವ ಮೂಲಕ ಅಲ್ಲ. ಇಂಗ್ಲೀಷರು ರಚಿಸಿರುವ ಭಾರತೀಯ ಸಂವಿಧಾನ ಇಂಡಿಯನ್ ಪೀನಲ್ ಕೋಡ್‌ಗಿಂತ ಅಧ್ವಾನ. ಬ್ರಿಟಿಷರೊಡನೆ ಹೋರಾಡಿ ಸ್ವರಾಜ್ಯ ಸ್ಥಾಪನೆ ಮಾಡಬೇಕು. ಬ್ರಿಟಿಷರನ್ನು ಭಾರತದಿಂದ ಹೊರಗಟ್ಟಬೇಕು'–ಇದು ತಿಲಕರ ಸಿದ್ಧಾಂತ.

ಪ್ರತಿ ಸಾರಿ ಕಾಂಗ್ರೆಸ್ ಅಧಿವೇಶನ ನಡೆದಾಗಲೂ ಶಾಸನಾನುವರ್ತಿ ನಾಯಕರಿಗೂ, ತೀವ್ರವಾದಿಗಳಿಗೂ ವಾಗ್ವಾದಗಳು ನಡೆಯುತ್ತಲೇ ಇದ್ದವು. ಇದು ಜೀವಂತ ಸಂಸ್ಥೆಯ ಸಂಕೇತವಾಗಿತ್ತು. ತೀವ್ರವಾದಿಗಳ ಅಭಿಪ್ರಾಯಗಳು ಸ್ಫುಟಗೊಳ್ಳುತ್ತಿರುವ ಲಕ್ಷಣಗಳು ಕಾಣಿಸಿಕೊಂಡಾಗ ಬ್ರಿಟಿಷರು ಒಡೆದು ಆಳುವ ನೀತಿಗೆ ಕೈ ಹಾಕಿದರು. ಇದರಿಂದಾಗಿ ಜನಾಂದೋಲನವನ್ನು ಸಂಘಟಿಸುವುದು ಅನಿವಾರ್ಯವಾಯಿತು. ಮುಸ್ಲಿಮರು ಅಧಿಕವಾಗಿದ್ದ ಪೂರ್ವ ಬಂಗಾಳವನ್ನೂ, ಹಿಂದೂಗಳು ಬಹುಸಂಖ್ಯೆಯಲ್ಲಿದ್ದ ಪಶ್ಚಿಮ ಬಂಗಾಳವನ್ನೂ ಎರಡಾಗಿ ವಿಭಜಿಸುವ ಹುನ್ನಾರವನ್ನು ಬ್ರಿಟಿಷ್ ಸರ್ಕಾರ ಮಾಡಿತು. 1906ರಿಂದ 11ರವರೆಗೆ ಇದರ ವಿರುದ್ಧ ಹೋರಾಟ ನಡೆಯಿತು. ಈ ಹೋರಾಟವನ್ನು

ತೀವ್ರವಾದಿಗಳು ನಡೆಸಿದರು. ಈ ಅವಧಿಯಲ್ಲಿ ಕ್ರಾಂತಿಕಾರಿ ಚಟುವಟಿಕೆಗಳು ಆರಂಭವಾದವು. 1907 ರಿಂದ 14ರವರೆಗೆ ಬಂಗಾಳದಲ್ಲಿ 12 ಬಾಂಬ್ ಪ್ರಕರಣಗಳು, 31 ಹತ್ಯೆಗಳು, 72 ರಾಜಕೀಯ ಉದ್ದೇಶದ ಡಕಾಯಿತಿಗಳು ನಡೆದವು.

ಈ ಹೋರಾಟದ ಫಲವಾಗಿ ಬ್ರಿಟಿಷರು ವಂಗ ವಿಭಜನೆಯ ಕಾರ್ಯವನ್ನು ಕೈಬಿಡಬೇಕಾಯಿತು. ರಾಷ್ಟ್ರೀಯ ಕಾಂಗ್ರೆಸ್ ಈ ವೇಳೆಗಾಗಲೇ ಅಸ್ತಿತ್ವಕ್ಕೆ ಬಂದಿತ್ತು. ಆದರೆ ಅದು ವಿಶಿಷ್ಟ ಜನರ ಸ್ವತ್ತಾಗಿತ್ತು. ಜನಸಾಮಾನ್ಯರನ್ನು ಹೋರಾಟಕ್ಕೆ ತರುವ ಪ್ರಯತ್ನವನ್ನು ಬಾಲಗಂಗಾಧರ ತಿಲಕರು, ಲಾಲಾಲಜಪತ್‌ರಾಯ್ ಅವರು, ಬಿಪಿನ್ ಚಂದ್ರಪಾಲ್ ಅವರು ಮಾಡುತ್ತಿದ್ದರು. **Lal, Pal, Bal** ಎಂದೇ ಈ ಮೂವರೂ ಪ್ರಸಿದ್ಧರಾಗಿದ್ದರು. ಇವರನ್ನು ತೀವ್ರಗಾಮಿಗಳೆಂದು ಜನ ಕರೆದರು.

'ಸ್ವಾತಂತ್ರ್ಯ ಬೇಡಿ ಪಡೆಯುವ ವಸ್ತುವಲ್ಲ. ಹೋರಾಟ ಮಾಡಿ ಪಡೆಯಬೇಕು ಪರಕೀಯರಾದ ಇಂಗ್ಲಿಷರನ್ನು ಭಾರತದಿಂದ ಹೊಡೆದೋಡಿಸಬೇಕು. 'ಸ್ವರಾಜ್ಯ ನನ್ನ ಆಜನ್ಮಸಿದ್ಧ ಹಕ್ಕು ಅದನ್ನು ನಾನು ಪಡೆದೇ ಪಡೆಯುತ್ತೇನೆ', ಎಂಬುದು ಅವರ ನಿಲುವು. ಜನಸಾಮಾನ್ಯರನ್ನು ತಮ್ಮ ತೀವ್ರತರ ಚಳುವಳಿಗೆ ಎಳೆಯುವ ದೃಷ್ಟಿಯಿಂದ, ಅವರಲ್ಲಿ ರಾಷ್ಟ್ರೀಯತೆಯ ಭಾವನೆಯನ್ನು ಉದ್ದೀಪನಗೊಳಿಸುವ ದೃಷ್ಟಿಯಿಂದ ತಿಲಕರು ಗಣೇಶನ ಹಬ್ಬ, ಛತ್ರಪತಿ ಶಿವಾಜಿ ಜಯಂತಿಗಳನ್ನು ಸಾರ್ವಜನಿಕವಾಗಿ ಆಚರಿಸಲು ಮೊದಲು ಮಾಡಿದರು. ಹೀಗೆ ಸಾರ್ವಜನಿಕವಾಗಿ ಈ ಉತ್ಸವಗಳನ್ನು ಏರ್ಪಡಿಸುವ ಸಂದರ್ಭದಲ್ಲಿ ಪ್ರತಿಷ್ಠಿತ ನಾಯಕರನ್ನೂ, ವಾಗ್ಮಿಗಳನ್ನೂ ಕರೆಸಿ ರಾಷ್ಟ್ರೀಯತೆ ಕುರಿತು ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು. ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ 1919ರಲ್ಲಿ ಭಾರತಕ್ಕೆ ಹಿಂದಿರುಗಿದರು. ಭಾರತದ ರಾಜಕೀಯಕ್ಕೆ ಪ್ರವೇಶ ಮಾಡುವ ಮೊದಲು ಗಾಂಧೀಜಿ ಜನಸಾಮಾನ್ಯರ ಸಮಸ್ಯೆಗಳ ಪರಿಹಾರಕ್ಕೆ ಗಮನ ನೀಡಲು ಆರಂಭಿಸಿದರು. ಚಂಪಾರಣ್‌ನ ನೀಲಿ ಬೆಳೆಗಾರರು ಇಂಗ್ಲಿಷ್

ವ್ಯಾಪಾರಿಗಳಿಂದ ಅನುಭವಿಸುತ್ತಿದ್ದ ತೊಂದರೆಗಳ ನಿವಾರಣೆಗೆ ಸತ್ಯಾಗ್ರಹ ನಡೆಸಿದರು. ರೈತರ ಸಂಘಟನೆಯ ಕೆಲಸ ಮಾಡಿದರು. ಅವರಿಗೆ ಪರಿಹಾರ ಒದಗಿಸಿಕೊಟ್ಟರು.

ಕ್ಷಾಮದ ಕಾರಣದಿಂದ ಬೆಳೆಯಾಗದೆ ಕಂದಾಯ ಕಟ್ಟುವುದು ಖೇಡಾದ ರೈತಾಪಿಗಳಿಗೆ ಆಗಲಿಲ್ಲ. ಸರ್ಕಾರ ಒತ್ತಾಯಪೂರ್ವಕವಾಗಿ ಕಂದಾಯ ವಸೂಲ್ಮಾಡಲು ತೊಡಗಿತು. ಆಗ ರೈತರು ಕರ ನಿರಾಕರಣ ಚಳುವಳಿ ನಡೆಸುವುದು ಅನಿವಾರ್ಯವಾಯಿತು. ಗಾಂಧೀಜಿ ಈ ಹೋರಾಟದ ಮುಂದಾಳತ್ವ ವಹಿಸಿದರು. ಗಾಂಧೀಜಿ ಇಂತಹ ಜನಪರ ಹೋರಾಟಗಳನ್ನು ಕೈಗೆತ್ತಿಕೊಳ್ಳುವ ಮೂಲಕ ಜನಸಾಮಾನ್ಯರ ಮನ ಗೆದ್ದರು. ಜನತೆಯ ಒಳಿತಿಗಾಗಿ ಕಾಂಗ್ರೆಸ್ ಸಂಸ್ಥೆ ಅಸ್ತಿತ್ವಕ್ಕೆ ಬಂದಿದೆ. ಆದ್ದರಿಂದ ಕಾಂಗ್ರೆಸ್ ಸಂಸ್ಥೆಯೊಡನೆ ಕೂಡಿಕೊಂಡು ಅದರ ಎಲ್ಲ ಹೋರಾಟಗಳಲ್ಲಿ ಭಾಗಿಯಾಗಬೇಕು ಎಂದು ಜನಸಾಮಾನ್ಯರು ಭಾವಿಸಿದರು. ಇದರಿಂದ ಸ್ವಾತಂತ್ರ್ಯ ಹೋರಾಟಕ್ಕೆ ಬಲ ಬಂದಿತು.

ಮೊದಲಿಗೆ ಕಾಂಗ್ರೆಸ್ ಸಂಸ್ಥೆ ಬ್ರಿಟಿಷರ ಆಶ್ರಯದಲ್ಲಿ **Dominian Status** ಪಡೆಯುವುದನ್ನು ತನ್ನ ಗುರಿಯಾಗಿಟ್ಟುಕೊಂಡಿತ್ತು. 1929ರ ಮದ್ರಾಸ್ ಕಾಂಗ್ರೆಸ್ ಅಧಿವೇಶನದಲ್ಲಿ ಆಗತಾನೇ ರಾಜಕೀಯ ಪ್ರವೇಶಿಸಿದ್ದ ಸುಭಾಷ್ ಚಂದ್ರಬೋಸರು 'ಪೂರ್ಣ ಸ್ವರಾಜ್ಯ' ರಾಷ್ಟ್ರೀಯ ಕಾಂಗ್ರೆಸ್ಸಿನ ಗುರಿಯಾಗಬೇಕು ಎಂಬ ತಿದ್ದುಪಡಿಯನ್ನು ಅಧಿವೇಶನದಲ್ಲಿ ಮಂಡಿಸಿದರು. ಈ ತಿದ್ದುಪಡಿಯನ್ನು ಗಾಂಧೀಜಿ ವಿರೋಧಿಸಿದರು. ಈ ತಿದ್ದುಪಡಿಯ ಪರವಾಗಿ ವಿರೋಧವಾಗಿ ತುಂಬ ಚರ್ಚೆ ನಡೆಯಿತು. ಕೊನೆಯಲ್ಲಿ ಈ ತಿದ್ದುಪಡಿಯನ್ನು ಮತಕ್ಕೆ ಹಾಕಿದಾಗ ತಿದ್ದುಪಡಿಯ ಪರವಾಗಿ 960 ಮತಗಳು, ವಿರುದ್ಧವಾಗಿ 1024 ಮತಗಳೂ ಬಿದ್ದವು. ತಿದ್ದುಪಡಿ ತಿರಸ್ಕೃತವಾಯಿತು. ಹೊಸದಾಗಿ ಕಾಂಗ್ರೆಸ್ಸಿಗೆ ಸೇರಿದ್ದ ಸುಭಾಷ್‌ಚಂದ್ರ ಬೋಸರು ಕಾಂಗ್ರೆಸ್ಸಿನ ಬಹು ಮಂದಿ ಯುವ ಪ್ರತಿನಿಧಿಗಳ ಮನಸ್ಸುಗಳನ್ನು ಈ ಅಧಿವೇಶನದಲ್ಲಿ ಗೆದ್ದುಕೊಂಡದ್ದು ಒಂದು ವಿಶೇಷ.

ಮುಂದಿನ ವರ್ಷ 1930ರಲ್ಲಿ ನಡೆದ ಲಾಹೋರ್ ಅಧಿವೇಶನದಲ್ಲಿ ಗಾಂಧಿಯವರೇ ಕಾಂಗ್ರೆಸ್ ಅಂಗರಚನೆಯಲ್ಲಿ 'ಪೂರ್ಣ ಸ್ವರಾಜ್ಯ' ಸಂಪಾದನೆ ಕಾಂಗ್ರೆಸ್ಸಿನ ಗುರಿ, ಎಂಬ ತಿದ್ದುಪಡಿಯನ್ನು ಮಂಡಿಸಿ ಸರ್ವಾನುಮತದಿಂದ ಅದರ ಅನುಮೋದನೆ ಪಡೆದರು. ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಜನಾಂದೋಳನಗಳನ್ನು ಸಂಘಟಿಸುವ ಮೂಲಕ ಸರ್ಕಾರವನ್ನು ಮಣಿಸಿದರು. ಜನರ ವಿಶ್ವಾಸವನ್ನು ಗಳಿಸಿದರು. ಮುಂದೆ ಆ ಜನರನ್ನೇ ಸ್ವಾತಂತ್ರ್ಯ ಸಂಗ್ರಾಮಕ್ಕೆ ಬಳಸಿಕೊಂಡು ತಮ್ಮ ಗುರಿ ಮುಟ್ಟಿದರು. ರಾಷ್ಟ್ರೀಯ ಸಮಸ್ಯೆಗೆ ಸತ್ಯಾಗ್ರಹವನ್ನು ಅಳವಡಿಸಿಕೊಳ್ಳುವ ಮೊದಲು ಗಾಂಧೀಜಿ ಅಹಿಂಸೆಯ ಶಕ್ತಿ ಸಾಮರ್ಥ್ಯಗಳನ್ನು ಮನಗಾಣಬೇಕಾಗಿತ್ತು. ಚಂಪಾರಣ್‌ನಲ್ಲಿ ಅಹಮದಾಬಾದ್‌ನಲ್ಲಿ, ಖೇಡಾದಲ್ಲಿ ಸತ್ಯಾಗ್ರಹದ ಪ್ರಯೋಗ ಮಾಡುತ್ತಾರೆ. ಸತ್ಯಾಗ್ರಹವನ್ನು ಸಮರ್ಥವಾಗಿ ನಡೆಸುವ ಹಾಗೂ ಸರ್ಕಾರವನ್ನು ಮಣಿಸುವ ತಂತ್ರ ರೂಪಿಸುವುದರಲ್ಲಿ ಗಾಂಧೀಜಿ ತಮ್ಮದೇ ಆದ ಒಂದು ಪ್ರಯೋಗ ನಡೆಸುತ್ತಾರೆ. ಅದರ ವಿವರಗಳು ಇಲ್ಲಿದೆ.

ಗುಜರಾತಿನ ಖೇಡಾದಲ್ಲಿ 1918ರಲ್ಲಿ ಕ್ಷಾಮ ಬಂದಿತು. ಮಳೆ ಇಲ್ಲದೆ ಜಮೀನುಗಳಲ್ಲಿ ವ್ಯವಸಾಯ ಆಗಿರಲಿಲ್ಲ. ಸರ್ಕಾರ ಆ ವರ್ಷದ ಭೂಮಿಯ ಕಂದಾಯ ಕಟ್ಟಬೇಕೆಂದು ರೈತರಿಗೆ ನೋಟೀಸ್ ನೀಡಿತು. ರೈತರು 'ಈ ವರ್ಷ ಕಂದಾಯ ಕಟ್ಟಲು ಸಾಧ್ಯವಿಲ್ಲ. ಮುಂದಿನ ವರ್ಷ ಕಟ್ಟುತ್ತೇವೆ' ಎಂದರು. ಸರ್ಕಾರ ಅದು ಸಾಧ್ಯವಿಲ್ಲ. ಈ ವರ್ಷವೇ ಕಂದಾಯ ಸಂದಾಯವಾಗಬೇಕೆಂದು ಪಟ್ಟುಹಿಡಿಯಿತು. ಖೇಡಾದ ರೈತರು ಆಗತಾನೆ ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿದ್ದ ಗಾಂಧಿಯವರನ್ನು ಕಂಡು ತಮ್ಮ ಬವಣೆ ತೋಡಿಕೊಂಡರು. ರೈತರು ಒಗ್ಗಟ್ಟಾಗಿ ನಿಂತು ಹೋರಾಡುವುದಾದರೆ ತಾವು ಈ ಹೋರಾಟದ ನಾಯಕತ್ವ ವಹಿಸಿಕೊಳ್ಳುವುದಾಗಿ ಗಾಂಧೀಜಿ ಹೇಳಿದರು. ರೈತರು ಒಪ್ಪಿಕೊಂಡರು. 'ರೈತರು ಈ ಸಾರಿ ಕ್ಷಾಮದ ಕಾರಣದಿಂದ ತಮ್ಮ ಕಂದಾಯದ ಬಾಕಿಯನ್ನು ನೀಡಲು ಸಾಧ್ಯವಾಗುತ್ತಿಲ್ಲ. ಆ ಬಾಕಿಯ

ಹಣವನ್ನು ಮುಂದಿನ ವರ್ಷ ಸಂದಾಯ ಮಾಡುತ್ತಾರೆ. ನೀವು ಒತ್ತಾಯದಿಂದ ಕಂದಾಯ ವಸೂಲು ಮಾಡಲು ಕ್ರಮ ಕೈಗೊಳ್ಳುವುದಾದರೆ ರೈತರು ವಿಧಿಯಿಲ್ಲದೆ ಹೋರಾಟದ ಮಾರ್ಗ ಹಿಡಿಯಬೇಕಾಗುತ್ತದೆ' ಎಂದು ಸರ್ಕಾರಕ್ಕೆ ಪತ್ರ ಬರೆದರು. ಸರ್ಕಾರ ಸ್ಪಂದಿಸಲಿಲ್ಲ. ಹೋರಾಟ ಅನಿವಾರ್ಯವಾಯಿತು. ಗಾಂಧೀಜಿಯ ಹೋರಾಟದಲ್ಲಿ ಒಂದು ವಿಶೇಷತೆ ಇತ್ತು. ಅವರು ಮೊದಲು, ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿಪತ್ರ ಸಲ್ಲಿಸುತ್ತಿದ್ದರು. ಪತ್ರಿಕಾ ಹೇಳಿಕೆ ನೀಡುತ್ತಿದ್ದರು. ಅಧಿಕಾರಿಗಳನ್ನು ಭೇಟಿ ಮಾಡುತ್ತಿದ್ದರು. ಅಧಿಕಾರಿಗಳ ನಿಲುವನ್ನು ಪ್ರಶ್ನಿಸುತ್ತಿದ್ದರು. ಜೊತೆಜೊತೆಗೇ ಗಾಂಧೀಜಿ ಸತ್ಯಾಗ್ರಹ ನಡೆಯುವ ಎಲ್ಲ ಊರುಗಳಲ್ಲೂ ರೈತರನ್ನು ಕುರಿತು ಸಭೆ ನಡೆಸುತ್ತಿದ್ದರು. ಸತ್ಯಾಗ್ರಹದ ವಿವರಗಳನ್ನು ನೀಡುತ್ತಿದ್ದರು.

ಇದರ ಮಧ್ಯೆ ಸಮಸ್ಯೆಯ ಪರಿಹಾರಕ್ಕೆ ಗೌರ್ನರನನ್ನು ಭೇಟಿ ಮಾಡುತ್ತಿದ್ದರು. ವೈಸರಾಯರಿಗೆ ಪತ್ರ ಬರೆಯುತ್ತಿದ್ದರು. ಸತ್ಯಾಗ್ರಹ ಒಂದು ನಿಗದಿತ ಜಿಲ್ಲೆಗೆ ಅನ್ವಯಿಸುವುದಾಗಿದ್ದರೂ ಅದರ ಪರಿಹಾರಕ್ಕೆ ಅವರು ವೈಸ್‌ರಾಯ್ ಅವರ ಕದ ತಟ್ಟುತ್ತಿದ್ದರು. ಖೇಡಾ ಕರನಿರಾಕರಣ ಚಳುವಳಿಯನ್ನೇ ಅಧ್ಯಯನ ಮಾಡೋಣ. ಆ ಸತ್ಯಾಗ್ರಹದ ಸಂದರ್ಭದಲ್ಲಿ ಗಾಂಧೀಜಿ ನೂರಾರು ಹಳ್ಳಿಗಳಲ್ಲಿ, ಊರುಗಳಲ್ಲಿ ಸಾರ್ವಜನಿಕ ಸಭೆಗಳನ್ನು ಕಾಲಕಾಲಕ್ಕೆ ಏರ್ಪಡಿಸಿ, ಸತ್ಯಾಗ್ರಹದ ಪ್ರಗತಿಯ ಬಗೆಗೆ ಮಾಹಿತಿ ನೀಡುತ್ತಿದ್ದರು. ಸತ್ಯಾಗ್ರಹಿಗಳಿಗೆ ಧೈರ್ಯ ತುಂಬುತ್ತಿದ್ದರು. ಎಚ್ಚರಿಕೆ ನೀಡುತ್ತಿದ್ದರು. ಸತ್ಯಾಗ್ರಹಿಯು ಅನುಸರಿಸಬೇಕಾದ ನಿಯಮಗಳನ್ನು ತಿಳಿಸಿ ಹೇಳುತ್ತಿದ್ದರು. ನಡಿಯಾದ್‌ನಲ್ಲಿ 23–03–1918 ರಲ್ಲಿ ಸಭೆ ಸೇರಿಸಿ ಸತ್ಯಾಗ್ರಹಿಗಳಿಂದ ಪ್ರತಿಜ್ಞೆ ಮಾಡಿಸಿದರು.

ದಿ.10–04–1918ರಲ್ಲಿ ಅಕ್ಲಾಚಾದಲ್ಲಿ, ಸಿನ್‌ವುಜ್‌ನಲ್ಲಿ, ಬರೋಡಾದಲ್ಲಿ ಸತ್ಯಾಗ್ರಹಿಗಳ ಸಭೆ ನಡೆಸಿದರು. ತದನಂತರ ಕಮಿಷನರನ್ನು ಭೇಟಿ ಮಾಡಿ ವಿಚಾರ ವಿನಿಮಯ ಮಾಡಿದರು. 'ದಿ ಬಾಂಬೆ ಕ್ರಾನಿಕಲ್'ಗೆ ಪತ್ರ ಬರೆದರು. ಕಮೀಷನರ್ ಭಾಷಣದ

ವಿಚಾರದಲ್ಲಿ ತಮ್ಮ ಪ್ರತಿಕ್ರಿಯೆಯನ್ನು ಈ ಪತ್ರಿಕೆಗೆ ನೀಡಿದರು. '4 ಲಕ್ಷ ರೂ.ಗಳ ಕಂದಾಯ ಬಾಕಿಗಾಗಿ 3 ಕೋಟಿ ರೂಗಳ ಬೆಲೆಬಾಳುವ 150 ಸಾವಿರ ಎಕರೆ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳುವುದಾಗಿ ಕಮಿಷನರ್ ಹೇಳಿದ್ದಾರೆ. ಈ ಬಗೆಯ ಬೆದರಿಕೆ ಹಾಕಿ ರೈತರ ಹೃದಯಗಳನ್ನು ಉಕ್ಕಾಗಿಸಿದ್ದಾರೆ. ಈ ಸಮಸ್ಯೆ ಪರಿಹಾರಕ್ಕೆ 'ಪಂಚಾಯ್ತರನ್ನು ಗೊತ್ತುಮಾಡಿ' ಎಂದರೆ ಅದಕ್ಕೂ ಕಮಿಷನರ್ ಒಪ್ಪುತ್ತಿಲ್ಲ ಎಂದು ಬಹಿರಂಗ ಪತ್ರ ಬರೆದರು.

ದಿ. 17-04-1918ರಂದು ಸತ್ಯಾಗ್ರಹದಲ್ಲಿ ಭಾಗವಹಿಸುವವರಿಗಾಗಿ ಈ ಕೆಳಕಂಡ ಆದೇಶ ಹೊರಡಿಸಿದರು. 'ಹಗೆತನಕ್ಕೆ ಈ ಹೋರಾಟದಲ್ಲಿ ಸ್ಥಾನವಿಲ್ಲ. ಸತ್ಯಪರಿಪಾಲನೆ ಮಾಡಿ ಸರ್ಕಾರ ಎಂತಹ ತೊಂದರೆ ಕೊಟ್ಟರೂ ಆತ್ಮಗೌರವ ಕಾಪಾಡಿಕೊಳ್ಳಿ. ಅಧಿಕಾರಿಗಳಲ್ಲಿ ಒರಟುತನದಿಂದ ವರ್ತಿಸಬೇಡಿ. ಇದು ಧರ್ಮಯುದ್ಧ. ನಾವು ಕಾನೂನಿನ ಕುರುಡುತನವನ್ನು ವಿರೋಧಿಸಬೇಕೇ ಹೊರತು, ಅಧಿಕಾರಿಗಳನ್ನಲ್ಲ. ಸರ್ಕಾರ ಮತ್ತು ಜನ ಒಂದು ಕುಟುಂಬದವರೆಂದು ಸರ್ಕಾರವೂ ತಿಳಿಯಬೇಕು, ರೈತರೂ ತಿಳಿಯಬೇಕು. ಎದುರಾಳಿಯ ವಾದವನ್ನು ಕೇಳಿ, ಆ ವಾದ ನ್ಯಾಯವಾಗಿದ್ದಲ್ಲಿ ಅಧಿಕಾರಿಗಳು ಅದನ್ನು ಒಪ್ಪಿಕೊಳ್ಳಬೇಕು.

ಇದಾದ ನಂತರ ಗಾಂಧೀಜಿ ಖೇಡಾ ಪರಿಸ್ಥಿತಿ ಕುರಿತು ಸುತ್ತೋಲೆ ಹೊರಡಿಸಿದರು ಪತ್ರಿಕೆಗಳಿಗೆ ಹೇಳಿಕೆ ನೀಡಿದರು. ದಿ. 02-04-1918 ರಿಂದ 20-04-1918ರ ವರೆಗೆ ಕಜಾನಾ, ಅಂಬಾನಿ, ಕರಮ್‌ಸದ್, ತಡಧಾಲ್, ಉತ್ತರ್‌ಸಾಂದಾ, ನವಾನಾಂಢ್, ಬೋರ್ಸಾದ್ ದಂತಾಲಿಯಾ ಕಸಾಂ, ಅಜರ್‌ಪುರ್, ಕಲಾಜ್, ಸುನಾಬ್‌ಗಳಲ್ಲಿ ಸಾರ್ವಜನಿಕ ಸಭೆ ನಡೆಸಿ ಸತ್ಯಾಗ್ರಹದ ಪ್ರಗತಿಯ ಬಗೆಗೆ ತಿಳಿಸಿದರು. ಉತ್ತರ್‌ಸಾಂದಾ ಸಭೆಯಲ್ಲಿ ಮಹಿಳೆಯರೂ ಈ ಸತ್ಯಾಗ್ರಹದಲ್ಲಿ ಕೂಡಿಕೊಳ್ಳಬೇಕೆಂದು ಕರೆ ಇತ್ತರು. 'ಗುಜರಾತ್ ತೂಗಡಿಸುತ್ತಿದೆಯೆಂದು ಕೆಲವರು ಹೇಳುತ್ತಾರೆ. ಮಟಮಟ ಮಧ್ಯಾಹ್ನದ ಈ ಬಿಸಿಲಿನಲ್ಲೂ ಇಷ್ಟೊಂದು ಸಂಖ್ಯೆಯಲ್ಲಿ ಸ್ತ್ರೀಪುರುಷರು ಇಲ್ಲಿ ಸೇರಿರುವುದು ನಾವು

ಕುಂಭಕರ್ಣರಲ್ಲ ಎಂಬುದನ್ನು ಸಾಬೀತುಪಡಿಸುತ್ತದೆ. ನೀವು ನಮ್ಮ ಸತ್ಯಾಗ್ರಹಕ್ಕೆ ಜಯ ದೊರೆಯುವವರೆವಿಗೂ ವಿಶ್ರಮಿಸಬೇಡಿ, ಆಲಸ್ಯಕ್ಕೆ ಎಡೆಗೊಡಬೇಡಿ' ಎಂದು ಸುನಾಬ್‌ನ ಭಾಷಣದಲ್ಲಿ ಹೇಳಿದರು.

ದಿ. 06-05-1918ರಂದು ಖೇಡಾ ಬಿಕ್ಕಟ್ಟನ್ನು ಕುರಿತು ಸರ್ಕಾರದ ಪತ್ರಿಕಾ ಪ್ರಕಟಣೆಗೆ ಉತ್ತರವಿತ್ತರು. 16-05-1918ರಂದು ದುಂಡುಕರದಲ್ಲಿ ಮಾಡಿದ ಭಾಷಣದಲ್ಲಿ 'ವಿಚಾರಣಾ ಸಮಿತಿ ಮಾಡಿ' ಎಂದು ಸರ್ಕಾರಕ್ಕೆ ಒತ್ತಾಯ ಹಾಕಿದರು. ಬಾಂಬೆ ಕ್ರಾನಿಕಲ್‌ಗೆ ನೀಡಿದ ಸಂದೇಶದಲ್ಲಿ 'ನಾವು ಅಧಿಕಾರಿಗಳನ್ನು ಗೌರವದಿಂದ ಕಾಣುತ್ತೇವೆ. ಆದರೆ ರೈತರ ಮನೆಗಳ ಜಪ್ತಿಗೆ ಅವರಿಗೆ ನೆರವಾಗುವುದಿಲ್ಲ. ಅಧಿಕಾರಿಗಳಿಗೆ ಅನ್ನವಸತಿ ಒದಗಿಸುತ್ತೇವೆ. ಮುಟ್ಟುಗೋಲು ಹಾಕಿಕೊಳ್ಳಲು ಸಹಾಯ ನೀಡುವುದಿಲ್ಲ' ಎಂದು ಸ್ಪಷ್ಟಪಡಿಸಿದರು. ದಿ.15-05-1918ರಂದು ದಾಬೋಲ್ಕರ್ ಎಂಬುವವರಿಗೆ ಪತ್ರ ಬರೆದು 'ಪ್ರೇಮದಿಂದ ಈ ಪತ್ರ ಬರೆಯುತ್ತಿದ್ದೇನೆ. ಪ್ರಜೆಗಳ ಪ್ರತಿನಿಧಿಯಾಗಿ ನಾನು ವೈಸರಾಯರಿಗೆ ಪತ್ರ ಬರೆದರೆ, ಅದನ್ನು ಬಹಿರಂಗಪಡಿಸಿ, ಜನತೆಯ ಮುಂದಿಡಿ ಎಂದು ನೀವು ಒತ್ತಾಯ ತರುವುದು ಸರಿಯಲ್ಲ. ಸೌಜನ್ಯಯುತವಾಗಿ ಆದರೆ ಕಟುವಾಗಿ ಬರೆದಿರುವ ಈ ಪತ್ರವನ್ನು ಪ್ರಕಟಪಡಿಸುವುದು ತುಂಟತನಕ್ಕೆ ಆಹ್ವಾನವಿತ್ತಂತೆ. ಎಷ್ಟನ್ನು ಪ್ರಕಟಿಸಬಹುದೊ ಅಷ್ಟನ್ನು ಮಾತ್ರ ಪ್ರಕಟಿಸುತ್ತೇನೆ' ಎಂದು ತಿಳಿಸಿದರು. ದಿ.16-05-1918ರಂದು ಸಂದೇಸರ್‌ನಲ್ಲಿ ಮಾಡಿದ ಭಾಷಣದಲ್ಲಿ 'ಈ ಗ್ರಾಮದ ಜನ ತುಂಬ ಧೈರ್ಯ ತೋರಿದ್ದಾರೆ. ಧೇಡ್ ಜನಾಂಗದವರಿಗೆ ಖೇಡಾ ರೈತರು ಅವರ ಪಾಲಿನ ಫಸಲನ್ನು 4 ವರ್ಷಗಳಿಂದ ಕೊಟ್ಟಿಲ್ಲ ಎಂದು ಪಟೇಲ್ ಹೇಳುತ್ತಾರೆ. ರೈತರು ಈ ಬಗೆಯ ದೌರ್ಜನ್ಯ ಮಾಡಬಾರದು, ಎಂದು ಕಿವಿಮಾತು ಹೇಳಿದರು.

ದಿ. 27-05-1918ರಂದು ಖಂದಾಲಿಯಲ್ಲಿ ಭಾಷಣ ಮಾಡಿ, 'ಇಲ್ಲಿಯ ಕೆಲವರು ಹೂಡುತ್ತಿರುವ ತಂತ್ರಗಳು ಹೋರಾಟದ

ಸ್ವರೂಪವನ್ನು ಕೆಡಿಸುವುದೆಂದು ಕಲೆಕ್ಟರ್ ಹೇಳಿದರು. 'ನಿಜವಾದ ಸಾಹಸ ಇರುವುದು' ಪೊಲೀಸರ ಲಾಠಿಯಿಂದ ಏಟು ತಿನ್ನುವುದರಲ್ಲಿ. ಏಟು ಕೊಡುವುದರಲ್ಲಲ್ಲ. ನಿಮ್ಮ ಧೈರ್ಯ ಪ್ರಕಟವಾಗುವುದು ನಿಮ್ಮ ಸಹನೆಯಲ್ಲಿ. ಅದೇ ನಿಜವಾದ ಸತ್ಯಾಗ್ರಹ. ಅಪರಾಧ ಮಾಡಿದವರು ತಮ್ಮ ತಪ್ಪನ್ನು ಒಪ್ಪಿಕೊಳ್ಳಬೇಕು' ಎಂದು ಸ್ಪಷ್ಟ ನುಡಿಗಳಲ್ಲಿ ಸತ್ಯಾಗ್ರಹಿಗಳಿಗೆ ಹೇಳಿದರು. ಕೊನೆಗೂ ಈ ಹೋರಾಟದಲ್ಲಿ ಜಯ ದೊರಕಿತು. ಮಾಮಲೆದಾರರು ಒಪ್ಪಂದವನ್ನು ಪ್ರಕಟಿಸಿದರು. ಆಗ ಗಾಂಧೀಜಿ ಹೇಳಿದರು:- 'ಮಾಮಲೆದಾರರು ಹೊರಡಿಸಿದ ಪ್ರಕಟಣೆಯನ್ನು ನೀವು ಕೇಳಿ ತಿಳಿದಿದ್ದೀರಿ. ನಿಮ್ಮ ಮಾತುಕತೆಯ ಫಲವಾಗಿ ಈ ಆಜ್ಞೆ ಹೊರಬಿದ್ದಿದೆ. ನಿಮ್ಮ ಸಲಹೆಯನ್ನು ಸರ್ಕಾರ ಒಪ್ಪಿದೆ.

ನಾವು ಚಳುವಳಿ ಆರಂಭಿಸುವುದಕ್ಕೆ ಮೊದಲು 'ಯಾರು ಕಂದಾಯ ಕೊಡಬಲ್ಲರೋ ಅವರಿಂದ ವಸೂಲು ಮಾಡಿ, ಕೊಡಲಾಗದವರ ಮೇಲೆ ದೌರ್ಜನ್ಯ ಮಾಡಬೇಡಿ ಎಂದು ಹೇಳಿದ್ದೆವು. ಮಾಮಲೆದಾರರು ಈ ನಮ್ಮ ಸಲಹೆಯನ್ನು ಒಪ್ಪಿಕೊಂಡು, ಈ ಕೂಡಲೆ ಕಂದಾಯ ಕಟ್ಟಲು ಸಾಧ್ಯವಿಲ್ಲದವರ ಪಟ್ಟಿ ತಯಾರು ಮಾಡಲು ಹೇಳಿದ್ದಾರೆ. ಒಂದು ಎಚ್ಚರಿಕೆಯ ಮಾತು. ನಾವು ಮಾಮಲೇದಾರರ ಆಜ್ಞೆಯನ್ನು ದುರುಪಯೋಗಪಡಿಸಿ ಕೊಳ್ಳಬಾರದು. ಈಗ ನಮ್ಮ ಚಳುವಳಿ ಮುಕ್ತಾಯಗೊಂಡಿದೆಯೆಂದು, ಮಾಮಲೇದಾರರಿಗೆ ತಿಳಿಸುವವನಿದ್ದೇನೆ.' ಈ ಕರನಿರಾಕರಣ ಚಳುವಳಿ ದಿ. 22-03-1918 ರಿಂದ 03-06-1918ರವರೆಗೆ 40 ದಿನಗಳ ಕಾಲ ನಡೆಯಿತು. ಕೊನೆಗೂ ರೈತರಿಗೆ ನ್ಯಾಯ ದೊರೆಯಿತು.

'ಚಂಪಾರಣ್‌ದಲ್ಲಾಗಲಿ, ಖೇಡಾದಲ್ಲಾಗಲಿ ಜನ ಹಿಂಸೆಯನ್ನು ತೊರೆದು ಅಹಿಂಸೆಯನ್ನು ಒಪ್ಪಿಕೊಂಡದ್ದು ತಮ್ಮ ಅಶಕ್ತತೆಯಿಂದಲೇ ಹೊರತು ಅಹಿಂಸೆಯ ಶ್ರೇಷ್ಠತೆಯನ್ನು ಅರಿತದ್ದರಿಂದ ಅಲ್ಲ. ಎದುರಾಳಿಯನ್ನು ಅಹಿಂಸಾತ್ಮಕವಾಗಿ ಎದುರಿಸಲು ಸಾಮರ್ಥ್ಯವಿರುವವನಿಗೆ ಅಹಿಂಸೆಯನ್ನು ಬೋಧಿಸಬೇಕು. ಆ

ಸಾಮರ್ಥ್ಯವಿಲ್ಲದವರನ್ನು ಅಹಿಂಸೆಗೆ ಅಣಿಗೊಳಿಸಬೇಕು' ಎಂದು ಗಾಂಧೀಜಿ ಪ್ರತಿಪಾದಿಸಿದರು. ಗಾಂಧೀಜಿ ಮುಂದಿನ ದಿನಗಳಲ್ಲಿ ಜನತೆಯನ್ನು ಅಹಿಂಸಾ ಚಳುವಳಿಗೆ ಅಣಿಗೊಳಿಸಿದರಾದರೂ, ಗಾಂಧೀಜಿಯ ಕಲ್ಪನೆಯ ಅಹಿಂಸೆಯನ್ನು ಜನತೆ ಪೂರ್ಣವಾಗಿ ಅರ್ಥಮಾಡಿಕೊಳ್ಳಲಿಲ್ಲ. ಗಾಂಧೀಜಿಯವರಿಗೆ ಅಹಿಂಸೆ ಒಂದು ವ್ರತವಾಗಿತ್ತು, ಧರ್ಮವಾಗಿತ್ತು. ಅವರ ಹಿಂಬಾಲಕರಿಗೆ ಅಹಿಂಸೆ ಒಂದು ಅನುಕೂಲಸಿಂಧು ಅಸ್ತ್ರ ಅನಿಸಿತು. ಗಾಂಧೀಜಿಯ ದೃಷ್ಟಿಯಲ್ಲಿ ಜನತೆ ಆಚರಣೆಗೆ ತಂದದ್ದು ಸಬಲರ ಅಹಿಂಸೆಯನ್ನಲ್ಲ, ದುರ್ಬಲರ ಅಹಿಂಸೆಯನ್ನು. ಈ ದುರ್ಬಲರ ಅಹಿಂಸೆಯೇ ಬ್ರಿಟಿಷರನ್ನು ದೇಶ ಬಿಟ್ಟು ಹೋಗುವಂತೆ ಮಾಡಿರಬೇಕಾದರೆ ಗಾಂಧೀಜಿಯ ಕಲ್ಪನೆಯ ಅಹಿಂಸೆಗೆ ಇನ್ನೆಷ್ಟು ಬಲವಿರಬೇಕು? ಗಾಂಧೀಜಿಯ ದೃಷ್ಟಿಯಲ್ಲಿ ಅಹಿಂಸೆ ಆಟಂಬಾಂಬಿನಷ್ಟೇ ಬಲಶಾಲಿಯಾದದ್ದು.

ಸ್ವಾತಂತ್ರ್ಯ ಸಂಗ್ರಾಮ - ಅಹಿಂಸೆ

ಅಹಿಂಸೆ ಒಂದು ನಕಾರಾತ್ಮಕ ಶಬ್ದವಾದರೂ ಅದರ ಅರ್ಥ ಸಕಾರಾತ್ಮಕವಾದದ್ದು. 'ಅಹಿಂಸಾ ಪರಮೋ ಧರ್ಮಃ' ಎಂದು ಹಿಂದು ಶಾಸ್ತ್ರಗ್ರಂಥಗಳು ಸಾರುತ್ತವೆ. ಹಿಂಸಾವೃತ್ತಿಯನ್ನು ಜೈನ, ಬೌದ್ಧ, ಇಸ್ಲಾಂ ಮುಂತಾದ ಎಲ್ಲ ಧರ್ಮಗಳೂ ನಿಷೇಧಿಸುತ್ತವೆ. ಹಿಂಸೆಯನ್ನು ಮೂಕ ಪ್ರೇಕ್ಷಕರಂತೆ ನೋಡುತ್ತ ನಿಲ್ಲುವುದು ಹಿಂಸೆಗೆ ಉತ್ತೇಜನ ನೀಡಿದಂತೆ. ಹಿಂಸೆ ಮಾಡುವುದು ಮಾತ್ರ ಅಧರ್ಮವಲ್ಲ, ಕಾಯಾ ವಾಚಾ ಮನಸಾ ಹಿಂಸೆಗೆ ತಲೆಬಾಗುವುದೂ, ಬೆಂಬಲಿಸುವುದೂ ಅಧರ್ಮ.

ಆದರೆ ದುರಂತವೆಂದರೆ ಎಲ್ಲ ಧರ್ಮಗಳೂ ಯುದ್ಧವನ್ನು ಒಂದು ಕಾಯಕವಾಗಿ ಪರಿಗಣಿಸಿವೆ. ಕ್ರಿಶ್ಚಿಯನ್ ಮತ್ತು ಇಸ್ಲಾಂ ಧರ್ಮದವರು ನಡೆಸಿರುವಷ್ಟು ಯುದ್ಧಗಳನ್ನು ಬೇರೆ ಯಾವ ಧರ್ಮದವರೂ ನಡೆಸಿಲ್ಲ. ಯುದ್ಧ ಎಂದರೆ ಹಿಂಸೆಯ ಪರಾಕಾಷ್ಠತೆ! ಗಾಂಧೀಜಿ ಅಹಿಂಸೆಯ ಪ್ರಯೋಗವನ್ನು ರಾಜಕೀಯ ಹೋರಾಟದಲ್ಲಿ ಅಳವಡಿಸಿಕೊಂಡರು. ಇದು ಒಂದು **Poineering Effort.** ಅಶೋಕ, ಬಾಹುಬಲಿ ಮುಂತಾದವರು ಯುದ್ಧಗಳನ್ನು ಮಾಡಿ, ಯುದ್ಧಗಳಲ್ಲಿ ಆದ ಹಿಂಸಾಚಾರ, ಸಾವು ನೋವುಗಳನ್ನು ನೋಡಿ, ಹಿಂಸೆಗೆ ಹೇಸಿ, ಬೇಸತ್ತು ಅಹಿಂಸಾವ್ರತ ತೊಟ್ಟ ಕ್ಷತ್ರಿಯರು. ಅಹಿಂಸಾತ್ಮಕ ಹೋರಾಟ ಹೂಡಿ ಅದರಲ್ಲಿ ಯಶಸ್ಸುಗಳಿಸಿದ ಮೊದಲನೆಯ ರಾಷ್ಟ್ರ ಭಾರತ. ಇದು ನಮ್ಮ ಅಗ್ಗಳಿಕೆ. ಗಾಂಧೀಜಿ ಈ ಅಹಿಂಸಾ ಸೂತ್ರ ಪರಿಚಯವನ್ನು ಮಾಡಿಕೊಟ್ಟರು. ಅಹಿಂಸೆಯ ಹೋರಾಟಕ್ಕೆ ಜನರನ್ನು ಆಹ್ವಾನಿಸಿದರು. ಅಹಿಂಸಕವಾಗಿ, ಹೋರಾಟದಲ್ಲಿ ಹೇಗೆ ತೊಡಗಿಕೊಳ್ಳಬೇಕೆಂದು ಲೋಕಶಿಕ್ಷಣ ನೀಡಿದರು. ಜನ ದಾರಿತಪ್ಪಿದಾಗ ಅವರನ್ನು ತಿದ್ದಿದರು. ಸಾಮೂಹಿಕ ಸನ್ನಿಗೆ ಜನ ಬಲಿಯಾಗಿ, ಹಿಂಸಾ ಕೃತ್ಯದಲ್ಲಿ ತೊಡಗಿದಾಗ, ತಾವು ಹೂಡಿದ್ದ ಚಳುವಳಿಯನ್ನು ಹಿಂತೆಗೆದುಕೊಂಡರು.

ಸುಭಾಷಚಂದ್ರಬೋಸರು 'ಹೋರಾಟಕ್ಕೆ ಜನತೆ ತಯಾರಿದ್ದರೂ ನೀವೇಕೆ ಚಳುವಳಿಯನ್ನು ತೀವ್ರಗೊಳಿಸಲು ಹಿಂದೆ ಮುಂದೆ ನೋಡುತ್ತಿದ್ದೀರಿ?' ಎಂದು ಪ್ರಶ್ನಿಸಿದಾಗ ಗಾಂಧೀಜಿ 'ಜನರನ್ನು ಅಹಿಂಸಾ ಮಾರ್ಗದಲ್ಲಿ ಕೊಂಡೊಯ್ಯಲು ಸಮಯಬೇಕು. ಹಿಂಸಾತ್ಮಕವಾಗಿ ಬರುವ ಸ್ವಾತಂತ್ರ್ಯ ನನಗೆ ಬೇಡವೇ ಬೇಡ' ಎಂದರು.

ಗಾಂಧೀಜಿಗೆ ಅಹಿಂಸೆ ಒಂದು ತತ್ವವಾಗಿತ್ತು. ಅಹಿಂಸೆ ಅಣು ಬಾಂಬಿನಷ್ಟೇ ಶಕ್ತಿಶಾಲಿ ಎಂದು ಅವರು ನಂಬಿದ್ದರು. ಮನುಷ್ಯರನ್ನು, ಪ್ರಾಣಿಗಳನ್ನು ಕೊಲ್ಲುವುದು ಮಾತ್ರ ಹಿಂಸೆಯಲ್ಲ. ಬಾಬ್ರಿಮಸೀದಿ ಒಡೆದು ಮುಸಲ್ಮಾನರಿಗೆ ನೋವುಂಟು ಮಾಡಿದ್ದೂ ಹಿಂಸೆ. ಹಿಂದೂ ದೇವಾಲಯವನ್ನು ಒಡೆದು ಬಾಬ್ರಿ ಮಸೀದಿ ಕಟ್ಟಿ ಹಿಂದುಗಳಿಗೆ ನೋವುಂಟು ಮಾಡಿದ್ದೂ ಹಿಂಸೆ. ಎರಡೂ ಕಡೆ ತಪ್ಪುಗಳಾದಾಗ ಒಂದು ತಪ್ಪು, ಇನ್ನೊಂದು ಸರಿ ಎನಿಸದು.

ಅಹಿಂಸೆ ಶಕ್ತಿಯುತವಾದ ಅಸ್ತ್ರ ಎಂದು ಗಾಂಧೀಜಿ ಭಾವಿಸಿದ್ದರು. 'ಅಹಿಂಸೆ ಆತ್ಮಶಕ್ತಿಯಿಂದ ಹೋರಾಡುವ ಒಂದು ಪರ್ಯಾಯಮಾರ್ಗ; ಆತ್ಮ ಅಮರ. ದೇಹ ಅಶಾಶ್ವತ. ಸ್ವಾತಂತ್ರ್ಯಕ್ಕಾಗಿ ಈ ಅಶಾಶ್ವತವಾದ ಶರೀರವನ್ನು ನಾವೇಕೆ ಪಣಕ್ಕೊಡ್ಡಬಾರದು? ಪೋಲೀಸರು ಹೊಡೆಯಲು ಬಂದರೆ ಎದೆ ಚಾಚಿ ನಿಲ್ಲೋಣ. ಸ್ವರಾಜ್ಯ ನಮ್ಮ ಹಕ್ಕು ಎನ್ನೋಣ. ಎದುರಾಳಿಯ ಹೃದಯ ಪರಿವರ್ತನೆ ಇದರಿಂದ ಆಗಬಹುದು. ಅವರಾಗಿಯೇ ಬ್ರಿಟಿಷರು ಭಾರತ ಬಿಟ್ಟು ಹೊರಟು ಹೋಗಬಹುದು. ಇಲ್ಲವೇ ನಮ್ಮನ್ನೆಲ್ಲ ಕೊಂದುಹಾಕಿ ಬಿಡಬಹುದು. ಆತ್ಮವನ್ನು ಅವರು ಕೊಲ್ಲಲಾರರು. ಅಹಿಂಸಕವಾಗಿ ಹೋರಾಡಿ' ಎಂದು ಹುರಿದುಂಬಿಸಿದರು. ನಮ್ಮ ಜನ ಅದಕ್ಕೆ ಸ್ಪಂದಿಸಿದರು. ಹೋರಾಟದಿಂದ ಹೋರಾಟಕ್ಕೆ ಸತ್ಯಾಗ್ರಹಿಗಳ ಸಂಖ್ಯೆ ಬೆಳೆಯುತ್ತಾ ಹೋಯಿತು. 1942ರ ಕ್ವಿಟ್ ಇಂಡಿಯಾ ಚಳುವಳಿಯ ವೇಳೆಗೆ ಸತ್ಯಾಗ್ರಹಿಗಳ ಸಂಖ್ಯೆ ಪರಾಕಾಷ್ಠತೆ ಮುಟ್ಟಿತು.

ಜರ್ಮನಿಯ ಹಿಟ್ಲರ್ 2ನೇ ಮಹಾಯುದ್ಧದಲ್ಲಿ ಒಂದೊಂದೇ ದೇಶವನ್ನು ಕಬಳಿಸುತ್ತಾ ಬಂದ. ಯೂರೋಪಿನ ಕಮ್ಯುನಿಸ್ಟ್

ರಾಜ್ಯಗಳೂ ಅವನ ವಶವಾದವು. ಪರ್ಲ್ ಹಾರ್ಬರ್ ಮೇಲೆ ಬಾಂಬ್ ಹಾಕಿದ. ಮದರಾಸಿಗೆ ಬಾಂಬ್ ಹಾಕುವನೆಂಬ ಸುದ್ದಿ ಬಂತು. ಭಾರತವನ್ನು ಅವನು ಆಕ್ರಮಣ ಮಾಡಬಹುದೆಂಬ ಶಂಕೆ ಮೂಡಿತು. ಆಗ ಗಾಂಧೀಜಿ ಹಿಟ್ಲರಿಗೆ ಒಂದು ಬಹಿರಂಗ ಪತ್ರ ಬರೆದರು. ಅದನ್ನು ಹಿಟ್ಲರ್ ಕಸದ ಬುಟ್ಟಿಗೆಸೆದಿರಬಹುದು. ಗಾಂಧೀಜಿ ಹೀಗೆ ಬರೆದರು:- ನೀವು ಒಂದೊಂದು ದೇಶವನ್ನೇ ಕಬಳಿಸುತ್ತ ಮುನ್ನುಗ್ಗುತ್ತಿದ್ದೀರಿ. ಭಾರತದ ಮೇಲೂ ನಿಮ್ಮ ಕಣ್ಣು ಬಿದ್ದಿದೆ. ಭಾರತದಲ್ಲಿ ನೀವು ನಿಮ್ಮ ಬಾವುಟವನ್ನು ಹಾರಿಸಲು, ಭಾರತವನ್ನು ಆಕ್ರಮಣ ಮಾಡಲು ಭಾರತೀಯರು ಬಿಡುವುದಿಲ್ಲ. ನಮ್ಮ ಹೆಣಗಳ ಮೇಲೆ ನಡೆದು ನೀವು ನಿಮ್ಮ ಧ್ವಜ ಹಾರಿಸಬಹುದು ಅಷ್ಟೆ.

ಗಾಂಧೀಜಿ ಈ ಬಹಿರಂಗ ಪತ್ರ ಬರೆದು ತೆಪ್ಪಗಾಗಲಿಲ್ಲ. ಮುಂದಿನ ಹೆಜ್ಜೆಯಾಗಿ ಆಶ್ರಮದ ಸದಸ್ಯರ ಸಭೆ ನಡೆಸಿದರು. 'ಆಕ್ರಮಣಕಾರಿ ಹಿಟ್ಲರ್ ಭಾರತವನ್ನು ಆಕ್ರಮಣ ಮಾಡಲು ಬರಬಹುದು. ಅವನನ್ನು ತಡೆಗಟ್ಟಲು ನಮ್ಮ ಯೋಜನೆ ಏನು? ಈ ಆಕ್ರಮಣಕಾರಿಯನ್ನು ಹೆಜ್ಜೆ ಹೆಜ್ಜೆಗೂ ತಡೆಗಟ್ಟಬೇಕು. ಆದ್ದರಿಂದ ಆತನ ಸೈನ್ಯದ ಎದುರಿಗೆ ನಿಂತು ಪ್ರಾಣಾರ್ಪಣೆ ಮಾಡಲು ನಾವು ಸಿದ್ಧರಾಗಬೇಕು. ಆಶ್ರಮವಾಸಿಗಳಲ್ಲಿ ಯಾರ್‍ಯಾರು ಈ ದುಷ್ಟ ಶಕ್ತಿಯ ವಿರುದ್ಧ ಅಹಿಂಸಾತ್ಮಕವಾಗಿ ಹೋರಾಡಿ ತಮ್ಮ ಪ್ರಾಣ ಸಮರ್ಪಿಸಲು ಸಿದ್ಧರಿದ್ದೀರಿ? ಅಂತಹ ಸತ್ಯಾಗ್ರಹಿಗಳ ಒಂದು ಪಟ್ಟಿ ತಯಾರಿಸಿ. ಆ ಪಟ್ಟಿಯಲ್ಲಿ ನನ್ನ ಹೆಸರನ್ನು ಮೊದಲು ದಾಖಲಿಸಿ', ಎಂದು ವಿನಂತಿ ಮಾಡಿಕೊಂಡರು. ಆಶ್ರಮವಾಸಿಗಳೆಲ್ಲ ತಮ್ಮ ಹೆಸರುಗಳನ್ನು ಬರೆಸಿದರು. ಮಹದೇವ ದೇಸಾಯಿಯವರೂ ತಮ್ಮ ಹೆಸರನ್ನು ನೋಂದಾಯಿಸಿದರು.

ಅಂದು ರಾತ್ರಿ ಮಹದೇವ ದೇಸಾಯರು ಹಾಗೂ ಅವರ ಪತ್ನಿ ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡರು. ಅವರ ಪತ್ನಿ 'ನಾನೂ ನನ್ನ ಹೆಸರನ್ನು ಸೇರಿಸಿಕೊಳ್ಳಿ ಎಂದು ಹೇಳಬೇಕೆಂದಿದ್ದೆ. ಆದರೆ ನಮ್ಮ ನಾರಾಯಣನ ಭವಿಷ್ಯವೇನು ಎಂಬ ಪ್ರಶ್ನೆ ನನ್ನನ್ನು ಕಾಡಿತು. ಅದರಿಂದ ನನ್ನ ಹೆಸರನ್ನು ಬರೆಸಲಿಲ್ಲ' ಎಂದರು. 'ನಮಗೆ ಬೇಕಾದ

ಎಷ್ಟೋ ಜನ ಸ್ನೇಹಿತರಿದ್ದಾರೆ. ಅವರಲ್ಲಿ ಯಾರೋ ಒಬ್ಬರು ನಾರಾಯಣನ ಯೋಗಕ್ಷೇಮ ನೋಡಿಕೊಳ್ಳುತ್ತಾರೆ. ಅವನ ಚಿಂತೆ ನಾವೇಕೆ ಮಾಡಬೇಕು? ನಿನಗೆ ಸತ್ಯಾಗ್ರಹಿಗಳ ಪಟ್ಟಿಯಲ್ಲಿ ನಿನ್ನ ಹೆಸರೂ ಸೇರಬೇಕೆಂದು ಅಭಿಲಾಷೆಯಿದ್ದರೆ ನಾಳೆ ಆ ಕೆಲಸ ಮಾಡು' ಎಂದರು ಮಹದೇವ ದೇಸಾಯಿ ಅವರು. 'ನಾವು ಆಶ್ರಮವಾಸಿಗಳು 100 ಜನ ಹಿಟ್ಲರನ ಆಕ್ರಮಣವನ್ನು ತಡೆಗಟ್ಟಲು ಸಿದ್ಧರಾದರೆ. ಕಾಂಗ್ರೆಸ್ಸಿನ 10000 ಮಂದಿ ಈ ಹೋರಾಟದಲ್ಲಿ ಸೇರಿಕೊಳ್ಳುತ್ತಾರೆ. ಒಂದು ಲಕ್ಷದಷ್ಟು ಜನಸಾಮಾನ್ಯರು ಆತ್ಮಾಹುತಿಗೆ ತಯಾರಾಗುತ್ತಾರೆ. ಇಷ್ಟು ಮಂದಿ ಭಾರತೀಯರ ಹೆಣಗಳ ಮೇಲೆ ಹಿಟ್ಲರ್ ಭಾರತದಲ್ಲಿ ತನ್ನ ರಾಜ್ಯ ಸ್ಥಾಪಿಸಬೇಕಾಗುತ್ತದೆ' ಎಂದು ಗಾಂಧೀಜಿ ಲೆಕ್ಕಾಚಾರ ಹಾಕಿ ಹೇಳಿದರು.

ಅಹಿಂಸಾ ಹೋರಾಟದ ಕಟ್ಟುಪಾಡುಗಳು

1. ಅಹಿಂಸೆಯನ್ನು ಕಾಯಾ, ವಾಚಾ, ಮನಸಾ ಪಾಲಿಸಬೇಕು.
2. ಗುರಿ ಎಷ್ಟು ಮುಖ್ಯವೋ ಗುರಿ ಸಾಧನೆಯೂ ಅಷ್ಟೆ ಶುದ್ಧವಾಗಿರಬೇಕು.
3. ಆತ್ಮ ಅಮರ, ದೇಹ ನಶ್ವರ. ಎದುರಾಳಿ ನಮ್ಮ ಆತ್ಮವನ್ನು ಕೊಲ್ಲಲಾರ. ಕೊಲ್ಲುವುದು ನಶ್ವರವಾದ ಈ ದೇಹವನ್ನು. ಎಂದೋ ಹೋಗುವ ದೇಹ ಇಂದೇ ಹೋಗಲಿ ಎಂಬ ಸ್ಥಿರವಾದ ಬುದ್ಧಿ ಸತ್ಯಾಗ್ರಹಿಗೆ ಇರಬೇಕು.
4. ಅಹಿಂಸೆ ಸಬಲರ ಅಸ್ತ್ರ. ಅಹಿಂಸೆ ಹೇಡಿತನವನ್ನು ಮುಚ್ಚಿಕೊಳ್ಳುವ ಒಂದು ಸಾಧನ ಆಗಬಾರದು.
5. ಹೇಡಿತನಕ್ಕಿಂತಲೂ ಹಿಂಸೆ ಮೇಲು, ಹಿಂಸೆಗಿಂತಲೂ ಅಹಿಂಸೆ ಮೇಲು.
6. ಸತ್ಯಾಗ್ರಹಿ ರೋಗಗ್ರಸ್ತನಾಗಿರಬಾರದು, ದೇಹದಂಡನೆಗೆ ಬೇಕಾದ ಕಸುವನ್ನು ಅವನು ಬೆಳೆಸಿಕೊಳ್ಳಬೇಕು.
7. ಅಹಿಂಸೆ ಅಣು ಬಾಂಬಿಗಿಂತ ಶಕ್ತಿಯುತ.

8. ಎದುರಾಳಿಯನ್ನು ಸತ್ಯಾಗ್ರಹಿ ಎಂದೂ ದ್ವೇಷಿಸಬಾರದು. ಅವನ ದುಷ್ಟ ಕಾರ್ಯವನ್ನು ಮಾತ್ರ ಸತ್ಯಾಗ್ರಹಿ ಪ್ರತಿಭಟಿಸಬೇಕು. ವ್ಯಕ್ತಿ ದ್ವೇಷ ಸತ್ಯಾಗ್ರಹಿಯಲ್ಲಿ ಯಾವಾಗಲೂ ಇರಬಾರದು.

9. ವಿರೋಧಿಯ ಆತ್ಮ ಪರಿವರ್ತನೆ ಸತ್ಯಾಗ್ರಹಿಯ ಗುರಿಯಾಗ ಬೇಕು.

10. ತಾನು ನಡೆಸಿದ ಸತ್ಯಾಗ್ರಹ ನ್ಯಾಯಯುತವಾದದ್ದಲ್ಲ ಎಂದು ಮನವರಿಕೆಯಾದರೆ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳಲು ಸತ್ಯಾಗ್ರಹಿ ಹಿಂಜರಿಯಬಾರದು.

ಈಗ ಅನ್ಯಾಯ, ಹಿಂಸೆ, ಧರ್ಮದ ದುರುಪಯೋಗ ಎಲ್ಲವೂ ಸಮಾಜದಲ್ಲಿ ಬೆಳೆದುನಿಂತಿವೆ. ಇದಕ್ಕೆ ವಿರುದ್ಧವಾಗಿ ನಿಲ್ಲಲು ಗಾಂಧಿ ಬೇಕು, ಗಾಂಧಿ ಮಾರ್ಗ ಬೇಕು. ಶೋಷಣೆ ಇರುವ ಕಡೆ, ಹೋರಾಟ ಇರುವ ಕಡೆ ಗಾಂಧಿ ಬೇಕಾಗುತ್ತಾನೆ. ಗಾಂಧಿ ಒಂದು ಶಕ್ತಿ. ಆ ಶಕ್ತಿಯನ್ನು ಬಳಸಿಕೊಳ್ಳುವುದು ನಮ್ಮ ಧರ್ಮ. ನಮ್ಮೊಳಗಿರತಕ್ಕ ಹಿಂಸೆಯ ಪ್ರವೃತ್ತಿಯನ್ನು ನಾವು ಗೆಲ್ಲಲಿಲ್ಲನಾದರೆ ಸಮಾಜದಲ್ಲಿರುವ ಹಿಂಸೆಯನ್ನು ನಾವು ಹೇಗೆ ಎದುರಿಸಬಲ್ಲೆವು? 40 ಭೂಮಂಡಲಗಳನ್ನು ನಾಶಮಾಡುವಷ್ಟು ಬಾಂಬ್ ಬಲಿಷ್ಠ ರಾಷ್ಟ್ರಗಳ ಕೈಲಿದೆ. ಹಿಂಸೆಯಿಂದ ಶಾಂತಿಸ್ಥಾಪನೆ ಸಾಧ್ಯವಿಲ್ಲ. ಹಿಂಸೆ ಪ್ರತಿಹಿಂಸೆಗೆ ಎಡೆ ಮಾಡುತ್ತದೆಯೇ ಹೊರತು ಶಾಂತಿಗಲ್ಲ.

ಪ್ರಾಧ್ಯಾಪಕ ಹೆರಾಲ್ಡ್ ಲಾಸ್ಕಿ ಇಂಗ್ಲೆಂಡಿನ ಪ್ರತಿಷ್ಠಿತ, ವಿಚಾರವಂತ ನೇತಾರರು. ವಿಶ್ವಶಾಂತಿ ಮತ್ತು ಪ್ರಜಾತಂತ್ರದ ಪ್ರಬಲ ಪ್ರತಿಪಾದಕರು. ಶಾಂತಿವಾದವನ್ನು ಆ ಕಾಲದಲ್ಲಿ ಪ್ರತಿಪಾದಿಸುತ್ತಿದ್ದವರೆಂದರೆ ಬರ್ಟ್ರೆಂಡ್ ರಸಲ್, ಇ.ಎಂ. ಜೋಡ್ ಮತ್ತು ಪ್ರಾಧ್ಯಾಪಕ ಹೆರಾಲ್ಡ್ ಲಾಸ್ಕಿಯವರು. ಅವರಿಗೆ ಶಾಂತಿ ಎಂಬುದು ಬುದ್ಧಿ ಆಧಾರಿತ ಸಿದ್ಧಾಂತವಾಗಿತ್ತು. ಶಾಂತಿ ವಾದವನ್ನು ಸಮರ್ಥವಾಗಿ ಅವರು ಪ್ರತಿಪಾದಿಸುತ್ತಿದ್ದರು.

ಆದರೆ ಅವರ ಶಾಂತಿಯ ಬಗೆಗಿದ್ದ ವಿಶ್ವಾಸಕ್ಕೆ ಅನುಭವ ಜನ್ಮ ನಂಬಿಕೆಯ ಬೆಂಬಲವಿರಲಿಲ್ಲ. ಪ್ರಯೋಗ ಸಿದ್ಧ ನಿಷ್ಠೆ ಅವರದಾಗಿರಲಿಲ್ಲ. ಹಿಟ್ಲರ್‌ನ ಹಿಂಸಾ ಮೂಲದ ಚಂಡಮಾರುತ ಬೀಸತೊಡಗಿದಾಗ ಅವರ ಶಾಂತಿವಾದ ಗಾಳಿಪಾಲಾಯಿತು. ಆಗ ಹೆರಾಲ್ಡ್ ಲಾಸ್ಕಿ ಹೇಳಿದ್ದೇನು? 'ಶಾಂತಿಯಲ್ಲಿ ನಂಬಿಕೆ ಇರಬೇಕು ಸರಿ. ಆದರೆ ನರ ಹಂತಕ ಹಿಟ್ಲರ್‌ನ ಮೃಗೀಯ ಮನೋಭಾವವನ್ನು ಹತ್ತಿಕ್ಕಲು ಹಿಂಸೆಯ ಮಾರ್ಗವೇ ಸರಿ. ಎಲ್ಲ ಶಾಂತಿವಾದಿಗಳೂ ಕೂಡಿಕೊಂಡು ಹಿಟ್ಲರ್‌ನನ್ನು ದಮನ ಮಾಡಬೇಕು' ಎಂದರು ಲಾಸ್ಕಿಯವರು. ಹಿಂಸೆಯ ಮೂಲದ ಚಂಡಮಾರುತ ಬೀಸಿದಾಗ ಲಾಸ್ಕಿಯವರ ಶಾಂತಿವಾದ ಗಾಳಿ ಪಾಲಾಯಿತು. ಕೇವಲ ಭೌತವಾದದ ಹಣೆಬರೆಹವೇ ಇಷ್ಟು! ಈ ಬುದ್ಧಿವಾದಿಗಳ ಪ್ರಜ್ಞೆ ಭ್ರಮಾಧೀನವಾಗಿ ಮುಗ್ಗರಿಸಿ ಮುಕ್ಕಾಯಿತು. ಮಾನವಸಮಾಜ ವ್ಯಕ್ತಿಗಳಿಂದ ಕೂಡಿರುತ್ತದೆ. ವ್ಯಕ್ತಿಗಳ ಸೇವೆಗಾಗಿಯೇ ಸಮಾಜ ಇರುವುದು. ಸ್ವರಾಜ್ಯ ಆರ್ಥಿಕ ಸದೃಢತೆಯ ಕಡೆಗೆ, ಸಾಮಾಜಿಕ ಭದ್ರತೆಯ ಕಡೆಗೆ ನಮ್ಮನ್ನು ಒಯ್ಯಬೇಕು. ಎಲ್ಲರಿಗೂ ನ್ಯಾಯ ದೊರಕಿಸಿಕೊಡಬೇಕು.

ಮನುಷ್ಯ ವರ್ಗ ಎಂದೆಂದಿಗೂ ಹಿಂಸೆಯನ್ನು ಎತ್ತಿ ಹಿಡಿದಿದೆ. ಹಿಂಸೆಯನ್ನು ಸಮರ್ಥಿಸಿಕೊಂಡಿದೆ. ವ್ಯಕ್ತಿ ಆತ್ಮರಕ್ಷಣೆಗೂ ಹಿಂಸೆಯನ್ನೇ ಅವಲಂಬಿಸುತ್ತಾನೆ. ಆಕ್ರಮಣಕಾರನ ಹಿಂಸಾಚಾರವನ್ನು ಅದಕ್ಕೂ ಮಿಗಿಲಾದ ಹಿಂಸಾಚಾರದಿಂದ ಮಾತ್ರ ಅಡಗಿಸಬಹುದು ಎಂದು ಜನ ಭಾವಿಸುತ್ತಾರೆ. ಅದರಿಂದಲೇ ವಿಶ್ವದೆಲ್ಲೆಡೆ ಎಲ್ಲರೂ ಆಯುಧಗಳನ್ನು ಶೇಖರಿಸಿಡುವ ಉದ್ಯೋಗದ ಸ್ಪರ್ಧೆಯಲ್ಲಿ ತೊಡಗಿದ್ದಾರೆ. ಈ ವಿಶ್ವ ವಾಸಿಸಲು ಸುರಕ್ಷಿತ ತಾಣವೆಂದು ನಮಗನಿಸಬೇಕಾದರೆ, ಶೇಖರಿಸಲ್ಪಟ್ಟಿರುವ ಕತ್ತಿ, ಕೋವಿಗಳೆಲ್ಲ ನೇಗಿಲಾಗಿ ಪರಿವರ್ತನೆಗೊಳ್ಳಬೇಕು. ಈ ಪರಿವರ್ತನೆಗೆ ವಿಶ್ವದ ಜನ ಇನ್ನೂ ತಯಾರಾಗಿಲ್ಲ. ವಿಶ್ವದ ಅತಿದೊಡ್ಡ ಗುರುವಾದ ವಿಶ್ವವಂದ್ಯ ಏಸುಕ್ರಿಸ್ತ ಹೀಗೆ ಹೇಳಿದ:- ಮನುಷ್ಯನ ನಿಜವಾದ Defence ಎಂದರೆ ಇತರರ ಮೇಲೆ ಪ್ರತೀಕಾರ ಮಾಡದಿರುವುದು, ಈ ಮಾರ್ಗ

ಅನುಸರಿಸುವುದರಿಂದ ಹಿಂಸೆಗೆ ಗುರಿಯಾದವನು ತುಂಬ ತೊಂದರೆಗೊಳಗಾಗುವನೆಂಬುದು ನಿಜ. ಆದರೆ ಈ ಬಗೆಯ ಪ್ರತಿಯೊಂದು ನರಳಾಟವೂ ಮಾನವನ ಸಮೂಹದ ಗೆಲುವಿಗೆ ಎಡೆಮಾಡಿಕೊಡುತ್ತದೆ. ಇದೇ ನಿಜವಾದ ನಿರ್ದಿಷ್ಟವಾದ ಮಾನವನ ಗೆಲುವಿನ ಆತ್ಮರಕ್ಷಣೆಯ ಮಾರ್ಗ. ಹಿಂಸೆಗೆ ಪ್ರತಿಹಿಂಸೆ ಮಾಡದೆ, ತೊಂದರೆಗೊಳಗಾದವನು ಸಾವನ್ನಪ್ಪುವನಾದರೆ ಇದನ್ನು ಆತ್ಮರಕ್ಷಣೆಯ ಕ್ರಮ ಎಂದು ಒಪ್ಪುವುದಾದರೂ ಹೇಗೆ ಎಂಬುದನ್ನು ಏಸುಕ್ರಿಸ್ತ ಮಾಡಿ ತೋರಿಸಿದ್ದಾನೆ.

ಏಸುಕ್ರಿಸ್ತನನ್ನು ಶಿಲುಬೆಗೇರಿಸಲಾಯಿತು. ಅದರಿಂದ ಏನಾಯಿತು? ಕ್ರಿಸ್ತಧರ್ಮ ವಿಶ್ವದ ಒಂದು ಅತಿ ದೊಡ್ಡ ಧರ್ಮವಾಗಿ ಬೆಳೆಯಿತು. ಜೀಸಸ್‌ನ ಬಲಿದಾನದಿಂದ ಇಡೀ ವಿಶ್ವದಲ್ಲಿ ಅಹಿಂಸೆ ಹಾಗೂ ಒಳ್ಳೆಯತನ ಒಂದು ಮಹತ್ವದ ಶಕ್ತಿಯಾಗಿ ಆವಿರ್ಭಾವವಾಯಿತು. ಅನೇಕ ಗುಣಾಢ್ಯ ಸಂತರಿಂದ ಅಹಿಂಸಾತತ್ವ ಮಹತ್ವ ಪಡೆಯಿತು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಗಾಂಧಿಯವರಿಂದ ನಡೆದ ಅಹಿಂಸಾ ಪ್ರಯೋಗಗಳಿಂದ ಅಹಿಂಸೆ ಪರಿಪಕ್ವತೆ ಹೊಂದಿತು. ಅಹಿಂಸಾ ಪ್ರಯೋಗ ಇಷ್ಟೆಲ್ಲಾ ಪರಿಣಾಮಕಾರಿಯಾಗಿದ್ದರೂ, ಈ 'ಅಹಿಂಸಾ ಹೋರಾಟ ದೋಷಯುಕ್ತ ಪ್ರಯೋಗವೆಂದೇ ನಾನು ಭಾವಿಸುತ್ತೇನೆ' ಎನ್ನುತ್ತಾರೆ ಗಾಂಧೀಜಿ.

ನಾವು ಅಹಿಂಸೆಯನ್ನು ಜಾರಿಗೆ ತರಲು ವಿಫಲನಾಗಿದ್ದರೆ ಅದರಲ್ಲಿ ಅಹಿಂಸಾತತ್ವದ ತಪ್ಪೇನೂ ಇಲ್ಲ. ಅಹಿಂಸೆಗೆ ಸೋಲಾಗಿದ್ದರೆ ಅದಕ್ಕೆ ಅಹಿಂಸಾ ಸಾಧಕನ ಅಸಮರ್ಥತೆಯೇ ಕಾರಣ ಎನ್ನುತ್ತಾರೆ ಗಾಂಧೀಜಿ. ನಿಜವಾದ ಧೈರ್ಯ ಇರುವುದು ಪೋಲೀಸರ ಏಟಿಗೆ ಮೈ ಒಡ್ಡುವುದರಲ್ಲಿ. ಏಟು ಕೊಡುವುದರಲ್ಲಲ್ಲ–ಕಷ್ಟವನ್ನು ಸಹಿಸುವುದರಲ್ಲಿ. ಅದೇ ನಿಜವಾದ ಸತ್ಯಾಗ್ರಹ.

ಗಾಂಧಿ ಕೊಲೆ ಮತ್ತು ಅನಂತರ

'ನನ್ನ ರಾಷ್ಟ್ರಭಕ್ತಿ ಪ್ರತ್ಯೇಕತಾ ಭಾವದ್ದಲ್ಲ. ಉದಾರಚರಿತವಾದುದು. ವಸದೃವ ಕುಟುಂಬಕಂನಲ್ಲಿ ನನ್ನ ನಂಬಿಕೆ. ನಾನು ಬದುಕುವುದೂ ಭಾರತದ ಸ್ವಾತಂತ್ರ್ಯಕ್ಕಾಗಿ ಸಾಯುವುದೂ ಅದಕ್ಕಾಗಿಯೇ.' ನಾನು ಹಿಂದು. ಆದರೆ ನನ್ನ ನಿಲುವು ಸರ್ವಧರ್ಮ ಸಮಭಾವ. ನನ್ನ ದೃಷ್ಟಿಯಲ್ಲಿ ಎಲ್ಲ ಧರ್ಮಗಳೂ ಸಮಾನ. ನನ್ನ ಕನಸಿನ ಸ್ವತಂತ್ರ ಭಾರತದಲ್ಲಿ ಎಲ್ಲ ಧರ್ಮದವರೂ ಸಂಪೂರ್ಣ ಸೌಹಾರ್ದದಿಂದ ಬಾಳುತ್ತಾರೆ.

ಸ್ವರಾಜ್ಯ ಎಂದರೆ ಹಿಂದುಗಳ ರಾಜ್ಯ ಅಲ್ಲ. ನನ್ನ ಶಕ್ತಿಯನ್ನೆಲ್ಲ ಬಳಸಿ, ಇದರ ವಿರುದ್ಧ ಹೋರಾಡುತ್ತೇನೆ. ಅಧಿಕಾರದ ಅಮಲಿನಲ್ಲಿ ಅಲ್ಪಸಂಖ್ಯಾತರನ್ನು ತುಳಿದುಹಾಕಿ ಸಂಪೂರ್ಣ ಹಿಂದುರಾಷ್ಟ್ರವನ್ನು ಸ್ಥಾಪಿಸುವ ವಿಚಾರ ಇದ್ದರೆ, ಅದು ಹಿಂದೂ ಧರ್ಮಕ್ಕೂ ಮಾರಕ, ಅಲ್ಪಸಂಖ್ಯಾತರಿಗೂ ಹಾನಿಕಾರಕ ಆದೀತು. ಇದು ಗಾಂಧಿಯವರ ಮಾತು ಗಾಂಧಿಗೆ ಮುಸ್ಲಿಮರ ಬಗೆಗೆ ಮಲತಾಯಿ ಧೋರಣೆ ಇದೆ ಎಂಬುದು ಹಿಂದುಮಹಾಸಭೆ. ಆರ್‌ಎಸ್‌ಎಸ್ ವಿಚಾರವಾಗಿತ್ತು. ಗಾಂಧಿ ಮುಸ್ಲಿಂ ಪಕ್ಷಪಾತಿ ಎಂಬ ಆರೋಪವನ್ನು ಗಾಂಧೀಜಿ ಮೇಲೆ ಹೊರೆಸಲಾಯಿತು. ಭಾರತದ ವಿಭಜನೆಗೆ ಕಾರಣರಾದರು ಎಂಬ ಸುಳ್ಳು ಆರೋಪವನ್ನೂ ಗಾಂಧಿಯವರ ಮೇಲೆ ಹೊರಿಸಲಾಯಿತು. ಸಂಘ ಪರಿವಾರದ ಬೆಳವಣಿಗೆಗೆ ಅಡ್ಡಿಯಾಗಿದ್ದಾರೆ ಗಾಂಧಿ ಎಂಬ ಆರೋಪ ಹೊರೆಸಿ ಅವರನ್ನು ಕೊಲ್ಲುವ ಸಂಚು ನಡೆಯಿತು. ಸಂಘ ಪರಿವಾರಕ್ಕೆ ಆದರ್ಶ ವ್ಯಕ್ತಿ ಹಿಟ್ಲರ್. ಅವನು ಜನಾಂಗೀಯ ದ್ವೇಷಿ ಆಗಿದ್ದ ಎಂಬುದು ಇವರ ಹಿಟ್ಲರ್ ಮೇಲಿನ ಗೌರವಕ್ಕೆ ಕಾರಣ. ಇದನ್ನು ಗೋಲ್ವರ್‌ಕರರೇ ಪ್ರತಿಪಾದಿಸುತ್ತಾರೆ. ಹಿಂದೆ ಮುಸ್ಲಿಮರಿಂದ

ಹಿಂದುಗಳ ಮೇಲೆ ಆಗಿರುವ ಘನ ಘೋರ ದುಷ್ಕೃತ್ಯಗಳಿಗೆ ಪ್ರತೀಕಾರ ಕೈಗೊಳ್ಳುವ ಸಂಕಲ್ಪ ಇವರದು. ಅಖಂಡ ಭಾರತ ನಿರ್ಮಾಣ ಹಾಗೂ ಹಿಂದೂ ರಾಷ್ಟ್ರ ನಿರ್ಮಾಣ ಇವು ಆರ್‌ಎಸ್‌ಎಸ್‌ನ ಗುರಿ.

ಗೋಡ್ಸೆ ಸಾವರ್ಕರರು ಒಂದುಗೂಡಿ ಗಾಂಧಿ ಕೊಲೆಯ ಸಂಚು ಮಾಡಿದರು. ಕ್ರೋಧಕ್ಕೆ, ಸೇಡಿಗೆ ಭಾವಪರವಶನಾದರೆ ಮಾನವ ಕ್ರೂರ ಮೃಗಗಳಿಗಿಂತಲೂ, ಕ್ರೂರನಾಗಬಲ್ಲ ಎಂಬುದಕ್ಕೆ ಜ್ವಲಂತ ಉದಾಹರಣೆ ಇವರಿಬ್ಬರೂ. ಗೋಡ್ಸೆ ಸಂಘಪರಿವಾರದವನಲ್ಲ ಎಂದು ಬೊಬ್ಬೆ ಹಾಕುತ್ತಾರೆ ಆರ್‌ಎಸ್ಸೆಸ್ ಮುಖಂಡರು ಗಾಂಧಿ ಕೊಲೆಗೆ 12 ದಿನಗಳ ಮೊದಲು ಗೋಡ್ಸೆ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ರ‍್ಯಾಲಿಗೆ ಬಂದಿದ್ದ. ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಬೇಲಿ ವಾಸುದೇವ ಮೂರ್ತಿಗಳ ಅತಿಥಿಯಾಗಿದ್ದ. ಈ ಸುದ್ದಿಯನ್ನು ಅಂದಿನ ಪೌರವಾಣಿ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಗಾಂಧೀಜಿಯ ಹತ್ಯೆಗೆ ಮೊದಲು ಬಹಳ ಜನ ಗೋಡ್ಸೆಯ ಹೆಸರೇ ಕೇಳಿರಲಿಲ್ಲ. ಆದರೆ ಆರ್‌ಎಸ್‌ಎಸ್‌ನವರಿಗೆ ಮಾತ್ರ ಆತನ ಪೂರ್ಣ ಪರಿಚಯವಿತ್ತು. ಅವನು ಆರ್‌ಎಸ್‌ಎಸ್ ಸದಸ್ಯನಲ್ಲದಿದ್ದರೆ ಅವನೇಕೆ ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯ ಸಮಾವೇಶಕ್ಕೆ ಬರುತ್ತಿದ್ದ? ಆರ್‌ಎಸ್‌ಎಸ್‌ನ ಗಣ್ಯವ್ಯಕ್ತಿಯಾಗಿದ್ದದ್ದರಿಂದಲೇ ಗೋಡ್ಸೆಯನ್ನು ಸ್ವಾಗತ ಸಮಿತಿಯ ಅಧ್ಯಕ್ಷರು ತಮ್ಮ ಮನೆಯಲ್ಲಿ ಅತಿಥಿಯಾಗಿ ಉಳಿಸಿಕೊಂಡಿದ್ದರು. ಗಾಂಧಿಯನ್ನು ಹತ್ಯೆ ಮಾಡಿದ ಗೋಡ್ಸೆ ಆರ್‌ಎಸ್‌ಎಸ್ ಅಲ್ಲ ಎಂದು ಆ ಜನ ಈಗ ವಾದ ಮಾಡುತ್ತಾರೆ. ಅದರಲ್ಲಿ ಹುರುಳಿಲ್ಲ.

ಸ್ವಾತಂತ್ರ್ಯ ಬಂದ ಈ 75 ವರ್ಷಗಳಲ್ಲಿ ನಡೆದಿರುವ ಘಟನೆಗಳೇ ಆರ್‌ಎಸ್‌ಎಸ್‌ನ ಸೇಡಿನ ಮನೋಭಾವಕ್ಕೆ ಸಾಕ್ಷಿ. ಬಾಬ್ರಿ ಮಸೀದಿ ಧ್ವಂಸ, ದೆಹಲಿ, ಮುಂಬಯಿ, ಗುಜರಾತ್‌ಗಳಲ್ಲಿ ನಡೆದ ಕಗ್ಗೊಲೆಗಳು, ದತ್ತ ಪೀಠವನ್ನು ವಶಪಡಿಸಿಕೊಳ್ಳುವ ಹುನ್ನಾರ, ಗುಜರಾತಿನಲ್ಲಿ ಮುಸ್ಲಿಮರ ಸಾಲ್ಗೊಲೆ ಮಾಡಿದ್ದು ಇವೆಲ್ಲ ಹಿಂದುತ್ವ ಪ್ರತಿಪಾದಕರ

ಮುಂದುವರೆದ ಅಜೆಂಡಾ. ಇದು ಭಾರತದ ಸಮಗ್ರತೆ, ಐಕ್ಯತೆ ಮತ್ತು ಜಾತ್ಯತೀತ ನೀತಿಗೆ ಮಾರಕವಾಗಬಲ್ಲದು.

ಲೇಖಕಿ ನೇಮಿಚಂದ್ರ ಹೀಗೆ ಬರೆಯುತ್ತಾರೆ. 'ನನಗೇಕೆ ಭಾರತ ಇಷ್ಟವಾಯಿತು? ಇಷ್ಟು ಜಾತಿ ಮತಗಳು ಭಾರತದಲ್ಲಿದ್ದರೂ, ಲಕ್ಷ್ಮಿ, ಸರಸ್ವತಿ, ವಿಷ್ಣು, ಮಹೇಶ್ವರ ಇವರ ನಡುವೆಯೇ ಮಾರಮ್ಮ, ಕಾಳಮ್ಮ, ಸಪ್ಲಮ್ಮ, ಪ್ಲೇಗಮ್ಮ, ಕರಿಯಮ್ಮಗಳೂ ಶತಶತಮಾನಗಳಿಂದ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳದೆ ತಣ್ಣಗೆ ಪೂಜೆಗೊಳ್ಳುತ್ತಿವೆಯಲ್ಲ! ಅಲ್ಲದೆ ಹೊರಗಿನಿಂದ ಬಂದವರನ್ನೂ, ಅವರ ದೇವರುಗಳನ್ನೂ ಅವರ ಪಾಡಿಗೆ ಅವರು ಬದುಕಲು ಬಿಟ್ಟರಲ್ಲಾ! ಇಲ್ಲಿ ಯಾವ ಧರ್ಮವೂ ದಮನಕ್ಕೆ ಒಳಗಾಗಿಲ್ಲ. ಭಾರತ ಯಾವ ದೇಶದ ಮೇಲೂ ದುರಾಕ್ರಮಣಕ್ಕೆ ಹೋಗಿಲ್ಲ. ಮುಗ್ಧತೆಯೋ, ಮೌಢ್ಯವೋ ಅಥವಾ ನೆಲದ ಮಹಿಮೆಯೋ ತಿಳಿಯದು. ತಮ್ಮ ತಮ್ಮ ಜಾತಿ, ಆಚಾರ, ಧರ್ಮಗಳ ನಡುವೆಯೇ ಎಲ್ಲ ಜನ ಒಂದಾದರು. ಇಲ್ಲಿ ಎಲ್ಲ ಜನರೂ ಶಿವನಿಗೇ ಕೈಮುಗಿಯಬೇಕೆಂಬ ನಿರ್ಬಂಧವಿಲ್ಲ. ಈ ದೇಶಕ್ಕೆ ದ್ವೇಷ ಎಂದರೇನು ತಿಳಿಯದು. ಹಿಂದುಗಳು ಬುದ್ಧ, ಜೈನ, ಮಹಾವೀರ, ಗಾಂಧಿಯ ನಿಜವಾದ ಉತ್ತರಾಧಿಕಾರಿಗಳು. ಈ ನೆಲದಲ್ಲಿ ಎಲ್ಲ ಧರ್ಮಗಳ ರಂಗು ಪಡೆದ ಸಪ್ತವರ್ಣಗಳಿವೆ. ಧರ್ಮಸಹಿಷ್ಣುತೆಗೆ ಹೆಸರಾಂತ ಭಾರತೀಯರು ಇನ್ನು ಸಾವಿರ ವರ್ಷಗಳ ನಂತರ ಕ್ಷಮೆ ಕೇಳುವಂತಹ ಯವುದೇ ಅನಾಹುತವನ್ನ ಮಾಡದಿರಲಿ. ಕಳೆದ ಶತಮಾನದಲ್ಲಿ ಹಿಟ್ಲರ್ ಯೂರೋಪಿನಲ್ಲಿ ಮಾತ್ರ ಹುಟ್ಟಿದ್ದ. ಈಗ ಹಿಟ್ಲರ್ ಎಲ್ಲಿ ಬೇಕಾದರೂ ಹುಟ್ಟಬಹುದು. ಆದ್ದರಿಂದ ನಾವು ಹೇಳಬೇಕಾಗಿದೆ. 'ನಿಮ್ಮ ದೇಶವನ್ನು ಪ್ರೀತಿಸಿ, ನಿಮ್ಮ ಸರ್ಕಾರಗಳನ್ನು ಅನುಮಾನಿಸಿ 'ಮಲಗು ಮಲಗೆಲೆ ಮಗುವೆ ಈ ಸಾಮೂಹಿಕ ಶಿಶು ಹತ್ಯೆ ಪುನರಾವರ್ತಿಸದು' ಹಿರೋಷಿಮಾದ ಅಣುಬಾಂಬ್ ಕಗ್ಗೊಲೆಯ ಸ್ಮಾರಕದ ಮೇಲೆ ಬರೆದಿರುವ ಅಕ್ಷರಗಳು ಇವು.

ಇಂತಹ ಸಾಲ್ಗೊಲೆ ಮಾಡುವುದು ಸಾಧ್ಯವೇ? ನಮ್ಮೊಳಗೆ ಒಬ್ಬ ಸೈತಾನನಿದ್ದಾನೆಯೇ? ಕುಣಿದು ಕುಪ್ಪಳಿಸುವ ರಾಕ್ಷಸನಿದ್ದಾನೆಯೇ? ಇತಿಹಾಸದ ತಪ್ಪುಗಳನ್ನು ತಿದ್ದಲು ಹೊರಟರೆ ಹೊಸ ತಪ್ಪುಗಳನ್ನು ಮಾಡುತ್ತೇವೆ. ಇತಿಹಾಸವನ್ನು ಭೂತಕಾಲಕ್ಕೆ ಬಿಟ್ಟುಬಿಡುವುದು ಒಳ್ಳೆಯದು. ಭವಿಷ್ಯದ ಭರವಸೆಗಳಷ್ಟೇ ನಮ್ಮದಾಗಲಿ. ಮತ್ತೆ ಎಂದೂ ಯಾವ ದೇವಾಲಯವನ್ನೂ ಯಾರೂ ಒಡೆಯದಿರಲಿ, ಯಾವ ಮಸೀದಿಯೂ ಉರುಳದಿರಲಿ. ಜನರ ಮನಸ್ಸಿನಲ್ಲಿ ಕಟ್ಟಲಾಗಿರುವ ನಂಬಿಕೆಗಳ ಗೋಪುರಗಳು ಕುಸಿಯದಿರಲಿ. ಯಾವ ಮನುಷ್ಯನೂ ಮತ್ತೆ ಶಿಲುಬೆಗೇರದಿರಲಿ. ನಮ್ಮ ಬದುಕುವ ಹಕ್ಕು ಇನ್ನೊಬ್ಬರ ಸಾವಿನ ಮೇಲೆ ಅವಲಂಬಿಸಬೇಕೆ? ಭೀತಿ ಇಲ್ಲದ ಸಮಾಜದ ಕನಸು ಕಂಡ ನನಗೆ ಪ್ರತಿಯೊಬ್ಬನೂ ತನ್ನಿಚ್ಛೆಯ ಧರ್ಮವನ್ನು ಆಚರಿಸಿಯೂ ನಿರ್ಭೀತಿಯಿಂದ ಬದುಕುವ ಕಲ್ಪನೆ ನನ್ನದು.'

ಗಾಂಧೀಜಿ ಸೋಷಿಯಲಿಸ್ಟರೇ?

ಸೋಷಿಯಲಿಸಂನಲ್ಲಿ ಅನೇಕ ಪ್ರಭೇದಗಳಿವೆ. ಬೇರೆ ಬೇರೆ ವಿಚಾರ ಸರಣಿಗಳಿವೆ, ಸೋಷಿಯಲಿಸ್ಟ್ ಸಮಾಜದ ವಿವಿಧ ಚಿತ್ರಣಗಳಿವೆ. ಸೋಷಿಯಲಿಸ್ಟ್ ಚಿಂತಕರು ಮತ್ತು ಕಾರ್ಯಕರ್ತರು ಕಾಲಕಾಲಕ್ಕೆ ಈ ಬದಲಾವಣೆಗಳನ್ನು ತರುತ್ತಾ ಇದ್ದಾರೆ. ಎಷ್ಟೋ ವರ್ಷಗಳಿಂದ ಗಾಂಧಿ ತತ್ವದಲ್ಲಿ ನಂಬಿಕೆಯುಳ್ಳವರು ಮತ್ತು ಸೋಷಿಯಲಿಸ್ಟರು ಪ್ರತಿಕ್ರಿಯಿಸುತ್ತಾ ಬಂದಿದ್ದಾರೆ. 1934 ರಿಂದ 69ರವರೆಗೆ ಸೋಷಿಯಲಿಸ್ಟರು ನೇರವಾಗಿ ಗಾಂಧೀಜಿಯವರೊಡನೆ ಸಂಭಾಷಣೆ ನಡೆಸಿದ್ದಾರೆ. ಗಾಂಧೀಜಿ ಮತ್ತು ಸೋಷಿಯಲಿಸಂ ಬಗ್ಗೆ ಲೇಖನಗಳನ್ನು ಬರೆದಿದ್ದಾರೆ.

ಗಾಂಧೀಜಿ ಸೋಷಿಯಲಿಸಂ ಆಚರಣೆಗೆ ತಂದರು. ಸರಳತೆಯ ಸಾಕಾರಮೂರ್ತಿಯಾದರು. ಸ್ವಂತ ಆಸ್ತಿಯನ್ನು ಮಾಡುವ ಗೋಜಿಗೆ ಅವರು ಹೋಗಲಿಲ್ಲ. ಸೋಷಿಯಲಿಸ್ಟ್ ಸಿದ್ಧಾಂತವನ್ನು ಒಪ್ಪಿಕೊಂಡಿರುವ ಸೋಷಿಯಲಿಸ್ಟ್ ಪಕ್ಷದ ಅನೇಕ ನಾಯಕರು ಸೋಷಿಲಿಸಂ ಅನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿಲ್ಲ. ಸೋಷಿಯಲಿಸಂ ಪ್ರಚಾರಕರಾಗಿ ಮಾತ್ರ ಅವರು ಇದ್ದಾರೆ. ಇಡೀ ಸಮಾಜ ಸೋಷಿಯಲಿಸಂ ಸಿದ್ಧಾಂತವನ್ನು ಒಪ್ಪಿಕೊಂಡ ಮೇಲೆ ತಾವೂ ಆ ಸಿದ್ಧಾಂತಕ್ಕನುಗುಣವಾಗಿ ತಮ್ಮ ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳುವ ಮಾತನ್ನಾಡುತ್ತಾರೆ. ನಾವು ಕಂಡಂತೆ ನಿಜವಾದ ಸೋಷಿಯಲಿಸಂನ್ನು ತಮ್ಮ ಜೀವನಕ್ಕೆ ಅಳವಡಿಸಿಕೊಂಡವರು ಗಾಂಧೀಜಿ ಒಬ್ಬರೇ. ಗಾಂಧೀಜಿ ಹೇಳಿದರು 'ನಿಮ್ಮಲ್ಲಿ (ಸೋಷಿಯಲಿಸ್ಟರಲ್ಲಿ) ಅನೇಕರು ಜನ್ಮತಾಳುವ ಮೊದಲೇ ನಾನು ಸೋಷಿಯಲಿಸ್ಟ್ ಆಗಿದ್ದೆ' ಎಂದು. ಇತರೆಯವರನ್ನು ಸೋಷಿಯಲಿಸಂ

ಸಿದ್ಧಾಂತಕ್ಕೆ ಪರಿವರ್ತನೆ ಮಾಡಬಯಸವುದಾದರೆ ಮೊದಲು ತಾವು ಸೋಷಿಯಲಿಸ್ಟ್ ಸಿದ್ಧಾಂತಕ್ಕನುಗುಣವಾಗಿ ನಿಮ್ಮ ಜೀವನ ಶೈಲಿಯನ್ನು ರೂಪಿಸಿಕೊಳ್ಳಬೇಕು ಎಂದು ಹೇಳುತ್ತೇನೆ' ಎನ್ನುತ್ತಾರೆ ಗಾಂಧೀಜಿ.

ಅಶೋಕ ಮೆಹ್ತಾ, ಹಿಂಗೋರಾಣಿ, ಲೋಹಿಯ, ಜಯಪ್ರಕಾಶ್ ನಾರಾಯಣ್, ಸುರೇಂದ್ರನಾಥ್ ದ್ವಿವೇದಿ, ನಾನಾಸಾಹೇಬ್ ಗೋರೆ, ಆಚಾರ್ಯ ನರೇಂದ್ರದೇವ್, ಎ. ಎಸ್. ಮಾಥುರ್ ಇವರೆಲ್ಲ ಗಾಂಗ್ೀಜಿಯ ಸೋಷಿಯಲಿಸಂ ಬಗೆಗೆ ಬರೆದಿದ್ದಾರೆ. 'ನನ್ನ ಸೋಷಿಯಲಿಸಂ ಅಂದರೆ ಕಟ್ಟಕಡೆಯ ಮನುಷ್ಯನಿಗೂ ಬದುಕಿ ಬಾಳುವ ಹಕ್ಕನ್ನು ಒದಗಿಸುವುದು' ಎನ್ನುತ್ತಾರೆ ಗಾಂಧೀಜಿ ಇದನ್ನು ಲೂಯಿ ಫಿಷರ್ **Moral Socialism** ಎಂದು ಕರೆಯುತ್ತಾರೆ. 'ಶತ್ರುಗಳನ್ನು ಮಿತ್ರರನ್ನಾಗಿ ಮಾಡಿಕೊಳ್ಳುವುದು ಸೋಷಿಯಲಿಸಂ ಎಂದಾದರೆ, ನನ್ನನ್ನು ಅಪ್ಪಟ ಸೋಷಿಯಲಿಸ್ಟ್ ಎಂದು ಭಾವಿಸಬೇಕು. ಎಲ್ಲ ಸೋಷಿಯಲಿಸ್ಟರೂ ನನ್ನಿಂದ ಸೋಷಿಯಲಿಸಂ ಪಾಠ ಕಲಿಯಬೇಕು. ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವ ಇವು ಸೋಷಿಯಲಿಸಂನ ರೂಢಿಯಲ್ಲಿರುವ ಆದರ್ಶಗಳು' ಎನ್ನುತ್ತಾರೆ ಗಾಂಧೀಜಿ. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರಿಗಾಗುತ್ತಿದ್ದ ಅನ್ಯಾಯದ ವಿರುದ್ಧ ಮಾತ್ರ ಹೋರಾಟ ನಡೆಸಲಿಲ್ಲ ಅಥವಾ ಅದು ಕಪ್ಪು ಜನರ ಪರವಾಗಿ ಬಿಳಿಯರ ಮೇಲೆ ಹೂಡಿದ ಹೋರಾಟವೂ ಅಲ್ಲ. ಗಾಂಧೀಜಿ ಕರಿಯರು ಸರ್ವಸಮಾನರು ಎಂದು ಬಿಳಿಯರಿಗೆ ತಿಳಿಸಿ ಹೇಳುವ **'un to this last'** ಅದು. ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರು, ಕರಿಯರಲ್ಲಿ ಸರ್ವ ಸಮಾನತೆಯನ್ನು ಬಯಸಿದ ಗಾಂಧೀಜಿ, ಭಾರತದಲ್ಲಿರುವ ಅಸಮಾನತೆಯನ್ನು ಹೇಗೆ ಸಹಿಸಿಯಾರು? ಭಾರತದ ಕೆಲ ವರ್ಗದ ಜನರು ನಿರ್ಮಿಸಿಕೊಂಡಿರುವ ಆರ್ಥಿಕ ಸಾಮಾಜಿಕ ಅಸಮಾನತೆಯನ್ನು ತೊಡೆದುಹಾಕುವುದೇ ಅವರ ಗುರಿಯಾಗಿತ್ತು.

ಗಾಂಧೀಜಿಯ ಸೋಷಿಯಲಿಸಂ ಬಗೆಗಿನ ಅಭಿಪ್ರಾಯಗಳು ಬೇರೆ ದೇಶಗಳಿಂದ ಆಮದು ಮಾಡಿಕೊಂಡವೂ ಅಲ್ಲ. ಪಾಶ್ಚಾತ್ಯ ಹಾಗೂ ಭಾರತೀಯರು ಬರೆದ ಪುಸ್ತಕಗಳ ಪ್ರಭಾವದಿಂದ ರೂಪಿತವಾದದ್ದೂ ಅಲ್ಲ. ಸೋಷಿಯಲಿಸಂ ವಿಚಾರದಲ್ಲಿ ಅವರು ಯಾವ ಪುಸ್ತಕವನ್ನೂ ಓದಿಯೂ ಇರಲಿಲ್ಲ. ಯಾವ ಪುಸ್ತಕಗಳನ್ನೂ ಓದದೆಯೇ ಮಾನವರನ್ನು ಸಮಾನತೆಯಿಂದ ನೋಡುವುದನ್ನು ಕಲಿಯಲು ಸಾಧ್ಯ. ತಮ್ಮ ಜೀವನದಲ್ಲಿ ಆ ತತ್ವಗಳನ್ನು ಅಳವಡಿಸಿಕೊಳ್ಳುವ ಮೂಲಕ ಗಾಂಧೀಜಿ ಸೋಷಿಯಲಿಸಂನ ಮಹತ್ವ ಕಂಡುಕೊಂಡರು. ಈಶಾವಾಸ್ಯ ಉಪನಿಷತ್ತಿನ ಕೆಲವು ಸಾಲುಗಳಲ್ಲಿ ಸೋಷಿಯಲಿಸಂ ಹುಟ್ಟಿಗೆ ಬೇಕಾದ ವಿಚಾರಗಳಿವೆ. ಸೋಷಿಯಲಿಸಂ ಎಂಬುದು ಹೊಸದಾಗಿ ಟಂಕಿಸಿದ ಶಬ್ದ ಇರಬಹುದು. ಆದರೆ ಸರ್ವೋದಯದ ಪರಿಕಲ್ಪನೆ ಏನೂ ಹೊಸ ಶೋಧನೆ ಅಲ್ಲ.

ಸತ್ಯ ಮತ್ತು ಅಹಿಂಸೆ, ಸೋಷಿಯಲಿಸಂನಲ್ಲಿರಬೇಕಾದ ಜೀವಂತ ಧಾತುಗಳು. ಸರ್ವೋದಯ ಸೋಷಿಯಲಿಸ್ಟ್ ಸಿದ್ಧಾಂತವನ್ನೇ ಪುಷ್ಟೀಕರಿಸುತ್ತದೆ. ಪಾಶ್ಚಿಮಾತ್ಯ ಮತ್ತು ಪೌರಾತ್ಯ ಎರಡೂ ನಮೂನೆಯ ಸೋಷಿಯಲಿಸಂಗಳ ಉದ್ದೇಶಗಳೂ ಸಮಗ್ರ ಸಮಾಜದ ಹಿತರಕ್ಷಣೆಯನ್ನೇ ತನ್ನ ಗುರಿಯಾಗಿಸಿಕೊಂಡ, ಅಸಮಾನತೆಯನ್ನು ತೊಡೆದುಹಾಕುವ ಮೂಲಕ ಲಕ್ಷಾಂತರ ಮಂದಿ ಬಡವರ ಮತ್ತು ಬೆರಳಿಣಿಕೆಯಷ್ಟು ಇರುವ ಉಳ್ಳವರ ಮಧ್ಯೆ ಬೆಳೆದು ನಿಂತಿರುವ ಕಂದರವನ್ನು ಮುಚ್ಚುವುದು ಅದಕ್ಕೆ ಪರಿಹಾರ ಮಾರ್ಗ. ಸಮಾಜದ ಯಾವುದೇ ವ್ಯಕ್ತಿಯ ಕೈಯಲ್ಲಿ ಹಣದ ಸಾಂದ್ರೀಕರಣ ಆಗಬಾರದು. ಇಂದಿನ ಸಮಾಜದಲ್ಲಿ ಎದ್ದುಕಾಣುವ ಆರ್ಥಿಕ ಅಸಮಾನತೆ ಇದೆ. ಸೋಷಿಯಲಿಸಂನ ತಳಹದಿಯೇ ಆರ್ಥಿಕ ಸಮಾನತೆ. ಧನಿಕರ ಮತ್ತು ಹಸಿವಿನಿಂದ ನರಳುವ ಲಕ್ಷಾಂತರ ಬಡವರ ಮಧ್ಯೆ ದೊಡ್ಡ ಕಂದರವಿರುವವರೆಗೂ ಅಹಿಂಸಕ ವ್ಯವಸ್ಥೆಯ ಸರ್ಕಾರ ರಚನೆ ಮಾಡುವುದು ಸಾಧ್ಯವಾಗುವುದಿಲ್ಲ. ಒಂದು ಕಡೆ

ಗಗನಚುಂಬಿತ ಕಟ್ಟಡಗಳು, ಇನ್ನೊಂದು ಕಡೆ ಕೊಳೆಗೇರಿಗಳು ಮತ್ತು ಬೀದಿಯಲ್ಲಿ ವಾಸಿಸುವವರು.

ಈ ಭಾರತವನ್ನು ಸ್ವತಂತ್ರ ಭಾರತ ಎಂದು ಕರೆಯುವುದಾದರೂ ಹೇಗೆ? ರಾಷ್ಟ್ರದಲ್ಲಿರುವ ಎಲ್ಲರೂ ಸಮಾನತೆಯ ಫಲವನ್ನು ಅನುಭವಿಸುವವರಾಗಬೇಕು. ಬಡವರು ಈ ಅಸಮಾನತೆಯನ್ನು ಹೊಡೆದೋಡಿಸುವ ಅಧಿಕಾರವನ್ನು ಚಲಾಯಿಸಬೇಕು. ನಮ್ಮ ಕಾರ್ಖಾನೆಗಳು ಮಾಲೀಕರಿಗೆ ತಮ್ಮ ಕಿಸೆ ತುಂಬಿಕೊಳ್ಳುವುದಕ್ಕೆ ಅವಕಾಶ ಕೊಡಬಾರದು. ಕಾರ್ಖಾನೆಗಳು ಗಳಿಸುವ ಲಾಭ ಇಡೀ ಸಮಾಜದ ಅನುಕೂಲಕ್ಕೆ ಬಳಕೆಯಾಗಬೇಕು. ಪ್ರಜಾಪ್ರಭುತ್ವ ಎಂದರೆ ಸಾಮಾಜಿಕ, ಆರ್ಥಿಕ, ರಾಜಕೀಯ ಸಮಾನತೆ. ಸೋಷಿಯಲಿಸಂ ಒಂದು ಸುಂದರ ಶಬ್ದ. ಸೋಷಿಯಲಿಸಂನಲ್ಲಿ ಸಮಾಜದ ಎಲ್ಲರೂ ಸರಿಸಮಾನರು. ಮೇಲ್ವರ್ಗ ತಳವರ್ಗಕ್ಕೆ ಇಲ್ಲಿ ಅವಕಾಶವಿಲ್ಲ. ಅಂದರೆ ಸಮಾಜದಲ್ಲಿ ಯಾರೂ ಮೇಲಲ್ಲ, ಯಾರೂ ಕೀಳಲ್ಲ. ಎಲ್ಲರೂ ಸರಿಸಮಾನರು. ಸೋಷಿಯಲಿಸ್ಟರು ಸೋಷಿಯಲಿಸಂ ಅನ್ನು ಶಾಸನದ ಮೂಲಕ ಜಾರಿಗೊಳಿಸಬೇಕೆಂದು ಆಶಿಸುತ್ತಾರೆ. ಶಾಸನ ಮಾಡುವುದಲ್ಲ. ಸೋಷಿಯಲಿಸಂ ಅನ್ನು ಸಾಮೂಹಿಕ ಪ್ರಯತ್ನದಿಂದ, ಹೋರಾಟದಿಂದ ಸ್ಥಾಪಿಸಬೇಕೆಂಬುದೂ, ಅದರ ಆಚರಣೆಯನ್ನು ವ್ಯಕ್ತಿಶಃ ಪ್ರತಿಯೊಬ್ಬರೂ ಜಾರಿಗೆ ತಂದುಕೊಳ್ಳಬೇಕೆಂಬುದೂ ಗಾಂಧೀಜಿಯ ಆಶಯ.

'ನಾನು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಉಳ್ಳವನು. ಸೋಷಿಯಲಿಸ್ಟರು ಆಚರಣೆಗೆ ತರಲು ಬಯಸುವ ಸೋಷಿಯಲಿಸಂ, ಪಾಶ್ಚಿಮಾತ್ಯ ಮೂಲದ್ದು. ಅದು ನನ್ನ ಕಲ್ಪನೆಯ ಸೋಷಿಯಲಿಸಂಗಿಂತ ಮೂಲಭೂತವಾಗಿ ಬೇರೆ ತರದ್ದು.' ಮಾರ್ಗ ಮತ್ತು ಗುರಿ ಬಗೆಗೂ ನನ್ನ ದೃಷ್ಟಿ ಭಿನ್ನ. ನಾನು **Mass Production** ವಿರೋಧಿ, ನಾನು **Production by the masses**ನಲ್ಲಿ ನಂಬಿಕೆಯುಳ್ಳವನು. ದೊಡ್ಡ ಕಾರ್ಖಾನೆಗಳು ಬಂದು ಗ್ರಾಮೋದ್ಯೋಗ, ಗೃಹದ್ಯೋಗಗಳನ್ನು

ನಾಶಮಾಡಿವೆ. ಹಳ್ಳಿಯ ಕಸಬುದಾರರನ್ನು ಬೀದಿಪಾಲು ಮಾಡಿವೆ. ಮನುಷ್ಯ ಸ್ವಭಾವತಃ ಸ್ವಾರ್ಥಿಯೆಂದು ಸೋಷಿಯಲಿಸ್ಟರು ಪ್ರತಿಪಾದಿಸುತ್ತಾರೆ. ನಾನು ಇದನ್ನು ಒಪ್ಪುವುದಿಲ್ಲ. ಮನುಷ್ಯ ಮತ್ತು ಪ್ರಾಣಿಗಳಿಗಿರುವ ಮುಖ್ಯ ವ್ಯತ್ಯಾಸವೆಂದರೆ ಮಾನವ ತನ್ನೊಳಗಿರುವ ಆತ್ಮಕ್ಕೆ ಸ್ಪಂದಿಸುತ್ತಾನೆ. ತನ್ನ ಭಾವೋದ್ರೇಕವನ್ನು ಅತ್ಮಬಲದಿಂದ ಹತೋಟಿಯಲ್ಲಿಟ್ಟುಕೊಳ್ಳಬಲ್ಲ. ಸೋಷಿಯಲಿಸ್ಟ್‌ರ ಗುರಿ ಭೌತಿಕ ಬೆಳವಣಿಗೆ ಮಾತ್ರ ಆದ್ದರಿಂದ ವ್ಯಕ್ತಿ ಸ್ವಾತಂತ್ರ್ಯಕ್ಕೆ ಅಲ್ಲಿ ಎಡೆ ಇಲ್ಲ. ಅವರಿಗೆ ಹಿಂಸೆಯಿಂದ ಕೂಡಿದ ಕ್ರಾಂತಿಯಲ್ಲಿ ನಂಬಿಕೆ ಇದೆ ಎನ್ನುತ್ತಾರೆ ಗಾಂಧೀಜಿ.

ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವ ಸೋಷಿಯಲಿಸ್ಟರು ಪ್ರಜಾಸತ್ತಾತ್ಮಕ ರೀತಿಯಲ್ಲಿ ಶಾಸನ ಮಾಡುವ ಮೂಲಕ ಸೋಷಿಯಲಿಸಂನ್ನು ಜಾರಿಗೊಳಿಸಿ ರಾಜ್ಯಾಡಳಿತವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವುದರಲ್ಲಿ ನಂಬಿಕೆ ಇಟ್ಟಿದ್ದಾರೆ ಎಂಬುದು ಗಾಂಧೀಜಿಯ ಅಭಿಪ್ರಾಯ. ನೀತಿಯ ನೆಲೆಗಟ್ಟಿನ ಮೇಲೆ ಗಾಂಧೀಜಿಯ ಸ್ವರಭಾರ. ಯುಕ್ತಿಯ ವ್ಯೂಹರಚನೆ ಕಡೆಗೆ, ಸೋಷಿಯಲಿಸ್ಟರ ಒಲವು – ಸೋಷಿಯಲಿಸಂನ್ನು ತಮ್ಮ ಜೀವನದಲ್ಲಿ ವೈಯಕ್ತಿಕ ಬದುಕಿನಲ್ಲಿ ಅಳವಡಿಸಿಕೊಳ್ಳುವುದರಲ್ಲಿ ಸೋಷಿಯಲಿಸ್ಟರಿಗೆ ನಂಬಿಕೆ ಇಲ್ಲ. ಸೋಷಿಯಲಿಸ್ಟ್‌ರು ಕಾಂಗ್ರೆಸ್ಸಿನಲ್ಲಿ ಇದ್ದಾಗ ಗಾಂಧೀಜಿ ಹೇಳುತ್ತಿದ್ದರು, 'ಕಾಂಗ್ರೆಸ್ ತೀರ್ಮಾನಗಳಿಗೆ ಬದ್ಧರಾಗಿ, ಇಲ್ಲವೇ ಕಾಂಗ್ರೆಸ್ಸನ್ನು ಸಂವಿಧಾನಾತ್ಮಕವಾಗಿ ವಶಪಡಿಸಿಕೊಳ್ಳಿ,' ಎಂದು.

ಗಾಂಧೀಜಿ ಮತ್ತು ಅಂಬೇಡ್ಕರ್

ಸ್ವಾತಂತ್ರ್ಯ ಬಂದ ಮೇಲೆ ಗಾಂಧೀಜಿ ಮತ್ತು ಅಂಬೇಡ್ಕರರನ್ನು ವಿರೋಧಿಗಳಂತೆ ಬಣ್ಣಿಸುವ ಜನ ಹುಟ್ಟಿಕೊಂಡಿದ್ದಾರೆ.

ಡಾ. ಅಂಬೇಡ್ಕರ್ ಗಾಂಧೀಜಿ ಇಬ್ಬರೂ ಹುಟ್ಟು ಹೋರಾಟಗಾರರು. ಅಂಬೇಡ್ಕರ್ ಚಮ್ಮಾರರ ಮನೆಯಲ್ಲಿ ಹುಟ್ಟಿ ಬೆಳೆದವರು. ಅಸ್ಪೃಶ್ಯರನ್ನು ಸವರ್ಣೀಯರು ಹೇಗೆ ನಡೆಸಿಕೊಳ್ಳುತ್ತಾರೆಂಬುದನ್ನು ಕಣ್ಣಾರೆ ಕಂಡವರು. ವಿದ್ಯಾವಂತನಾದ ತನ್ನನ್ನು ಅಸ್ಪೃಶ್ಯನೆಂಬ ಕಾರಣದಿಂದ ಸಮಾಜ ಎಷ್ಟು ಕ್ರೂರವಾಗಿ ನಡೆಸಿಕೊಂಡಿತು ಎಂಬುದನ್ನು ಸ್ವತಃ ಅನುಭವಿಸಿದವರು. ಸೂಟು ಬೂಟು ಧರಿಸಿದ್ದ ಅಂಬೇಡ್ಕರರನ್ನು ರೈತರೊಬ್ಬರು ತಮ್ಮ ಗಾಡಿಯಲ್ಲಿ ಹತ್ತಿಸಿಕೊಂಡು ಹೋದರು. ಸಂಭಾಷಣೆಯಿಂದ ಅಂಬೇಡ್ಕರ್ ಒಬ್ಬ ಚಮಾರ್ ಎಂಬುದು ವ್ಯಕ್ತವಾದಾಗ, ಅವರನ್ನು ಗಾಡಿಯಿಂದ ಇಳಿಸಿ ಥಳಿಸಿದ್ದನ್ನೂ ಕೆರೆಯಲ್ಲಿ ನೀರು ಕುಡಿಯುವಾಗ ಸವರ್ಣೀಯರು ಅವರನ್ನು ಹಿಗ್ಗಾಮುಗ್ಗಾ ಹೊಡೆದದ್ದನ್ನೂ ಅಂಬೇಡ್ಕರ್ ನೆನಪಿಸಿಕೊಳ್ಳುತ್ತಾರೆ. ಸಮಾಜದಲ್ಲಿರುವ ಅಸಮಾನತೆಯ ವಿರುದ್ಧ ಅವಿರತ ಹೋರಾಟ ಮಾಡುತ್ತಾರೆ. ತಮ್ಮ ಜನಾಂಗದವರನ್ನು ಬಡಿದೆಬ್ಬಿಸುತ್ತಾರೆ, ಒಗ್ಗೂಡಿಸುತ್ತಾರೆ.

ಗಾಂಧೀಜಿ ಅವರು ಮೇಲ್ಜಾತಿಯಲ್ಲಿ ಹುಟ್ಟಿದವರಾಗಿ, ಅಂದಿನ ಸಮಾಜದಲ್ಲಿ ಹರಿಜನರನ್ನು ಮೇಲ್ಜಾತಿಯವರು ನಡೆಸಿಕೊಳ್ಳುತ್ತಿದ್ದ ರೀತಿಯನ್ನು ಕಂಡು ಮಮ್ಮಲ ಮರುಗುತ್ತಾರೆ. ಮೇಲ್ಜಾತಿಯವರು ತಮ್ಮ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದು ಹೇಳುತ್ತಾರೆ. ಸತ್ಯಾಗ್ರಹಗಳನ್ನು ಸಂಘಟಿಸಿ ಅಸ್ಪೃಶ್ಯತೆಯ ವಿರುದ್ಧವಾಗಿ ಹೋರಾಟಗಳನ್ನು ರೂಪಿಸುತ್ತಾರೆ. ಹಿಂದುಗಳ ಮನಸ್ಸನ್ನು ಪರಿವರ್ತನೆ ಮಾಡಲು ಭಾರತ ಯಾತ್ರೆ ಕೈಗೊಳ್ಳುತ್ತಾರೆ. ಪುಟ್ಟಪ್ಪನವರು

ಬ್ರಾಹ್ಮಣೇತರರಲ್ಲಿ ಶೂದ್ರ ಪ್ರಜ್ಞೆ ಬೆಳಸಲು ಶ್ರಮಿಸಿದಂತೆ ಅಂಬೇಡ್ಕರರು ಅಸ್ಪೃಶ್ಯರಲ್ಲಿ 'ಹೊಲೆಯ ಪ್ರಜ್ಞೆ' ಬೆಳೆಸುವ ಮೂಲಕ ಮೇಲ್ವರ್ಗದ ಸಮಾಜದ ವಿರುದ್ಧವಾಗಿ ಹೋರಾಡುವ ಮನೋಭಾವವನ್ನು ಬೆಳೆಸುತ್ತಾರೆ.

ಸ್ಪೃಶ್ಯರಾದ ಗಾಂಧೀಜಿ ಅಸ್ಪೃಶ್ಯತೆಯನ್ನು ಸಮಾಜದಿಂದ ಕಿತ್ತೊಗೆಯಲು ಹೋರಾಡಿದ್ದು ಭಾವನಾತ್ಮಕ ಅನುಭೂತಿಯ ಕಾರಣದಿಂದ. ಅಂಬೇಡ್ಕರರು ಸ್ವಯಂ ಅಸ್ಪೃಶ್ಯರಿದ್ದು ಹೆಜ್ಜೆ ಹೆಜ್ಜೆಗೂ ಸವರ್ಣೀಯರಿಂದ ಅಪಮಾನವನ್ನು, ದೌರ್ಜನ್ಯ, ದಬ್ಬಾಳಿಕೆ, ದಂಡನೆಗಳನ್ನೂ ಅನುಭವಿಸುತ್ತಾ ಬೆಳೆದವರು. ತಾವು ಅನುಭವಿಸಿದ ದೌರ್ಜನ್ಯ, ದಬ್ಬಾಳಿಕೆ, ದಂಡನೆ ತಮಗೊಬ್ಬರಿಗೇ ಆದದ್ದಲ್ಲ. ಅಸ್ಪೃಶ್ಯ ಸಮಾಜ ನೂರಾರು ವರ್ಷಗಳಿಂದ ಈ ಬಗೆಯ ಬವಣೆಯನ್ನು ಅನುಭವಿಸುತ್ತಾ ಬಂದಿದೆ. ಈ ಪಿಡುಗನ್ನು ಬೇರುಸಹಿತ ಕಿತ್ತುಹಾಕಬೇಕೆಂದು ಅವರು ಸಂಕಲ್ಪ ಮಾಡಿದರು. ಅದು ಅವರ ದೊಡ್ಡತನ. ಅವರ ಮಹತ್ವಾಕಾಂಕ್ಷೆಗೆ ಸಾಕ್ಷಿ. ಬ್ರಿಟಿಷರು ಭಾರತದ ಪ್ರಜೆಗೆ ಅಧಿಕಾರವನ್ನು ಹಸ್ತಾಂತರಿಸುವ ಸಂದರ್ಭ ಬಂದಾಗ ಬ್ರಿಟಿಷ್ ಸರ್ಕಾರಕ್ಕೆ ಅಂಬೇಡ್ಕರ್‌ರವರು 'ನೀವು ಭಾರತ ಬಿಟ್ಟು ಹೊರಡುವ ಮೊದಲು ಅಸ್ಪೃಶ್ಯರ ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸಿ ಹೋಗಿ' ಎಂದು ವಿನಂತಿಸಿಕೊಂಡರು. ಒಡೆದು ಆಳುವ ನೀತಿಯನ್ನು ಮೊದಲಿನಿಂದ ಕೊನೆವರೆಗೂ ಅನುಸರಿಸಿಕೊಂಡು ಬಂದ ಬ್ರಿಟಿಷರು ಇವರ ಕೋರಿಕೆಯನ್ನು ಈಡೇರಿಸಲಿಲ್ಲ ಎಂಬುದು ಆಶ್ಚರ್ಯದ ಸಂಗತಿಯೇನಲ್ಲ.

ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳು ಆಗಿದ್ದರೂ ಅಸ್ಪೃಶ್ಯರ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯಲ್ಲಿ ಹೆಚ್ಚಿನ ಪ್ರಗತಿ ಕಂಡುಬಂದಿಲ್ಲ. ಸ್ವಾತಂತ್ರ್ಯದ ಫಲ ಕೇವಲ ಹಿಡಿ ಮಂದಿ ಪಟ್ಟಭದ್ರರ ಪಾಲಾಗಿದೆ. ಈ ಹಿನ್ನೆಲೆಯಲ್ಲಿ ವಿಚಾರ ಮಾಡಿದರೆ ಅಂಬೇಡ್ಕರರು 'ಸ್ವಾತಂತ್ರ್ಯ

ನೀಡುವ ಮೊದಲು ಅಸ್ಪೃಶ್ಯರ ಸಮಸ್ಯೆಗಳನ್ನು ಬಗೆಹರಿಸಿ ಹೋಗಿ' ಎಂದು ಬ್ರಿಟಿಷರನ್ನು ಕೇಳಿದ್ದು ಬಹಳ ಸಮಂಜಸವೆನಿಸುತ್ತದೆ. ಸರ್ಕಾರ ನಡೆಸುವವರು ಹರಿಜನರ, ಬಡವರ, ದಲಿತರ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಸುಧಾರಿಸುವುದಕ್ಕೆ ಆದ್ಯತೆ ನೀಡುತ್ತಲೇ ಇಲ್ಲ. ಅಂಬೇಡ್ಕರರಂತೆ ರಚನಾತ್ಮಕ ರೀತಿಯಲ್ಲಿ ಹೋರಾಟವನ್ನು ಮಾಡದೆ ಇದ್ದರೆ, ಆ ಮೂಲಕ ಆರ್ಥಿಕ, ಸಾಮಾಜಿಕ, ಸಮಾನತೆಯನ್ನು ಪಡೆಯಲು ಯೋಜನೆಗಳನ್ನು ರೂಪಿಸಿಕೊಳ್ಳದೆ ಇದ್ದರೆ ಇನ್ನು ನೂರು ವರ್ಷ ಕಳೆದರೂ ಅಸ್ಪೃಶ್ಯತೆ ನಾಶವಾಗುವುದಿಲ್ಲ. ಅಸ್ಪೃಶ್ಯರ ಸಮಸ್ಯೆಗಳು ಬಗೆಹರಿಯುವುದಿಲ್ಲ.

ಸ್ವಾತಂತ್ರ್ಯ ಬಂದ ತರುಣದಲ್ಲೇ ಸ್ವತಂತ್ರ ಭಾರತದ ರಾಜ್ಯಾಂಗವನ್ನು ರಚನೆ ಮಾಡಲು ರಾಜ್ಯಾಂಗ ಸಭೆಯನ್ನು ಅಸ್ತಿತ್ವಕ್ಕೆ ತರಲಾಯಿತು. ರಾಜ್ಯಾಂಗ ರಚನೆಯಂತಹ ಮಹತ್ವದ ಕೆಲಸ ನಿರ್ವಹಿಸಬೇಕಾದರೆ ಅಂಬೇಡ್ಕರರಂತಹ ಪ್ರಬುದ್ಧರು ರಾಜ್ಯಾಂಗ ಸಭೆಯಲ್ಲಿ ಇರಬೇಕು ಎಂದು ಗಾಂಧೀಜಿ ಭಾವಿಸಿದರು. ಕೂಡಲೇ ಗಾಂಧೀಜಿ ಪ್ರಧಾನಿ ಜವಹರಲಾಲ್ ನೆಹರು ಅವರನ್ನು ಸಂಧಿಸಿ, ಅಂಬೇಡ್ಕರರನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳಬೇಕೆಂದು ಸೂಚಿಸಿದರು. ಜವಹರಲಾಲರು, 'ಅಂಬೇಡ್ಕರ್ ಚುನಾವಣೆಯಲ್ಲಿ ಸೋಲನ್ನನುಭವಿಸಿದ್ದಾರೆ. ಇಷ್ಟರ ಮೇಲೆ ಅವರು ಕಾಂಗ್ರೆಸ್ಸಿಗರಲ್ಲ. ಅವರನ್ನು ಹಿಂಬಾಗಿಲಿನಿಂದ ಹೇಗೆ ಮಂತ್ರಿಮಂಡಲಕ್ಕೆ ತೆಗೆದುಕೊಳ್ಳುವುದು' ಎಂದು ಗಾಂಧೀಜಿ ಅವರನ್ನು ಪ್ರಶ್ನಿಸಿದರು. 'ಸ್ವಾತಂತ್ರ್ಯ ಕಾಂಗ್ರೆಸ್ಸಿಗೆ ಮಾತ್ರ ಬಂದಿಲ್ಲ. ಇಡೀ ದೇಶಕ್ಕೆ ಬಂದಿದೆ. ರಾಜ್ಯಾಂಗ ರಚನೆ ಮಾಡುವಾಗ ಅಂತಹವರಿರಬೇಡವೇ? ಕೂಡಲೆ ತಡಮಾಡದೆ ಅವರನ್ನು ಮಂತ್ರಿಮಂಡಲಕ್ಕೆ ತೆಗೆದುಕೊಳ್ಳಿ' ಎಂದರು ಗಾಂಧೀಜಿ. ಗಾಂಧೀಜಿಗೂ ಅಂಬೇಡ್ಕರರಿಗೂ ಇದ್ದ ಸಂಬಂಧ ಇಂಥದು!

ಸರ್ ಬಿ.ಎನ್. ರಾವ್‌ರ ಸಮಿತಿ ರಾಜ್ಯಾಂಗವನ್ನು ರಚಿಸಿತು. ರಾಜ್ಯಾಂಗದ ಕರಡು ಸಿದ್ದವಾದ ಮೇಲೆ ಅದನ್ನು ರಾಜ್ಯಾಂಗ ಸಭೆಯ ಮುಂದೆ ಇಟ್ಟು ಅದರ ಅಂಗೀಕಾರ ಪಡೆಯಬೇಕಾಗಿತ್ತು. ಇದಕ್ಕಾಗಿ **Stearing Committee** ರಚಿಸಲಾಯಿತು. ಈ ಸಮಿತಿಯಲ್ಲಿ ಅಂಬೇಡ್ಕರರಲ್ಲದೆ ಬೇರೆ ಮೂರು ಮಂದಿ ಇದ್ದರು. ರಾಜ್ಯಾಂಗದ ಒಂದೊಂದು ಕಲಂ ಅನ್ನೂ ತೆಗೆದುಕೊಂಡು ಚರ್ಚಿಸಲು ರಾಜ್ಯಾಂಗ ಸಭೆಯ ಅಧಿವೇಶನಗಳು ನಡೆಯುತ್ತಿರಬೇಕಾದರೆ **Stearing Committee**ಯ ಒಬ್ಬ ಸದಸ್ಯರು ನಿಧನರಾದರು. ಮತ್ತೊಬ್ಬರಿಗೆ ಖಾಯಿಲೆಯಾಗಿ ಅವರು ಸಮಾವೇಶದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಮೂರನೆಯ ಸದಸ್ಯರು ರಾಜಿನಾಮೆ ನೀಡಿ ಹೊರನಡೆದರು. ಹೀಗಾಗಿ **Screning Committee**ಯ ಸಂಪೂರ್ಣ ಜವಾಬ್ದಾರಿ ಅಂಬೇಡ್ಕರ್ ಹೆಗಲ ಮೇಲೆ ಬಿತ್ತು.

ಅಂಬೇಡ್ಕರ್ ಆ ಜವಾಬ್ದಾರಿಯನ್ನು ಅದ್ಭುತ ರೀತಿಯಲ್ಲಿ ನಿರ್ವಹಿಸಿದರು. ಮುಖ್ಯವಾದ ಕಲಂಗಳು ಚರ್ಚೆಗೆ ಬಂದ ಸಮಯದಲ್ಲಿ ಸದಸ್ಯರು ತಿದ್ದುಪಡಿಗಳನ್ನು ಸೂಚಿಸುತ್ತಿದ್ದರು. ಅಂತಹ ಎಲ್ಲ ಸಂದರ್ಭದಲ್ಲೂ ಆದಿಯಿಂದ ಅಂತ್ಯದವರೆಗೆ ಈ ತಿದ್ದುಪಡಿಗಳನ್ನು ಅಂಗೀಕರಿಸಬೇಕೇ ತಿರಸ್ಕರಿಸಬೇಕೇ ಎಂಬ ತೀರ್ಮಾನವನ್ನು ಅಂಬೇಡ್ಕರರೇ ತೆಗೆದುಕೊಳ್ಳಬೇಕಾಗಿ ಬಂತು. ಅಂಬೇಡ್ಕರರು ಬಹಳ ಸಮರ್ಥವಾಗಿ ಈ ಗುರುತರ ಜವಾಬ್ದಾರಿಯನ್ನು ನಿರ್ವಹಿಸಿದರು. ತಿದ್ದುಪಡಿಯನ್ನು ಅಂಗೀಕರಿಸದಿದ್ದಾಗ ಅವರು ಅದಕ್ಕೆ ಕಾರಣಗಳನ್ನು ಸುಧೀರ್ಘವಾಗಿ ಪ್ರಸ್ತಾಪಿಸಿದ್ದಾರೆ. ಅಂಬೇಡ್ಕರರು ಸಂವಿಧಾನವನ್ನು ಅಂತಿಮವಾಗಿ ಅಂಗೀಕರಿಸುವ ಸಂದರ್ಭದಲ್ಲಿ ಮಾಡಿರುವ ಭಾಷಣಗಳು ಮೌಲಿಕವಾಗಿವೆ. ಸಂವಿಧಾನದ ಮುಖ್ಯ ಆಶಯಗಳ ಮಹತ್ವವನ್ನು ಕುರಿತು ಅಂಬೇಡ್ಕರರ ಪ್ರತಿಪಾದನೆ, ಅವರ ಬುದ್ಧಿಮತ್ತತೆ, ಓದಿನ ಹರವು, ರಾಜ್ಯಾಂಗ ರಚನೆಯ ಬಗೆಗೆ ಅವರಿಗಿರುವ ಪ್ರೌಢಿಮೆಗಳನ್ನು ತೆರೆದಿಟ್ಟಿದೆ.

ಅಂಬೇಡ್ಕರರೇ ರಾಜ್ಯಾಂಗ ರಚಿಸಿದವರು ಎಂದೂ, ಮನುವನ್ನು ವಿರೋಧಿಸುವವರು, ಅಂಬೇಡ್ಕರ್ ಆಧುನಿಕ ಮನು ಎಂದು ಪ್ರತಿಪಾದಿಸುವುದನ್ನೂ ನಾವು ನಿತ್ಯ ಕೇಳುತ್ತೇವೆ. ರಾಜ್ಯಾಂಗ ರಚನೆಗಿಂತ ಉತ್ತಮ ಕೆಲಸ ಅಂಬೇಡ್ಕರರಿಂದ ನಡೆದಿದೆ. ರಾಜ್ಯಾಂಗವನ್ನು ತಿದ್ದಿ ತೀಡಿ ಅಂಗೀಕಾರ ಯೋಗ್ಯವಾದ ಅಮೂಲ್ಯ ಕಡತವನ್ನಾಗಿ ಅವರು ರೂಪಿಸಿರುವುದು ಸಾಮಾನ್ಯ ಕೆಲಸವಲ್ಲ. ಈ ಕೆಲಸವನ್ನು ಏಕೈಕ ವೀರನಂತೆ ನಿರ್ವಹಿಸಿರುವುದಂತೂ ಇನ್ನೂ ಶ್ಲಾಘನೀಯ. ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರಿಗೆ ಆಗುತ್ತಿದ್ದ ಅಪಮಾನ, ಭಾರತೀಯರ ಮೇಲೆ ಹೇರುತ್ತಿದ್ದ ಕ್ರೂರ ಕಾನೂನುಗಳು ಇವುಗಳ ವಿರುದ್ಧ ಅಲ್ಲಿದ್ದ ಭಾರತೀಯರನ್ನು ಸಂಘಟನೆ ಮಾಡಿ ಬಿಳಿಯರ ಸರ್ಕಾರದ ವಿರುದ್ಧ ದೀರ್ಘಕಾಲದ ಹೋರಾಟ ನಡೆಸಿ ಸರ್ಕಾರ ಎಲ್ಲ ಕರಾಳ ಶಾಸನಗಳನ್ನೂ ಹಿಂಪಡೆಯುವಂತೆ ಮಾಡಿದರು.

ವಿಶ್ವದ ಎಲ್ಲೆಡೆ, ಸೈನಿಕರ ಮೂಲಕ ಹಿಂಸಾಚಾರದ ಯುದ್ಧಗಳನ್ನು ಮಾಡುವ ಮೂಲಕ ಸ್ವಾತಂತ್ರ್ಯವನ್ನು ಪಡೆಯಲಾದರೆ ಭಾರತದಲ್ಲಿ ಗಾಂಧೀಜಿಯ ನೇತೃತ್ವದಲ್ಲಿ ಬಹುಮಟ್ಟಿಗೆ ಅಹಿಂಸಕ ಹೋರಾಟ ಮಾಡಿ ಸ್ವಾತಂತ್ರ್ಯವನ್ನು ಪಡೆಯಲಾಯಿತು. ಈ ಇಬ್ಬರು ಮಹನೀಯರ ಗುರಿಯೂ ಬಡವರ, ಶೋಷಿತರ ತುಳಿತಕ್ಕೊಳಗಾದವರ, ವಿಮೋಚನೆಯಾಗಿತ್ತು.

ಗಾಂಧೀಜಿ ಇಂದು ಅಪ್ರಸ್ತುತರೇ?

ಗಾಂಧೀಜಿ ಇಂದು ಪ್ರಸ್ತುತರೇ, ಅಪ್ರಸ್ತುತರೇ ಎಂಬ ಪ್ರಶ್ನೆ ಈಗಿನ ದಿನಗಳಲ್ಲಿ ಬಹಳವಾಗಿ ಕೇಳಿಬರುತ್ತಿದೆ. ಗಾಂಧೀಜಿಯನ್ನು ಅಧ್ಯಯನ ಮಾಡಿದವರು ಈ ಪ್ರಶ್ನೆಯನ್ನು ಕೇಳಿದರೆ ಅವರಿಗೆ ಉತ್ತರ ಕೊಡುವುದು ಅಗತ್ಯ. ಗಾಂಧೀಜಿಯ ವಿಚಾರಗಳನ್ನು ಓದದವರು, ಗಾಂಧೀಜಿಯನ್ನು ಕಂಡರೆ ಆಗದವರು ಈ ಪ್ರಶ್ನೆ ಎತ್ತಿದರೆ ಅಂಥವರ ಬಗೆಗೆ ಉದಾಸೀನ ತೋರುವುದೇ ಒಳಿತು.

ಗಾಂಧೀಜಿಯ ಆಶ್ರಮದಲ್ಲಿ ಬೆಳಗ್ಗೆ ಸಂಜೆ ಪ್ರಾರ್ಥನಾ ಸಭೆಗಳು ನಡೆಯುತ್ತಿದ್ದವು. ಪ್ರಾರ್ಥನೆಯ ಸಮಯದಲ್ಲಿ ವಿನೋಬಾ ರಚಿಸಿದ್ದ ಈ ಮಂತ್ರವನ್ನು ಉಚ್ಚರಿಸಲಾಗುತ್ತಿತ್ತು. ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಸಂಗ್ರಹ, ಶರೀರಶ್ರಮ, ಆಸ್ವಾದ, ಸರ್ವತ್ರ ಭಯವರ್ಜನ, ಸರ್ವಧರ್ಮಿ ಸಮಾನತ್ವ, ಸ್ವದೇಶಿ ಸ್ಪರ್ಶ ಭಾವನಾ, ಹನ್ನೊಂದೀ ವ್ರತ ಕೈಗೊಳ್ವೆ ನಮ್ರ ನಿಶ್ಚಲ ಭಾವದಿ.

ಈ ಹನ್ನೊಂದು ವ್ರತಗಳನ್ನು ಪ್ರತಿಯೊಬ್ಬರೂ ಆಚರಿಸಬೇಕು ಎಂದು ಗಾಂಧೀಜಿ ಹೇಳುತ್ತಿದ್ದರು. ಈ ಏಕಾದಶ ವ್ರತಗಳಲ್ಲಿ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಸಂಗ್ರಹ, ಅಸ್ವಾದಗಳನ್ನು ಸಹಸ್ರಾರು ವರ್ಷಗಳಿಂದ ಬೋಧಿಸುತ್ತಾ ಬರಲಾಗಿದೆ. ವಿನೋಬಾ ಶರೀರಶ್ರಮ, ಸರ್ವತ್ರ ಭಯವರ್ಜನ, ಸ್ವದೇಶಿ, ಸ್ಪರ್ಶಭಾವನಾ, ಸರ್ವಧರ್ಮಿ ಸಮಾನತ್ವ ಎಂಬ ಐದು ವ್ರತಗಳನ್ನು ಋಷಿಮುನಿಗಳು ಸೂಚಿಸಿದ ಆರು ವ್ರತಗಳೊಂದಿಗೆ ಸೇರಿಸಿದ್ದಾರೆ.

ಈ ಶ್ಲೋಕದಲ್ಲಿ ಬರುವ ವ್ರತಗಳ ಪ್ರಸ್ತುತತೆಯ ಬಗೆಗೆ ವಿಚಾರ ಮಾಡುವ ಅಹಿಂಸಾ ಪರಮೋಧರ್ಮಃ ಎಂಬುದನ್ನು ಭಾರತೀಯರು ಹಿಂದಿನಿಂದಲೂ ಮನಗಂಡಿದ್ದಾರೆ. ಅಹಿಂಸೆ, ನಕಾರಾತ್ಮಕ ಪದವಾಗಿ

ಕಂಡು ಬಂದರೂ ಅದರಲ್ಲಿ ಸಕಾರಾತ್ಮಕ ಧ್ಯೇಯ ಅಡಕವಾಗಿದೆ. ಅಹಿಂಸೆ ಹೇಡಿಗಳ ಅಸ್ತ್ರವಲ್ಲ. ಧೀರರ ಅಸ್ತ್ರ. ಅಹಿಂಸಾ ಹೋರಾಟದಲ್ಲಿ ಹಗೆತನಕ್ಕೆ ಸ್ಥಾನವಿಲ್ಲ. ಸತ್ಯಪರಿಪಾಲನೆ ಅಹಿಂಸಕನ ಕರ್ತವ್ಯ ಎನ್ನುತ್ತಾರೆ ಗಾಂಧೀಜಿ.

ಸತ್ಯ ಮತ್ತು ಅಹಿಂಸೆ ಒಂದೇ ನಾಣ್ಯದ ಎರಡು ಮಗ್ಗಲುಗಳು. ಅಹಿಂಸೆ ಎಂದರೆ ಹಿಂಸೆ ಮಾಡದಿರುವುದು ಎಂಬುದಷ್ಟೇ ಅಲ್ಲ, ಕಾಯಾ ವಾಚಾ ಮನಸಾ ಅಹಿಂಸಕನಾಗಿರುವುದು. ಗಾಂಧೀಜಿ ಮೊದಲು ದೇವರೇ ಸತ್ಯ ಎನ್ನುತ್ತಿದ್ದವರು ಮುಂದೆ ಸತ್ಯವೇ ದೇವರು ಎಂಬ ನಿರ್ಣಯಕ್ಕೆ ಬಂದರು. ಅಸ್ತೇಯ ಎಂದರೆ ಕದಿಯದಿರುವುದು. ದುಡಿಮೆ ಮಾಡದೆ ತಿನ್ನುವುದೂ ಕಳ್ಳತನ ಎನ್ನುತ್ತದೆ ಈಶಾವಾಸ್ಯ ಉಪನಿಷತ್ತು. ದುಡಿಯದೆ ತಿನ್ನುವವನನ್ನು ಉಪನಿಷತ್ಕಾರರು, ಹದ್ದಿಗೆ ಹೋಲಿಸಿದ್ದಾರೆ. ಮಗುವಿನ ಅಂಗೈಯಲ್ಲಿ ಬೆಣ್ಣೆ ಇಟ್ಟಿದ್ದಾಳೆ ತಾಯಿ. ಮಗು ಅದನ್ನು ತಿನ್ನುತ್ತಾ ಅಂಗಳಕ್ಕೆ ಹೋಗಿದೆ. ಆಕಾಶದಲ್ಲಿ ಹಾರಾಡುತ್ತಿದ್ದ ಹದ್ದು, ಸರ್ರನೆ ಬಂದು ಮಗುವಿನ ಕೈಯಲ್ಲಿದ್ದ ಬೆಣ್ಣೆಯನ್ನು ತೆಗೆದುಕೊಂಡು ಹಾರಿಹೋಗಿದೆ. ಬೆಣ್ಣೆಯನ್ನು ಅಪಹರಿಸುವ ಸಂಭ್ರಮದಲ್ಲಿ ಹದ್ದು ಮಗುವಿನ ಅಂಗೈಯನ್ನು ತನ್ನ ಹರಿತವಾದ ಉಗುರುಗಳಿಂದ ಬಗೆದು ಹೋಗಿದೆ. ಮಗುವಿನ ಅಂಗೈನಿಂದ ರಕ್ತ ಸುರಿದು ಹೋಗುತ್ತಿದೆ. ಮಗು ನೋವಿನಿಂದ ಅಳಲು ಆರಂಭ ಮಾಡುತ್ತದೆ. ಪರರ ದುಡಿಮೆಯ ಲಾಭವನ್ನು ದೋಚುವವನು ಕಳ್ಳ ಎನ್ನುತ್ತದೆ ಉಪನಿಷತ್ತು.

ಸಂಗ್ರಹಬುದ್ದಿ ಕೂಡಾ ಕೂಡದು. ಈ ಸಂಗ್ರಹ ಬುದ್ಧಿಯ ಫಲವಾಗಿಯೇ ಈಗ ಭ್ರಷ್ಟಾಚಾರ ಹೆಚ್ಚಿರುವುದು. ಸಂಗ್ರಹ ಬುದ್ಧಿಯನ್ನು ಸಮಾಜದ ಕೆಲವರು ಬೆಳೆಸಿಕೊಂಡರೆ ಅದು ಬಡವ ಬಲ್ಲಿದರ ಸಮಾಜವನ್ನು ಸೃಷ್ಟಿಮಾಡುತ್ತದೆ. ಆರ್ಥಿಕ ಅಸಮಾನತೆಗೆ ಅದು ದಾರಿ ಮಾಡುತ್ತದೆ. ಆಸೆ ಇರಬೇಕಾದ್ದೆ. ದುರಾಸೆ ಇರಬಾರದು. ದುರಾಸೆ ಬಡತನಕ್ಕೇ ಶೋಷಣೆಗೆ, ಅಸಮಾನತೆಗೆ ಸಮಾಜವನ್ನು

ಕೊಂಡೊಯ್ಯುತ್ತದೆ. **Nature can satisfy ones need but not ones greed** ಎನ್ನುತ್ತಾರೆ ಗಾಂಧೀಜಿ.

ಬ್ರಹ್ಮಚರ್ಯದ ಮಹತ್ವವನ್ನೇ ನಮ್ಮ ಯುವಕರಿಗೆ ಈಗ ನಾವು ತಿಳಿಸಿಕೊಡುತ್ತಿಲ್ಲ. ಲೈಂಗಿಕ ಶಿಕ್ಷಣವನ್ನು ಶಾಲೆಗಳಲ್ಲಿ ಹೇಳಿಕೊಡಲು ಈಗ ಸಿದ್ಧತೆಗಳಾಗುತ್ತಿದೆ. ಲೈಂಗಿಕ ಶಿಕ್ಷಣಕ್ಕೆ ಹಣ ಒದಗಿಸುತ್ತಿರುವವರು **Condomes** ತಯಾರಿಕಾ ಸಂಸ್ಥೆಯವರು–ಹೈಸ್ಕೂಲ್ ಹುಡುಗರಿಗೆ ಲೈಂಗಿಕ ಶಿಕ್ಷಣದ ಒಂದು ಪುಸ್ತಕ ರಚನೆಯಾಗಿದೆ. ಅದರಲ್ಲಿ **Condomes** ಹಾಕಿಕೊಂಡು ಲೈಂಗಿಕ ಕ್ರಿಯೆ ಮಾಡಿ ಎಂದು ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಸಲಹೆ ಮಾಡಲಾಗಿದೆ. ಬ್ರಹ್ಮಚರ್ಯದ ಬಗೆಗೆ ಚಕಾರ ಎತ್ತಿಲ್ಲ ಈ ಲೈಂಗಿಕ ಶಿಕ್ಷಣದ ಪುಸ್ತಕದಲ್ಲಿ!

ಬ್ರಹ್ಮಚರ್ಯವನ್ನು ಎಲ್ಲರೂ ಆಚರಿಸಬೇಕು. ಬ್ರಹ್ಮಚರ್ಯ ಎಂದರೆ ಪಂಚೇಂದ್ರಿಯಗಳ ಮೇಲೆ ಹತೋಟಿ ಸಾಧಿಸುವುದು. ಅವುಗಳನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳುವುದು. ಭಗವದ್ಗೀತೆಯಲ್ಲಿ ಪಂಚೇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಹೇಗೆ ಎಂದು ತಿಳಿಸುವಾಗ ಆಮೆಯ ಉದಾಹರಣೆಯನ್ನು ಕೊಡಲಾಗಿದೆ. ಆಮೆಯ ಹೊರಮೈ ಒಂದು ಬಲಿಷ್ಠವಾದ ಚಿಪ್ಪಿನಿಂದ ಮಾಡಲ್ಪಟ್ಟಿವೆ. ಈ ಚಿಪ್ಪಿನಲ್ಲಿ ಆಮೆಯ ದೇಹ ಇರುತ್ತದೆ. ಅದು ಸಮುದ್ರದಲ್ಲಿ ಆಹಾರಕ್ಕಾಗಿ ತನ್ನ ಒಳಮೈಯನ್ನು ಹೊರಹಾಕಿ ಈಜುತ್ತದೆ. ಅಕಸ್ಮಾತ್ ಯಾವುದಾದರೂ ಶತ್ರು ಎದುರಾದಾಗ ಕೂಡಲೇ ಆಮೆ ತನ್ನ ದೇಹವನ್ನು ಚಿಪ್ಪಿನೊಳಕ್ಕೆ ಎಳೆದುಕೊಂಡುಬಿಡುತ್ತದೆ. ಹೊರಚಿಪ್ಪಿಗೆ ಸುತ್ತಿಗೆ ತೆಗೆದುಕೊಂಡು ಹೊಡೆದರೂ ಅದು ಬಿರುಕು ಬಿಡುವುದಿಲ್ಲ. ಆ ಚಿಪ್ಪು ಅಷ್ಟು ಗಟ್ಟಿಯಾಗಿರುತ್ತದೆ.

ಗೀತೆ ಹೇಳುತ್ತದೆ "ಶತ್ರು ಕಾಣಿಸಿಕೊಂಡ ಒಡನೆ ಹೇಗೆ ಆಮೆ ತನ್ನ ದೇಹವನ್ನು ಚಿಪ್ಪಿನೊಳಕ್ಕೆ ಎಳೆದುಕೊಂಡುಬಿಡುತ್ತದೆಯೋ ಹಾಗೆ, ಅರಿಷಡ್ವರ್ಗಗಳು ಕಾಡಿದಾಗ ನಾವು ಪಂಚೇಂದ್ರಿಯಗಳ

ಮೇಲೆ ಹತೋಟಿಯನ್ನು ಇಟ್ಟುಕೊಳ್ಳುವ ಕಸರತ್ತು ಮಾಡಬೇಕು. ಇದನ್ನೇ ಬ್ರಹ್ಮಚರ್ಯ ಎನ್ನುವುದು. ಪಂಚೇಂದ್ರಿಯಗಳ ಮೇಲೆ ಹತೋಟಿ ಬೆಳೆಸಿಕೊಳ್ಳುವ ವಿಚಾರವನ್ನು ವಿದ್ಯಾರ್ಥಿಗಳಿಗೆ ಈಗ ಹೇಳಿಕೊಡುತ್ತಲೇ ಇಲ್ಲ. ಆದ್ದರಿಂದಲೇ ಯುವಕ ಯುವತಿಯರಲ್ಲಿ ಸ್ವಚ್ಛಂದತೆ ಬೆಳೆಯುತ್ತಿರುವುದು."

ಅಸ್ವಾದ ಎಂದರೆ ನಾಲಿಗೆಗೆ ದಾಸನಾಗದಿರುವುದು, ಹಿಟ್ಟು ತಿಂದರೆ ನಾಲಗೆ 'ಅಯ್ಯೋ ನಿನಗೇನು ಬಂತು ಕೇಡು' ಎಂದು ಹೀಯಾಳಿಸುತ್ತದೆ. ಚಿರೋಟಿ ತಿಂದರೆ ನಾಲಗೆ ಖುಷಿಪಡುತ್ತದೆ. ಪದಾರ್ಥದ ರುಚಿಯನ್ನು ಕಂಡುಹಿಡಿಯುವುದು ನಾಲಗೆಯ ಕೆಲಸ, ಹಸಿದಿರುವಾಗ ಹೊಟ್ಟೆಗೆ ಉರುವಲು ಬೇಕು. ಅದು ಹಿಟ್ಟೇ ಆಗಿರಬಹುದು, ಜಿಲೇಬಿ ಆಗಿರಬಹುದು. ಹೊಟ್ಟೆ ಅದನ್ನು ಸ್ವಾಗತಿಸುತ್ತದೆ. ಹೊಟ್ಟೆ ತುಂಬಿದ ಮೇಲೆ ಅದಕ್ಕೆ ಹಿಟ್ಟೂ ಬೇಡ. ಮೃಷ್ಟಾನ್ನ ಕೊಟ್ಟರೂ ಬೇಡ. ಹಿಟ್ಟು ಮತ್ತು ಜಿಲೇಬಿಗೆ ವ್ಯತ್ಯಾಸ ಕಂಡುಹಿಡಿಯುವುದು ಈ ನಾಲಿಗೆ. ಹೊಟ್ಟೆಗೆ ಈ ತಾರತಮ್ಯವಿಲ್ಲ: ಅಧಿಕ ಪ್ರಸಂಗಿತನ ಮಾಡುವುದು ನಮ್ಮ ನಾಲಿಗೆ. ಆದ್ದರಿಂದ ನಾಲಿಗೆಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬೇಕು. ನಾಲಿಗೆಯನ್ನು ಹತೋಟಿಯಲ್ಲಿಟ್ಟುಕೊಳ್ಳುವ ಕ್ರಿಯೆಯೇ ಅಸ್ವಾದ.

ಈ ಆರು ವ್ರತಗಳನ್ನು ಪಾಲಿಸುವುದು ಎಲ್ಲರ ಕರ್ತವ್ಯ. ಇವು ಖಂಡಿತ **irrelevent** ಅಲ್ಲ. ಇದನ್ನೆ ಗಾಂಧೀಜಿ ಕೂಡ ಪ್ರತಿಪಾದಿಸುವುದು.

ವಿನೋಬಾ ಭಾವೆ ಅವರು ಈ ಆರು ವ್ರತಗಳ ಜೊತೆಗೆ ತಮ್ಮದೇ ಆದ 5 ವ್ರತಗಳನ್ನು ಜೋಡಿಸಿದ್ದಾರೆ. ಅವುಗಳ ಪ್ರಸ್ತುತತೆ ಬಗೆಗೆ ವಿಚಾರಮಾಡುವ. ಶರೀರ ಶ್ರಮವನ್ನು ಪ್ರತಿಯೊಬ್ಬರೂ ಮಾಡಬೇಕು. ಶರೀರ ಶ್ರಮ ಮಾಡದೆ ತಿನ್ನುವುದು ಕಳ್ಳತನದಿಂದ ಹೊಟ್ಟೆ ಹೊರೆದಂತೆ ಎಂಬುದನ್ನು ಈಗಾಗಲೇ ಹೇಳಿಯಾಗಿದೆ. ಸಮಾಜದಲ್ಲಿ ಶರೀರ

ಶ್ರಮ ಮಾಡುವವರನ್ನು ಹೀನಾಯವಾಗಿ ಕಾಣಲಾಗುತ್ತದೆ. ಶರೀರ ಶ್ರಮ ಮಾಡುವವನು ಪಾಪಿ, ಪೂರ್ವಜನ್ಮದಲ್ಲಿ ಪಾಪ ಮಾಡಿದವನು ಎಂಬ ಭಾವನೆ ಸಮಾಜದಲ್ಲಿದೆ. ಬೆವರು ಸುರಿಸಿ ಕೆಲಸ ಮಾಡುವವನನ್ನು ನಿಕೃಷ್ಟವಾಗಿ ಕಾಣುತ್ತದೆ ಸಮಾಜ. ಕೆಲವರು ಕೆಲಸ ಮಾಡಲೇ ಹುಟ್ಟಿದ್ದಾರೆ, ಇನ್ನೂ ಕೆಲವರು ತಿನ್ನಲೇ ಹುಟ್ಟಿದ್ದಾರೆ ಎಂದಾದರೆ, ಸೃಷ್ಟಿಕರ್ತ ಬಡವನಿಗೆ ಕೈ ಕಾಲು ಮಾತ್ರ ಕೊಡಬೇಕಾಗಿತ್ತು. ತಿನ್ನಲೇ ಹುಟ್ಟಿದವನಿಗೆ ಹೊಟ್ಟೆ ಮಾತ್ರ ನೀಡಬೇಕಾಗಿತ್ತು. ಮನುಷ್ಯನಿಗೆ ಕೈಕಾಲು ಮತ್ತು ಹೊಟ್ಟೆ ಕೊಟ್ಟಿರುವುದರ ಉದ್ದೇಶ ಕೈಕಾಲುಗಳಿಂದ ಕೆಲಸ ಮಾಡು, ಆ ಮೂಲಕ ಹೊಟ್ಟೆಗೆ ಸಂಪಾದಿಸಿಕೋ ಎಂದೇ. ಕಾಟಾಚಾರದ ಶ್ರಮ ಮಾಡುವುದು ಸಮಾಜ ದ್ರೋಹದ ಕೆಲಸ. ಆದ್ದರಿಂದ ಎಲ್ಲರೂ ಶ್ರಮ ನಿಷ್ಠೆ ಬೆಳೆಸಿಕೊಳ್ಳಬೇಕು.

ಸರ್ವತ್ರ ಭಯವರ್ಜನ ಎಂದರೆ ಧೈರ್ಯದಿಂದ ಮುನ್ನುಗ್ಗಬೇಕು ಎಂದು ಅರ್ಥ. ಭಾರತದ ಬಿಡುಗಡೆಗಾಗಿ ಅಹಿಂಸಾತ್ಮಕ ಹೋರಾಟವನ್ನು ಹೂಡಿದ ಗಾಂಧೀಜಿ ಸತ್ಯಾಗ್ರಹಿಗೆ ಮೃತ್ಯುಭಯ ಇರಬಾರದು. ದೇಹ ಅಸ್ಥಿರ, ಆತ್ಮ ನಿತ್ಯ. ಆದ್ದರಿಂದ ಇಂದಿದ್ದು ನಾಳೆ ಬಿದ್ದುಹೋಗುವ ಈ ದೇಹವನ್ನು ಇಂದೇ ದೇಶದ ಸ್ವಾತಂತ್ರ್ಯ ಪಡೆಯಲು ಧೈರ್ಯವಾಗಿ ಪಣವಾಗಿಡೋಣ ಎಂದರು. ಜನ ಅಭೂತಪೂರ್ವಕವಾಗಿ ಸ್ಪಂದಿಸಿದರು.

ಅನ್ಯಾಯದ ವಿರುದ್ಧ ಹೋರಾಡುವುದು ನಮ್ಮ ಹಕ್ಕು. ದುರಾಡಳಿತದ ವಿರುದ್ಧ, ಭ್ರಷ್ಟಾಚಾರದ ವಿರುದ್ಧ ಹೋರಾಡುವುದು ನಮ್ಮ ಕರ್ತವ್ಯ. ಹೀಗೆ ಹೋರಾಡಲು ಮನೋಸ್ಥೈರ್ಯ ಬೇಕು. ಈ ಮನೋಸ್ಥೈರ್ಯ ಪಡೆಯಲು ಭಯವನ್ನು ಮನಸ್ಸಿನಿಂದ ಕಿತ್ತು ಹಾಕಬೇಕು. ಅಂಜುಪುರುಕನಾದವನು ಘಳಿಗೆ ಘಳಿಗೆಗೂ ಸಾಯುತ್ತಾನೆ. ಮನಸ್ಥೈರ್ಯವುಳ್ಳ ಧೀರ ಒಮ್ಮೆ ಮಾತ್ರ ಸಾಯುತ್ತಾನೆ ಎಂದರು ಗಾಂಧೀಜಿ. ಇದು ಒಪ್ಪತಕ್ಕ ಮಾತೇ ಅಲ್ಲವೇ?

ಸರ್ವ ಧರ್ಮೀ ಸಮಾನತ್ವ ಗಾಂಧೀಜಿ ಪ್ರಚಾರ ಮಾಡಿದ ಇನ್ನೊಂದು ವ್ರತ, ಹಿಂದೂ ಧರ್ಮ, ಬೌದ್ಧಧರ್ಮ, ಜೈನಧರ್ಮ, ಬಸವಧರ್ಮ ಇವು ಭಾರತದಲ್ಲಿಯೇ ಹುಟ್ಟಿಕೊಂಡ ಧರ್ಮಗಳು, ಇವಲ್ಲದೆ ಭಾರತಕ್ಕೆ ಕ್ರಿಶ್ಚಿಯನ್ ಧರ್ಮ, ಪಾರ್ಸಿ ಧರ್ಮ, ಇಸ್ಲಾಂ ಧರ್ಮ ಇವು ಇತರ ದೇಶಗಳಿಂದ ಬಂದವು. ಒಂದು ಧರ್ಮದಲ್ಲಿ ಕೊರತೆ ಉಂಟಾದಾಗ ಅದನ್ನು ಸುಧಾರಿಸಲು ಮತ್ತೊಂದು ಧರ್ಮ ಹುಟ್ಟಿಕೊಳ್ಳುತ್ತದೆ. ಹಾಗೆ ನೋಡಿದರೆ ಯಾವ ಧರ್ಮವೂ ಪರಿಪೂರ್ಣವಲ್ಲ ಎನ್ನುತ್ತಾರೆ ಅರವಿಂದೋ.

ಗಾಂಧೀಜಿ ದೃಷ್ಟಿಯಲ್ಲಿ ಎಲ್ಲ ಧರ್ಮಗಳೂ ಸಮಾನ. ಅವುಗಳನ್ನು ಸಮಚಿತ್ತದಿಂದ ನೋಡಬೇಕು. ಸಮಾನತೆಯಿಂದ ನೋಡಬೇಕು. ಹಿಂದುಗಳು ಬಹುಸಂಖ್ಯೆಯಲ್ಲಿರುವುದರಿಂದ ಅವರಿಗೆ ವಿಶೇಷವಾದ ಹಕ್ಕುಗಳಿಲ್ಲ. ಅನ್ಯಧರ್ಮಗಳವರು ಅಲ್ಪಸಂಖ್ಯಾತರಾದ್ದರಿಂದ ಅವರನ್ನು ಎರಡನೆ ದರ್ಜೆಯ ಪ್ರಜೆಗಳನ್ನಾಗಿ ಕಾಣುವಂತಿಲ್ಲ. ಅದರಂತೆಯೇ ಅಲ್ಪಸಂಖ್ಯಾತರು ಎಂಬ ಕಾರಣಕ್ಕಾಗಿ ಅನ್ಯಧರ್ಮಗಳಿಗೆ ವಿಶೇಷ ಹಕ್ಕುಗಳು, ಕಾಯ್ದಿಟ್ಟ ಹಕ್ಕುಗಳು ಇಲ್ಲ. ನಮ್ಮದು ಅನ್ಯಧರ್ಮೀಯರನ್ನು ದ್ವೇಷಿಸುವ ಧ್ಯೇಯದಿಂದ ಕೂಡಿದ ರಾಜ್ಯಾಂಗವಲ್ಲ. ಸರ್ವಸಮಾನತೆಯ ಆಧಾರದ ಮೇಲೆ ರೂಪಿಸಲ್ಪಟ್ಟಿದ್ದು. ರಾಜಕೀಯಕ್ಕೆ ಧರ್ಮವನ್ನು ಬೆರೆಸಬಾರದು. ಮಸೀದಿ, ಮಠ, ಮಂದಿರ, ಚರ್ಚುಗಳನ್ನು ಸರ್ಕಾರ ಸಮಾನಾಂತರದಲ್ಲಿಡಬೇಕು. ಅವರನ್ನು ಹತ್ತಿರ ಬಿಟ್ಟುಕೊಳ್ಳಬಾರದು. ಸರ್ಕಾರ ನಡೆಸುವವರು ಎಲ್ಲ ಧರ್ಮದವರನ್ನೂ ಸಮಾನಾಂತರದಲ್ಲಿಡಬೇಕು. ಯಾವ ಧರ್ಮದವರನ್ನೂ, ಯಾವ ಮಠಾಧೀಶರನ್ನೂ ರಾಜಕೀಯಕ್ಕೆ ಬಳಸಿಕೊಳ್ಳಬಾರದು.

ಸ್ವದೇಶಿಯನ್ನು ಒಂದು ವ್ರತವಾಗಿ ದೇಶ ಸ್ವೀಕರಿಸಬೇಕು. ಇದು ಇಂದು ಪ್ರಸ್ತುತವೇ ಅಲ್ಲವೇ ವಿಚಾರ ಮಾಡೋಣ. 1935ರಲ್ಲಿ ಗಾಂಧೀಜಿ ಬ್ರಿಟಿಷರ ವಿರುದ್ಧ ಸ್ವದೇಶಿ ಚಳುವಳಿ ಆರಂಭಿಸಿದರು. ಆಗ

ಈಸ್ಟ್ ಇಂಡಿಯಾ ಕಂಪೆನಿಯೊಂದೇ ಭಾರತದಲ್ಲಿದ್ದದ್ದು. ಈ ಕಂಪೆನಿ ಭಾರತದಿಂದ ಅರಳೆಯನ್ನು ಬ್ರಿಟನ್ನಿಗೆ ಸಾಗಿಸಿ ಅಲ್ಲಿನ ಮಿಲ್‌ಗಳಲ್ಲಿ ತಯಾರಾದ ಬಟ್ಟೆಯನ್ನು ಹಡಗಿನಲ್ಲಿ ತುಂಬಿಕೊಂಡು ಬಂದು ಭಾರತದಲ್ಲಿ ಮಾರಾಟ ಮಾಡುತ್ತಿತ್ತು. ಇದನ್ನು ಕಂಡ ಗಾಂಧೀಜಿ 'ಇಂದು ಬ್ರಿಟನ್ ನಮ್ಮ ದೇಶದಿಂದ ಅರಳೆ ತೆಗೆದುಕೊಂಡು ಹೋಗಿ, ಅದರಿಂದ ಬಟ್ಟೆ ತಯಾರ್ಮಾಡಿ ಭಾರತಕ್ಕೆ ತಂದು ಮಾರುತ್ತಿದೆ. ಇವರನ್ನು ಹೀಗೆಯೇ ಬಿಟ್ಟರೆ ಮುಂದೆ ಒಂದು ದಿನ ಇವರು ಯಂತ್ರ ಸಮೇತ ಭಾರತಕ್ಕೆ ಬರುತ್ತಾರೆ. ಇವರನ್ನು ಕೂಡಲೇ ತಡೆಹಿಡಿಯಬೇಕು. ಆದ್ದರಿಂದ ಸ್ವದೇಶಿ ವ್ರತವನ್ನು ಜನ ತೊಡಬೇಕು. ಪರದೇಶದಿಂದ ಬರುವ ಬಟ್ಟೆ, ಸಕ್ಕರೆ, ಸಿಗರೇಟು, ಮದ್ಯ ಎಲ್ಲವನ್ನು ಬಹಿಷ್ಕರಿಸಬೇಕು, ಮಿಲ್ ಬಟ್ಟೆ ಸುಡಬೇಕು ಎಂದು ಹೇಳಿ ಸ್ವದೇಶಿ ಚಳುವಳಿ ಆರಂಭಿಸಿದರು. ಇದರ ಪರಿಣಾಮವಾಗಿ ಭಾರತದಲ್ಲಿ ಮಿಲ್ ಬಟ್ಟೆ ತೊಡುವ ಜನರ ಸಂಖ್ಯೆ ಕಡಿಮೆಯಾಯಿತು. ಬ್ರಿಟನ್ನಿನ 1500 ಬಟ್ಟೆ ಮಿಲ್ ಕಾರ್ಮಿಕರು ಕೆಲಸ ಕಳೆದುಕೊಂಡರು.

ಸ್ವಾತಂತ್ರ್ಯ ಬಂದ ಮೇಲೆ ಈಗ ಪರದೇಶಿ ವಸ್ತುಗಳ ವ್ಯಾಮೋಹ ಭಾರತೀಯರಲ್ಲಿ ಹೆಚ್ಚುತ್ತಿದೆ. ನೀವು ನಿತ್ಯ ವ್ಯವಹಾರದಲ್ಲಿ ಎಷ್ಟು ಪರದೇಶಿ ವಸ್ತುಗಳನ್ನು ಬಳಸುತ್ತಿದ್ದೀರಿ ಎಂಬುದನ್ನು ಪರೀಕ್ಷಿಸಿಕೊಳ್ಳಿ. ಬೆಳಗ್ಗೆ ಹಲ್ಲುಜ್ಜುವುದಕ್ಕೆ ಕೋಲ್‌ಗೇಟ್, ಪೆಪ್ಸಿಡೆಂಟ್ ಪೇಸ್ಟು ಮತ್ತು ಬ್ರಷ್ಷು. ಮುಖ ತೊಳೆಯುವುದಕ್ಕೆ ಲಕ್ಸ್ ಸಾಬೂನು, ಬಟ್ಟೆ ಒಗೆಯುವುದಕ್ಕೆ ರಿಮ್, ಸನ್‌ಲೈಟ್, ಹಾಕಿಕೊಳ್ಳುವ ಬಟ್ಟೆ ನೈಲಾನ್‌ನಿಂದ ಸಿದ್ಧಪಡಿಸಿದ ಬಟ್ಟೆ, ಅದಿಡಾಸ್ ತಯಾರಿಸಿದ ಬಟ್ಟೆ, ನೀವು ನಿತ್ಯ ಬಳಸುವ ಪಾದರಕ್ಷೆ ಬಾಟಾ ಕಂಪೆನಿಯದು. ಲಿಪ್‌ಸ್ಟಿಕ್, ಕಣ್ಣುಕಪ್ಪು, ಬ್ಯಾಟರಿ ತಯಾರಿಸುತ್ತಿದ್ದ ಎಲ್ಲ ಪರದೇಶಿ ಕಂಪನಿಗಳು.

ವಜ್ರದಂತಿ, ಹಮಾಮ್‌ಸೋಪು, ಮೈಸೂರು ಗಂಧದ ಸೋಪು, ಮೈಸೂರು ಬಟ್ಟೆ ಸೋಪು, ಖಾದಿಬಟ್ಟೆ ಎಲ್ಲ ಇರುವಾಗ ವಿದೇಶಿ ಕಂಪನಿಗಳ ಮಾಲುಗಳನ್ನು ಕೊಂಡು ಅವರು ಹಣದೋಚಿಕೊಂಡು

ಹೋಗಲು ಅವಕಾಶ ಮಾಡಿಕೊಡುವುದು ಎಷ್ಟು ಸರಿ? ಭಾರತೀಯರು, ಅದರಲ್ಲೂ ಗೃಹೋದ್ಯೋಗ, ಗ್ರಾಮೋದ್ಯೋಗದಲ್ಲಿ ನಿರತರಾಗಿರುವ ಭಾರತೀಯರು ತಯಾರಿಸುವ ಪದಾರ್ಥಗಳನ್ನು ಕೊಳ್ಳದೇ ಪರದೇಶದ ಮತ್ತು ಭಾರತದ ಬಂಡವಾಳಗಾರರು ತಯಾರಿಸುವ ವಸ್ತುಗಳನ್ನು ಕೊಂಡು ಪ್ರೋತ್ಸಾಹಿಸುವುದು ಸರಿಯೇ? ನಮ್ಮವರನ್ನು ಉಪವಾಸ ಕೆಡವಿ ಪರದೇಶಿಯರ ಸರಕನ್ನು ಕೊಳ್ಳುವುದು ದೇಶ ದ್ರೋಹವಲ್ಲವೇ?

ಕಾರ್ಖಾನೆಗಳಲ್ಲಿ ಅಗಾಧ ಪ್ರಮಾಣದ ವಸ್ತುಗಳು ತಯಾರಾಗುತ್ತದೆ. ಅದರ ಲಾಭವೆಲ್ಲ ಬಂಡವಾಳಗಾರರದಾಗುತ್ತದೆ. ಗ್ರಾಮೀಣ ಕೈಗಾರಿಕೆಯಿಂದ ತಯಾರಾಗುವ ಪದಾರ್ಥಗಳನ್ನು, ಗ್ರಾಮೀಣ ಜನರು ತಯಾರುಮಾಡುತ್ತಾರೆ. ನಾವು ಅಗಾಧ ಪ್ರಮಾಣದಲ್ಲಿ ಸರಕುಗಳನ್ನು ತಯಾರಿಸುವ ಕಾರ್ಖಾನೆಗಳಿಗೆ ಪ್ರೋತ್ಸಾಹ ನೀಡಬೇಕೇ, ಇಲ್ಲವೇ ಜನಸಾಮಾನ್ಯರಿಂದ ತಯಾರಿಸಲ್ಪಟ್ಟ ಪದಾರ್ಥಗಳಿಗೆ ಪ್ರೋತ್ಸಾಹನೀಡಬೇಕೇ ಎಂಬುದನ್ನು ಕುರಿತು ಚಿಂತನೆ ಮಾಡಬೇಕು. ಕಾರ್ಖಾನೆಗಳಲ್ಲಿ ತಯಾರಾದ ಪದಾರ್ಥಗಳಿಂದ ದೊರೆಯುವ ಲಾಭದ ಬಹುಪಾಲು ಬಂಡವಾಳ ಹಾಕಿದವನಿಗೆ ಹೋದರೆ, ಜನಸಾಮಾನ್ಯರು ತಯಾರಿಸುವ ವಸ್ತುವಿನ ಲಾಭಾಂಶದ ಬಹುಭಾಗ ದುಡಿಯುವ ಜನರ ಪಾಲಾಗುತ್ತದೆ. ಅದಕ್ಕಾಗಿಯೇ ನಾವು ಸ್ವದೇಶಿ, ಸ್ವಾವಲಂಬನೆ, ಸ್ವಾಭಿಮಾನಕ್ಕೆ ಮನ್ನಣೆ ನೀಡಬೇಕು. ಆರ್ಥಿಕ ತಜ್ಞರೂ ಕೂಡ, ಬಂಡವಾಳಶಾಹಿಗಳಿಗೇ ಬೆಂಬಲ ನೀಡುತ್ತಿದ್ದು ಗೃಹೋದ್ಯೋಗ, ಗ್ರಾಮೋದ್ಯೋಗಕ್ಕೆ ಬಾಯಿಮಾತಿನ ಅನುಕಂಪ ತೋರಿಸುತ್ತಿರುವುದು ಆಶ್ಚರ್ಯವೆನಿಸುತ್ತದೆ.

ಗಾಂಧಿ ಅವರ ಇನ್ನೊಂದು ವ್ರತ ಅಸ್ಪೃಶ್ಯತೆಯ ನಿವಾರಣೆ. ಸ್ಪರ್ಶಾಸ್ಪರ್ಶ ಭಾವನೆಯನ್ನು ತೊಡೆದುಹಾಕುವುದು. ನಮ್ಮ ಶ್ರೇಣೀಕೃತ ಜಾತಿಪದ್ಧತಿಯಲ್ಲಿ ಸಮಾಜದಲ್ಲಿ ಹರಿಜನರಿಗೆ ಕೊನೆಯ ಸ್ಥಾನವನ್ನು ನೀಡಲಾಗಿದೆ. ಇದು ಸಾಮಾಜಿಕ ಅಪರಾಧ. ಈಗಲೂ ಕೂಡ ಹರಿಜನರು ಊರ ಹೊರಗೆ ವಾಸಮಾಡುತ್ತಾರೆ. ಹಿಂದು

ದೇವಾಲಯಗಳಿಗೆ ಅವರಿಗೆ ಪ್ರವೇಶವಿಲ್ಲ. ಸವರ್ಣೀಯರ ಬಾವಿಗಳಲ್ಲಿ ನೀರು ಸೇದುವಂತಿಲ್ಲ. ಹರಿಜನ ಹೆಣ್ಣುಮಕ್ಕಳ ಸ್ಥಿತಿಯಂತೂ ಇನ್ನೂ ಅಧ್ವಾನ. ಹೀಗೆ ಹಲವು ರೀತಿಯಲ್ಲಿ ಹರಿಜನರನ್ನು ತಾರತಮ್ಯಕ್ಕೆ ಒಳಪಡಿಸಿದ್ದೇವೆ. ಇದರ ವಿರುದ್ಧವಾಗಿ ಗಾಂಧೀಜಿ ಹೋರಾಟಗಳನ್ನು ನಡೆಸಿದರು. ಸವರ್ಣೀಯರು ತಾವು ಹರಿಜನರಿಗೆ ಎಸಗಿರುವ ಅಪರಾಧಗಳಿಗಾಗಿ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು. ಸ್ವಾತಂತ್ರ್ಯ ಬಂದ ಮೇಲೆ ಅಸ್ಪೃಶ್ಯತೆ ಆಚರಣೆ ಮಾಡುವುದು ಅಪರಾಧ ಎಂದು ಕಾಯಿದೆ ಮಾಡಲಾಗಿದೆ. ದೇವಾಲಯಗಳಿಗೆ ಪ್ರವೇಶದ ಹಕ್ಕನ್ನು ಕಾನೂನು ಮುಖಾಂತರ ಒದಗಿಸಲಾಗಿದೆ.

ಇಷ್ಟೆಲ್ಲಾ ಕಾನೂನುಗಳಿದ್ದರೂ ಸವರ್ಣರ ಮನಸ್ಸುಗಳು ಪೂರ್ಣವಾಗಿ ಬದಲಾಗಿಲ್ಲ. ಕಾನೂನಿನ ಭಯಕ್ಕೆ ಹರಿಜನರ ಮೇಲಿನ ದೌರ್ಜನ್ಯಗಳನ್ನು ಮಾಡುತ್ತಿಲ್ಲವಾದರೂ ಸವರ್ಣೀಯರ ಮನಸ್ಸುಗಳು ಇನ್ನೂ ಪರಿವರ್ತನೆ ಆಗಿಲ್ಲ. ಹಿಂದಿನ ತಲೆಮಾರಿನ ಜನರಲ್ಲಿ ಬಹುತೇಕ ಮಂದಿಯ ಹೃದಯ ಪರಿವರ್ತನೆ ಆಗಿಲ್ಲ. ಅಸ್ಪೃಶ್ಯತೆಯನ್ನು ತೊಡೆದುಹಾಕಲು ಯುವಪೀಳಿಗೆ ಮುಂದಾಳುತನ ವಹಿಸಬೇಕು. ಸಂಕುಚಿತ ಭಾವನೆ, ಮತ ಮೌಢ್ಯಗಳನ್ನು ಕೈಬಿಡಬೇಕು. ಭಾರತೀಯರಾದ ನಾವೆಲ್ಲ, ಹರಿಜನ ಗಿರಿಜನರನ್ನು ಒಳಗೊಂಡಂತೆ ಎಲ್ಲರೂ ಮಾನವರು ಎಂಬುದನ್ನು ಕಂಡುಕೊಳ್ಳಬೇಕು. ವಿಶ್ವಭ್ರಾತೃತ್ವದ ಮಾತನ್ನಾಡುವ ನಾವು ಹರಿಜನ ಸಮುದಾಯವನ್ನೇ ನಮ್ಮ ಸೋದರರಂತೆ ಪರಿಗಣಿಸದಿರುವುದು ಎಂತಹ ಪ್ರಮಾದ?

ಗಾಂಧೀಜಿ ಪ್ರತಿಪಾದಿಸಿದ ಏಕಾದಶ ವ್ರತಗಳು ಇಂದಿಗೂ ಎಷ್ಟು ಪ್ರಸ್ತುತ ಎಂಬುದನ್ನು ನಾವು ಮನಗಾಣಬೇಕು. ಆ ಮೂಲಕ ಗಾಂಧೀಜಿಯ ಪ್ರಸ್ತುತತೆಯನ್ನೂ ಅರ್ಥಮಾಡಿಕೊಳ್ಳಲು ಮುಂದಾಗಬೇಕು. ಗಾಂಧೀಜಿಯ ಸಮಗ್ರ ಸಾಹಿತ್ಯವನ್ನು ಅಧ್ಯಯನ ಮಾಡದೆ ಅವರನ್ನು ಅಪ್ರಸ್ತುತ ಎಂದು ಅಲ್ಲಗಳೆಯುವುದು ತಮ್ಮ ಅಜ್ಞಾನವನ್ನು ಪ್ರಕಟಿಸಿದಂತಾಗುವುದಲ್ಲವೇ?

ಅಣುಬಾಂಬ್ ರಹಿತ ವಿಶ್ವ

ಎರಡನೆ ಮಹಾಯುದ್ಧ ಪರಾಕಾಷ್ಠತೆ ಮುಟ್ಟಿದಾಗ ಅಣುಬಾಂಬ್ ಸೃಷ್ಟಿಯಾಯಿತು. ವಿಶ್ವವಿಖ್ಯಾತ ವಿಜ್ಞಾನಿ ಐನ್‌ಸ್ಟೈನ್ ಬಾಂಬ್ ತಯಾರಿಕೆಗೆ ಒಂದು Formula ಕೊಟ್ಟರು. ($E=MV^2$) ಅದರ ಆಧಾರದ ಮೇಲೆ ಅಣುಬಾಂಬ್ ಸೃಷ್ಟಿಯಾಯಿತು. ಈ ಅಣುಬಾಂಬನ್ನು ಪ್ರಯೋಗಾರ್ಥವಾಗಿ. ಅದರಿಂದ ಆಗುವ ಅನಾಹುತದ ಬಾಹುಳ್ಯವನ್ನು ತಿಳಿಯಲು ಜಪಾನಿನ ಹಿರೋಷಿಮಾ ಮತ್ತು ನಾಗಸಾಕಿ ಎಂಬ ನಗರಗಳ ಮೇಲೆ ಅಮೆರಿಕನ್ ವಾಯು ಸೇನೆ ಹಾಕಿತು. ಅದು ಹಿರೋಷಿಮಾ ಮತ್ತು ನಾಗಸಾಕಿಯ ಜನರನ್ನು ಸಾರಾಸಗಟಾಗಿ ನಾಶಮಾಡಿದವು. ಹಿರೋಷಿಮಾ ಉದ್ಯಾನವಲ್ಲಿ ಆಟವಾಡುತ್ತಿದ್ದ ಸಹಸ್ರಾರು ಮಕ್ಕಳು ಸುಟ್ಟು ಬೂದಿಯಾದರು.

ಮುಂದೆ ಅಣುಬಾಂಬನ್ನು ಯುದ್ಧದಲ್ಲಿ ಬಳಸಲಾಯಿತು. ಲಕ್ಷಾಂತರ ಜನ ಹೇಳ ಹೆಸರಿಲ್ಲದೆ ನಾಶವಾದರು. ಮಿತ್ರ ರಾಷ್ಟ್ರಗಳು ಯುದ್ಧದಲ್ಲಿ ಗೆಲುವನ್ನು ಸಾಧಿಸಿದವು. ಇದರಿಂದ ಉತ್ತೇಜನಗೊಂಡ ಪ್ರಬಲರಾಷ್ಟ್ರಗಳು ಬಾಂಬ್‌ಗಳನ್ನು ತಯಾರಿಸುವ ಸ್ಪರ್ಧೆಗೆ ಇಳಿದವು. ಅತಿಹೆಚ್ಚು ಬಾಂಬುಗಳ ದಾಸ್ತಾನು ಹೊಂದಿರುವ ಅಮೆರಿಕಾ ಮತ್ತು ರಷ್ಯಾ, ದೊಡ್ಡಣ್ಣನಂತೆ ನಡೆದುಕೊಂಡವು. ಇತರ ರಾಷ್ಟ್ರಗಳೂ ನಾವೇನು ಕಡಿಮೆ ಎಂದುಕೊಂಡವು. ಭಾರತವೂ ಮೀಸೆ ತಿರುವಿತು.

ಬಹಳ ಹಿಂದೆ 'ಶಂಕರ್ಸ್ ವೀಕ್ಲಿ'ಯಲ್ಲಿ ಒಂದು ವ್ಯಂಗ್ಯಚಿತ್ರ ಬಂದಿತ್ತು. ಪಕ್ಕಪಕ್ಕದಲ್ಲೇ ಅನೇಕ ವಿಶಾಲವಾದ ಎತ್ತರದ ಗುಡಿಸಲುಗಳು. ಹುಲ್ಲು, ಗರಿ ಹೊದಿಸಿದ ಗುಡಿಸಲುಗಳು. ಈ ಗುಡಿಸಲುಗಳ ಮೇಲ್ಛಾವಣಿಯಲ್ಲಿ ಉರಿಯುವ ಪಂಜುಗಳನ್ನು ಹಿಡಿದುಕೊಂಡು ಛಾವಣಿಯಿಂದ ಛಾವಣಿಗೆ ನೆಗೆಯುವ ಮಂಗಗಳು.

ಶಂಕರರ ಈ ವ್ಯಂಗ್ಯಚಿತ್ರದ ವಿವರಣೆ ಏನೆಂದರೆ, ಈ ಗುಡಿಸಲುಗಳೆಲ್ಲ ಒಂದೊಂದೂ ಒಂದೊಂದು ರಾಷ್ಟ್ರವನ್ನು ಪ್ರತಿನಿಧಿಸುತ್ತದೆ. ಛಾವಣಿಗಳೆಲ್ಲ ಕ್ಷಣದಲ್ಲಿ ಉರಿದುಹೋಗುವ ಹುಲ್ಲು. ತೆಂಗಿನಗರಿಗಳಿಂದ ನಿರ್ಮಿತವಾಗಿವೆ. ಅದರ ಮೇಲಿರುವ ಮಂಗಗಳು ಬೇರೆ ಬೇರೆ ರಾಷ್ಟ್ರದ ಮುಖ್ಯಸ್ಥರನ್ನು ಪ್ರತಿನಿಧಿಸುತ್ತವೆ. ಅವುಗಳ ಕೈಯಲ್ಲಿರುವ ಪಂಜು ಅಣುಬಾಂಬಿನ ಪ್ರತೀಕಗಳಾಗಿವೆ. ಯಾವ ಗಳಿಗೆಯಲ್ಲಿ ಯಾರು ಬೇಕಾದರೂ ಮೊದಲು ಬಾಂಬ್ ಹಾಕಬಹುದು. ಹೆಚ್ಚಿನ ಬಾಂಬ್‌ಗಳು ಅಮೆರಿಕ ಸರ್ಕಾರದ ಹತ್ತಿರ ಇರುವುದಾದರೂ, ಅಮೆರಿಕದ ಪೆಂಟಗನ್ ಮೇಲೆ ಮೊದಲ ಬಾಂಬನ್ನು ಲ್ಯಾಡನ್ ಕಡೆಯವರು ಹಾಕಿಬಿಟ್ಟರು. ಇದರರ್ಥ ಈ ತಲೆಗೆಟ್ಟವರಲ್ಲಿ ಯಾರು ಬೇಕಾದರೂ ಮೊದಲು ಬಾಂಬ್ ಹಾಕಿ ಸರ್ವನಾಶ ಮಾಡಬಹುದು. ತಮ್ಮ ಕೈಲಿ ಬಾಂಬಿರುವುದರಿಂದ ಯಾರೂ ತಮ್ಮ ತಂಟೆಗೆ ಬರುವುದಿಲ್ಲ ಎಂಬ ಭ್ರಮೆಯಲ್ಲಿದ್ದ ಅಮೆರಿಕಾಗೆ ಈ ದಾಳಿಯಿಂದ ಭ್ರಮನಿರಸನ ಆಯಿತು. ಬಾಂಬು **deterrent** ಅಲ್ಲ ಎಂಬುದು ಅಮೆರಿಕಾಗೆ ಅರಿವಾಯಿತು.

ಬಾಂಬ್ ತಯಾರಿಸಲು **Formula** ಕೊಟ್ಟ ಐನ್‌ಸ್ಟೀನ್‌ಗೆ ಅಮೆರಿಕ ದೇಶ ಜಪಾನಿನ ಹಿರೋಶಿಮಾ ಮೇಲೆ ಪ್ರಯೋಗಾರ್ಥವಾಗಿ ಬಾಂಬ್ ಹಾಕಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಮುಗ್ಧ ಮಕ್ಕಳು ಬೂದಿಯಾದ ವಿಷಯ ತಿಳಿದ ಮೇಲೆ ತಾನು ಬಾಂಬ್ ತಯಾರಿಸಲು ನೆರವಾದದ್ದೇ ತಪ್ಪು ಎನ್ನಿಸಿತು. 2ನೇ ಮಹಾಯುದ್ಧದಲ್ಲಿ ಪ್ರಥಮಬಾರಿಗೆ ಅಣುಬಾಂಬನ್ನು ಬಳಸಲಾಯಿತು. 3ನೇ ಮಹಾಯುದ್ಧ ಸಂಭವಿಸಿದಲ್ಲಿ ಯಾವ ಹೊಸ ಅಸ್ತ್ರವನ್ನು ಬಳಸಲಾಗುವುದು' ಎಂದು ವಿಜ್ಞಾನಿ ಐನ್‌ಸ್ಟೀನ್‌ರನ್ನು ಸುದ್ದಿ ಮಾಧ್ಯಮದವರು ಪ್ರಶ್ನಿಸಿದರು. 'ಮೂರನೇ ಮಹಾಯುದ್ಧ ನಡೆದಲ್ಲಿ ಯಾವ ಹೊಸ ಅಸ್ತ್ರ ಬಳಸಲಾಗುವುದು ಎಂಬುದು ನನಗೆ ಗೊತ್ತಿಲ್ಲ. ಆದರೆ ನಾಲ್ಕನೆ ಮಹಾಯುದ್ಧ ನಡೆದರೆ ಆಗ ಯಾವ ಅಸ್ತ್ರವನ್ನು ಬಳಸಲಾಗುವುದು ಎಂಬುದು ನನಗೆ ಗೊತ್ತು.

ನಾಲ್ಕನೇ ಮಹಾಯುದ್ಧ ನಡೆದರೆ ಆಗ ಬಳಸಲಾಗುವ ಅಸ್ತ್ರ ಕಲ್ಲಿನ ಆಯುಧ' ಎಂದರು. ಅಂದರೆ ಅಣುಬಾಂಬ್‌ಗಳನ್ನು ಬಳಕೆ ಮಾಡುವುದರಿಂದ ಸರ್ವನಾಶವಾಗುತ್ತದೆ. ನಾವು ಮತ್ತೆ ಶಿಲಾಯುಗಕ್ಕೆ ಹೋಗುತ್ತೇವೆ. ಆದ್ದರಿಂದ ಆಗ ಯುದ್ಧ ಮಾಡಲು ಕಲ್ಲೊಂದೇ ಉಳಿದಿರುವುದು ಎಂದು ಅವರು ಹೇಳಿದಂತಾಯಿತು. ಅಣುಬಾಂಬಿನ ಬಳಕೆ ನಮ್ಮನ್ನು ಮತ್ತೆ ಶಿಲಾಯುಗಕ್ಕೆ ಕೊಂಡೊಯ್ಯುವುದು ಎಂದೇ ಇದರ ಅರ್ಥ.

ಯುದ್ಧವನ್ನು ತಡೆಹಿಡಿಯುವ ಸಾಧನ ಅಣುಬಾಂಬ್ ಎಂದು ಎಲ್ಲ ಬಲಿಷ್ಠ ರಾಜ್ಯಗಳೂ ನೆನ್ನೆಯವರೆಗೆ ಹೇಳುತ್ತಿದ್ದವು. ಭಾರತದ ಪ್ರಥಮ ಪ್ರಧಾನಿ ಜವಹರಲಾಲ್ ನೆಹರು ಅವರು ಬಾಂಬ್ ವಿರೋಧಿ ಇದ್ದರು. ಆಲಿಪ್ತನೀತಿಯನ್ನು ಅವರು ಅಧಿಕಾರದಲ್ಲಿದ್ದಷ್ಟು ಕಾಲವೂ ಅನುಸರಿಸಿದರು. ಅಣುಬಾಂಬ್ ವಿಶ್ವಶಾಂತಿ ಸ್ಥಾಪನೆಗೆ ನೆರವಾಗುವುದಿಲ್ಲ. ಅಣುಬಾಂಬ್ ಯುದ್ಧಗಳನ್ನು ತಡೆಗಟ್ಟುವ ಸಾಧನವಲ್ಲ ಎಂದು ಸಾರಿಸಾರಿ ಹೇಳಿದರು.

ಇಂದಿರಾಗಾಂಧಿ ಕಾಲಕ್ಕೆ ಈ ವಿಚಾರ ಬದಲಾಯಿತು. ಭಾರತದಲ್ಲೂ ಬಾಂಬ್ ತಯಾರಿಕೆಗೆ ಚಾಲನೆ ನೀಡಲಾಯಿತು. ಭಾರತದಲ್ಲಿ ವಿಜ್ಞಾನಿಗಳು ತಯಾರಿಸಿದ ಬಾಂಬನ್ನು ಪ್ರಯೋಗಾರ್ಥವಾಗಿ ಥಾರ್ ಮರುಭೂಮಿಯಲ್ಲಿ ಸಿಡಿಸಿ ಪರೀಕ್ಷಿಸಲಾಯಿತು. ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾದ ನಂತರ ಅವರು ಭಾರತವನ್ನೂ ಅಣುಬಾಂಬ್ ಹೊಂದಿರುವ ದೇಶವನ್ನಾಗಿ ಪರಿವರ್ತಿಸಲು ಮುಂದಾದರು. ಅಣುಬಾಂಬ್ ಪೇರಿಸಿಡುವ ರಾಷ್ಟ್ರಗಳಲ್ಲಿ ಭಾರತವೂ ಒಂದು ಎಂದು ಹೆಮ್ಮೆಯಿಂದ ಘೋಷಿಸಿದರು.

ವಿಶ್ವಶಾಂತಿಗೆ ಕೆಲಸ ಮಾಡಬಲ್ಲ ಅರ್ಹತೆಯುಳ್ಳ ಏಕೈಕ ರಾಷ್ಟ್ರ ಭಾರತ ಎಂಬ ಹೆಗ್ಗಳಿಕೆಗೆ ಈ ಮೂಲಕ ಅವರು ಕೊಡಲಿಪೆಟ್ಟು

ಹಾಕಿದರು. ಆದ್ದರಿಂದ ವಿಶ್ವದ ರಾಷ್ಟ್ರಗಳು ಅಣುಬಾಂಬಿನಿಂದ ಮುಕ್ತವಾಗಬೇಕು. ಅಣುಬಾಂಬುಗಳನ್ನು ಪೇರಿಸಿಟ್ಟುಕೊಂಡಿರುವ ಎಲ್ಲ ರಾಷ್ಟ್ರಗಳೂ ಈಗ ತಲೆ ಕೆಡಿಸಿಕೊಂಡು ಈ ಪೇರಿಸಿಟ್ಟ ಅಣುಬಾಂಬಿನಿಂದ ಪಾರಾಗುವುದು ಹೇಗೆ, ಎಂದು ಚಿಂತಿಸಹತ್ತಿವೆ.

'ಅಮೇರಿಕಾ ತನ್ನ ಬಾಂಬಿನ ದಾಸ್ತಾನನ್ನು ಮೊದಲು ಕೈಬಿಡಲಿ, ಆಮೇಲೆ ನಾವೂ ಹಾಗೆಯೇ ಮಾಡುತ್ತೇವೆ' ಎಂದು ರಷ್ಯಾ, ಫ್ರಾನ್ಸ್ ದೇಶಗಳು ಹೇಳಹತ್ತಿವೆ. ಚೀನಾ, ಪಾಕಿಸ್ತಾನಗಳು ಅಣ್ವಸ್ತ್ರಗಳ ದಾಸ್ತಾನನ್ನು ಇನ್ನೂ ಹೆಚ್ಚಿಸಿಕೊಳ್ಳುತ್ತಲೇ ಇವೆ. ಇವರ ಜೊತೆಗೆ ಇರಾನ್ ಕೂಡ ಅಣುಬಾಂಬ್‌ಗಳ ತಯಾರಿಕೆಯ ಮೇಲಾಟದಲ್ಲಿ ಭಾಗವಹಿಸಲು ಚಡಪಡಿಸುತ್ತಿದೆ. ಅಣುಬಾಂಬ್ ಎಂತಹ ಅಮಾನವೀಯ ಕ್ರೂರಅಸ್ತ್ರ ಎಂಬುದನ್ನು ಅನುಭವದಿಂದ ತಿಳಿದುಕೊಂಡ ಜಪಾನಿನ ಮೇಲೆ ಈಗ ಇದ್ದಕ್ಕಿದ್ದಂತೆ ಸುನಾಮಿ ಅಪ್ಪಳಿಸಿ, ಅವರ ಅಣುಸ್ಥಾವರಗಳನ್ನೆಲ್ಲ ಆಹುತಿ ತೆಗೆದುಕೊಂಡಿದೆ. ವಿಕಿರಣಗಳ ಹಾವಳಿಯಿಂದ ಜಪಾನೀಯರು ತತ್ತರಿಸಿ ಹೋಗಿದ್ದಾರೆ.

ಈ ಎಲ್ಲ ಗೊಂದಲಮಯ ಸನ್ನಿವೇಶದಲ್ಲಿ ಅಣುಬಾಂಬುಗಳ ದಾಸ್ತಾನಿನ ಭವಿಷ್ಯದ ಬಗೆಗೆ ವಿಶ್ವದ ಎಲ್ಲ ರಾಷ್ಟ್ರಗಳೂ ಸ್ಪಷ್ಟನಿಲುವನ್ನು ತಾಳಬೇಕಾಗಿದೆ. ಅಣುಬಾಂಬಿನಿಂದ ವಿಶ್ವದ ಎಲ್ಲ ರಾಷ್ಟ್ರಗಳೂ ತತ್ತರಿಸುವಂತಾಗಿದೆ. ಅಲಸ್ಯ ಮಾಡದೆ, ಈ ಸಮಸ್ಯೆಯನ್ನು ಈ ಕೂಡಲೆ ಬಗೆಹರಿಸಿಕೊಳ್ಳಲು ಬಲಿಷ್ಠ ರಾಷ್ಟ್ರಗಳು ಮೀನಮೇಷ ನೋಡಿದರೆ ವಿಶ್ವನಾಶ ಖಂಡಿತ ಆಗುತ್ತದೆ.

ಆದ್ದರಿಂದ ವಿಶ್ವದ ಬಲಿಷ್ಠ ರಾಷ್ಟ್ರಗಳು ಕೂಡಿಕೊಂಡು ತಾವು ತಮ್ಮಲ್ಲಿರುವ ಅಣುಬಾಂಬುಗಳ ಸಂಗ್ರಹವನ್ನು ಕೈಬಿಡುವ ನಿರ್ಧಾರವನ್ನು ಕೂಡಲೇ ಪ್ರಕಟಿಸಬೇಕು. ಹೀಗೆ ಮಾಡಿದರೆ ಮಾತ್ರ ಆ ಬಲಿಷ್ಠ ರಾಷ್ಟ್ರಗಳ ನೈತಿಕ ಬಲ ಇಮ್ಮಡಿಸುವುದು. ಈ ನೈತಿಕ ಬಲದ ಆಧಾರದ ಮೇಲೆ ಬಲಿಷ್ಠ ರಾಷ್ಟ್ರಗಳು ಉಳಿದ ರಾಷ್ಟ್ರಗಳ

ಮೇಲೆ ಒತ್ತಡ ತರಲು ಸಾಧ್ಯವಾಗುವುದು. ಅಣ್ವಸ್ತ್ರಗಳನ್ನು ಕೈಬಿಟ್ಟರೆ ಮಾತ್ರ ಪ್ರಪಂಚದ ರಾಷ್ಟ್ರಗಳು ಯುದ್ಧ ಮುಕ್ತ ವಿಶ್ವವನ್ನು ರೂಪಿಸಲು ಸಾಧ್ಯವಾಗುವುದು.

ಇರಾಕ್ ಮೇಲಿನ ಯುದ್ಧ, ಆಫ್ಘಾನಿಸ್ತಾನದ ಯುದ್ಧ ಇವು ಅಲ್ಲಿಯ ಸಂಪನ್ಮೂಲಗಳನ್ನು ಅಮೆರಿಕ ರಷ್ಯಾಗಳು ತಮ್ಮದಾಗಿಸಿಕೊಳ್ಳುವುದಕ್ಕಾಗಿ ನಡೆದ ಯುದ್ಧಗಳು. ಅನ್ಯದೇಶಗಳ ಸಂಪನ್ಮೂಲಗಳನ್ನು ತಮ್ಮದಾಗಿಸಿಕೊಳ್ಳುವ ಹುನ್ನಾರವನ್ನು ಬಲಿಷ್ಠರಾಷ್ಟ್ರಗಳು ಕೈಬಿಡಬೇಕು. ವಿಶ್ವದಲ್ಲಿ ಎಲ್ಲೇ ಅನ್ಯಾಯದ ಯುದ್ಧ ನಡೆದರೆ, ಹಾಗೆ ತೊಡಗುವವರ ವಿರುದ್ಧ ಕ್ರಮಕೈಗೊಳ್ಳಲು ಒಂದು ತಟಸ್ಥ ವಿಶ್ವ ಸರ್ಕಾರ ಅಸ್ತಿತ್ವಕ್ಕೆ ಬರಬೇಕು. ದ್ವೇಷ ಭಾವನೆಯಿಂದಲಾಗಲಿ, ಲೋಭ, ಮದ, ಮಾತ್ಸರ್ಯ ಇಟ್ಟುಕೊಂಡಾಗಲಿ ಕಾಲ್ಕೆರೆದುಕೊಂಡು ಅನ್ಯ ರಾಷ್ಟ್ರಗಳನ್ನು ಆಕ್ರಮಣ ಮಾಡುವ ಕ್ಷುದ್ರ ರಾಷ್ಟ್ರಗಳ ವಿರುದ್ಧವಾಗಿ ವಿಶ್ವ ಆಯೋಜಿತ ಸೈನ್ಯ ನಿಲ್ಲಬೇಕು. ರಾಷ್ಟ್ರರಾಷ್ಟ್ರಗಳಲ್ಲಿ ಪರಸ್ಪರ ಪ್ರೀತಿ ಗೌರವಗಳು ಬೆಳೆದು, ಎಲ್ಲ ರಾಷ್ಟ್ರಗಳ ಜನರೂ ತಾವು ವಿಶ್ವಭ್ರಾತೃಗಳು ಎಂದು ಭಾವಿಸಿಕೊಂಡು ಕೂಡಿಬಾಳುವ ಸಂಕಲ್ಪ ಮಾಡಿದರೆ ವಿಶ್ವಶಾಂತಿ ತಾನಾಗಿಯೇ ಮೂಡುವುದು.

ಧರ್ಮ ಮತ್ತು ರಾಜಕೀಯ

'ಸತ್ಯ ಮತ್ತು ಸಾತ್ವಿಕತೆಗಳಿಗಿಂತ ಹೆಚ್ಚಿನ ಧರ್ಮ ಮತ್ತೊಂದಿಲ್ಲ. ಹಿಂದೂಧರ್ಮ ಉಳಿದ ಎಲ್ಲ ಧರ್ಮಗಳಿಗಿಂತ ಮೌಲಿಕವಾದದ್ದು ಎಂದು ನಾನು ತಿಳಿದಿರುವೆನಾದರೂ ಮನುಷ್ಯ ಸ್ವಭಾವವನ್ನೇ ಪರಿವರ್ತನೆ ಮಾಡುವ, ಸತ್ಯಕ್ಕೆ ಅಂಟಿಕೊಳ್ಳುವಂತೆ ಮಾಡುವ, ನಮ್ಮ ಮನಸ್ಸಿನ ಮಾಲಿನ್ಯವನ್ನು ತೊಳೆಯುವ ಧರ್ಮವನ್ನೇ ನಾನು ಪ್ರತಿಪಾದಿಸುವುದು. ಎಲ್ಲರನ್ನೂ ಒಂದುಗೂಡಿಸುವುದೇ ಧರ್ಮದ ಮೂಲಮಂತ್ರ. ನೈತಿಕತೆಯ ಅನುಷ್ಠಾನವೇ ಧರ್ಮ ಮಾನವನನ್ನೂ ದೇವರನ್ನೂ ಒಂದುಗೂಡಿಸುವ ಸಾಧನ ಧರ್ಮ' ಎಂದು ಮಹಾತ್ಮಾಗಾಂಧಿಯವರು ಹೇಳಿದ್ದಾರೆ.

ಹಿಂದೂಧರ್ಮದ ಹಿರಿಮೆ ಗರಿಮೆಗಳನ್ನೂ ಹಿಂದೂ ಸಂಸ್ಕೃತಿಯ ಸ್ಪಂದನಶೀಲತೆಯನ್ನೂ, ಉದಾತ್ತತೆಯನ್ನೂ ಯಾರೂ ಅಲ್ಲಗಳೆಯುವಂತಿಲ್ಲ. ಆದರೆ ರಾಜಕೀಯವಾಗಿ ಭಾರತವನ್ನು ಹಿಂದೂ ರಾಷ್ಟ್ರವೆಂದು ಕರೆಯುವುದರಿಂದ ನಮ್ಮ ದೇಶದಲ್ಲಿ ಬಹುಕಾಲದಿಂದ ಹಿಂದೂ ಸಮಾಜದ ಅವಿಭಾಜ್ಯ ಅಂಗವಾಗಿ ಬೆಳೆದು ಬಂದಿರುವ ಬೌದ್ಧ, ಜೈನ, ಮುಸ್ಲಿಂ, ಸಿಖ್, ಪಾರ್ಸಿ, ಕ್ರಿಶ್ಚಿಯನ್, ನೀಗ್ರೋ ಸೋದರರಿಗೆ ನಮ್ಮ ರಾಷ್ಟ್ರದಲ್ಲಿ ಸ್ಥಾನವಿಲ್ಲವೆಂದು ಹೇಳಿದಂತೆ ಆಗುತ್ತದೆ. ಅಥವಾ ಅವರು ಭಾರತದಲ್ಲೇ ಉಳಿಯುವವರಾದರೆ ಅವರು ಎರಡನೇ ದರ್ಜೆ ಪ್ರಜೆಗಳಾಗಿ ಉಳಿಯಬಹುದೆಂದು ಹೇಳಿದಂತಾಗುತ್ತದೆ.

ಹಾಗೆ ನೋಡ ಹೋದರೆ ಯಾವ ಧರ್ಮವೂ ಮೇಲಲ್ಲ, ಯಾವ ಧರ್ಮವೂ ಕೀಳಲ್ಲ. ಹಾಗಿದ್ದ ಮೇಲೆ ಇಷ್ಟೊಂದು ಧರ್ಮಗಳು ಹೇಗೆ ಹುಟ್ಟಿಕೊಂಡವು? ಒಂದು ಧರ್ಮದ ಆಚರಣೆಯಲ್ಲಿ ಯಾವುದೋ

ಕುಂದುಂಟಾದಾಗ, ಒಬ್ಬ ಚಿಂತನಶೀಲ ವ್ಯಕ್ತಿ ಆ ಕೊರತೆ ತುಂಬಿಕೊಳ್ಳಲು ಮತ್ತೊಂದು ಧರ್ಮವನ್ನು ಆರಂಭಿಸುತ್ತಾನೆ.

ಅರವಿಂದರು ಹೀಗೆ ಹೇಳುತ್ತಾರೆ

All religions have some truth in them, but none has the whole truth. All are created in time and they fully decline and perish. God and Truth out last these religions and manifest themselves in what ever way or form the devine wisdom chooses. You cannot shut up God in whatever way or form or dictate.

ಎಲ್ಲ ಧರ್ಮಗಳ ಬೋಧನೆಯೂ ಮೆಚ್ಚಿಕೊಳ್ಳುವಂಥದೇ. ಆದರೆ ಯಾರು ಧರ್ಮದ ಬೋಧನೆ ಮಾಡುತ್ತಿದ್ದಾರೋ ಅವರು ವಿವಿಧ ಧರ್ಮಗಳ ಅನುಯಾಯಿಗಳಲ್ಲಿ ಸಾಮರಸ್ಯ, ಭ್ರಾತೃತ್ವ, ಆತ್ಮೀಯತೆಗಳನ್ನು ಬೆಳೆಸುತ್ತಿಲ್ಲ. ಅಷ್ಟೆ ಅಲ್ಲ. ತಾನು ನಂಬಿರುವ ಧರ್ಮವನ್ನೇ ತ್ರಿಕರಣಪೂರ್ವಕವಾಗಿ ಅನುಷ್ಠಾನದಲ್ಲಿಟ್ಟುಕೊಂಡಿಲ್ಲ. ವಸ್ತುಸ್ಥಿತಿ ಇದಾಗಿರುವಾಗ, ಮತಧರ್ಮಗಳ ಅವಶ್ಯಕತೆಯಾದರೂ ಏನು ಎನಿಸುವುದು ಸಹಜ. ಜಾತೀಯತೆ ಹಿಂದುಧರ್ಮವನ್ನು ಕಲುಷಿತಗೊಳಿಸಿದೆ. ಸಮಾಜವನ್ನು ಒಡೆಯುವ ಇಂತಹ ಧರ್ಮ ನಮಗೇಕೆ ಬೇಕು ಎಂದು ಸಮಾಜದಲ್ಲಿ ಶಾಂತಿಯನ್ನೂ, ನೆಮ್ಮದಿಯನ್ನೂ ಬಯಸುವವರು ಪ್ರಶ್ನಿಸುವುದು ಸಹಜವಾಗಿದೆ.

ಎಲ್ಲ ಜಾತೀಯತೆಯೂ ಕೆಟ್ಟದ್ದೇ. ಅಲ್ಪಸಂಖ್ಯಾತರು ಜಾತೀಯತೆ ಬೆಳೆಸಿಕೊಂಡರೆ ಅವರು ಸಮಾಜದಿಂದ ಬೇರ್ಪಟ್ಟು ಒಂಟಿತನ ಅನುಭವಿಸಬೇಕಾಗುತ್ತದೆ. ಬಹುಸಂಖ್ಯಾತರ ಜಾತೀಯತೆ ಸರ್ವಾಧಿಕಾರಿ ಧೋರಣೆ ಎನಿಸುತ್ತದೆ. ಮತಾಂಧ ತನ್ನ ಧರ್ಮವನ್ನು ಹೊಗಳಿಕೊಳ್ಳುತ್ತಾ ಇತರೆ ಧರ್ಮಗಳನ್ನು ಕಡೆಗಣಿಸಿ ನೋಡುತ್ತಾನೆ, ಹೀಯಾಳಿಸುತ್ತಾನೆ.

ಮತಾಂಧತೆ ಮಾನವನನ್ನು ಮತಿಹೀನನ್ನಾಗಿ ಮಾಡಿದೆ. ಧರ್ಮದ ಅಮಲೇರಿದ ವ್ಯಕ್ತಿ ಎಂತಹ ದುಷ್ಕೃತ್ಯವನ್ನು ಮಾಡಲೂ ಹೇಸುವುದಿಲ್ಲ. ಮತಾಂಧತೆ ಒಂದು ವ್ಯಾಧಿ. ಅದು ಕಟ್ಟಾ ಜಾತಿವಾದಿಗಳನ್ನು ಸೃಷ್ಟಿಸುತ್ತದೆ. 'ಹಿಂದುಗಳು ಜಾತ್ಯಾತೀತತೆಯನ್ನು ಒಪ್ಪಿಕೊಂಡಿರುವವರು, ಮುಸ್ಲಿಮರು ಕಟ್ಟಾ ಜಾತಿವಾದಿಗಳು' ಎನ್ನುತ್ತಾರೆ, ನಾನಾಜಿ ದೇಶಮುಖ್. ಅವರು ಮುಂದುವರಿದು ಹಿಂದುಗಳು ಜಾತಿ, ಭಾಷೆ, ಪ್ರಾಂತ್ಯ ಭಾವನೆಯಿಂದ ಕೂಡಿದವರು ಎಂದೂ ಹೇಳುತ್ತಾರೆ. ಜಾತಿ, ಭಾಷೆ, ಪ್ರಾಂತ್ಯ ಭಾವನೆಯಿಂದ ಕೂಡಿದ ಹಿಂದುಗಳು ಜಾತ್ಯಾತೀತ ಭಾರತೀಯರಾಗುವುದು ಹೇಗೆ ಸಾಧ್ಯ? ಆದ್ದರಿಂದ ಹಿಂದುಗಳಿಗೂ, ಮುಸ್ಲಿಮರಿಗೂ ಜಾತ್ಯಾತೀತತೆ ಎಂದರೆ ಏನೆಂಬುದು ತಿಳಿದಿಲ್ಲ ಎಂದು ಹೇಳುವುದು ಹೆಚ್ಚು ಸಮಂಜಸ.

ನಾನಾಜಿ ದೇಶ್‌ಮುಖ್ "ಸ್ವಾತಂತ್ರ್ಯ ಬಂದ ಮೇಲೆ ರಾಷ್ಟ್ರಧ್ವಜ ಬದಲಿಸಿದಂತೆ, ರಸ್ತೆಗಳ ಹೆಸರು ಬದಲಿಸಿದಂತೆ, ಮಸೀದಿಗಳನ್ನು ಒಡೆದು ಅದರ ಸ್ಥಾನದಲ್ಲಿ ಹಿಂದೂ ದೇವಾಲಯಗಳನ್ನು ಕಟ್ಟುವುದು ರಾಷ್ಟ್ರದ ಹೆಮ್ಮೆಯ ಕೆಲಸ" ಎಂದಿದ್ದಾರೆ. ನಾನಾಜಿ ದೇಶ್‌ಮುಖರ ಮಾತಿನಂತೆ ನಾವು ನಡೆದರೆ ಈ ದೇಶದಲ್ಲಿ ಅಂತರ್‌ಮತದ ಯುದ್ಧಗಳು ನಡೆಯಬಹುದು. ಪ್ರೇಮದಿಂದ ಪರಸ್ಪರವಾಗಿ ನಾವು ಹೃದಯಗಳನ್ನು ಗೆಲ್ಲಬೇಕು. ಯಾರಿಗೂ ಏಕಪಕ್ಷೀಯವಾಗಿ ಅನ್ಯಧರ್ಮದವರ ಮನನೋಯಿಸುವ ಹಾಗೂ ಕಾನೂನನ್ನು ತಮ್ಮ ಕೈಗೆತೆಗೆದುಕೊಳ್ಳುವ ಅಧಿಕಾರವಿರುವುದಿಲ್ಲ. ಶ್ರದ್ಧೆ ಮತ್ತು ನಿರ್ಧಾರಗಳ ಹೆಸರಿನಲ್ಲಿ ಮಾಡಬಾರದ್ದನ್ನು ಮಾಡುವ ಹಕ್ಕು ಯಾರಿಗೂ ಇಲ್ಲ, ಅದು ಯಾವೊಬ್ಬ ಮತಾಂಧರ ಗುತ್ತಿಗೆಯೂ ಅಲ್ಲ.

ಒಕ್ಕಲಿಗ ಸ್ವಾಮಿಗಳ ನೇತೃತ್ವದಲ್ಲಿ ಒಕ್ಕಲಿಗ ಸೇನೆ ಕಟ್ಟುತ್ತಾರಂತೆ. ಧರ್ಮ, ಧರ್ಮವಾಗಿ ಇಂದು ಉಳಿದಿಲ್ಲ. ಲಿಂಗಾಯತ ಸ್ವಾಮಿಗಳು,

ಲಿಂಗಾಯತನೆಂಬ ಏಕೈಕ ಕಾರಣಕ್ಕಾಗಿ, ಅವರ ಮುಖಂಡರು ಕಡು ಭ್ರಷ್ಟರಾಗಿದ್ದರೂ, ಅವರನ್ನು ಸಮರ್ಥಿಸುತ್ತಾರೆ. ಕೆಲ ರಾಜಕೀಯ ಮುಧಾರಿಗಳ ಕಪ್ಪು ಹಣ ಪೀಠಾಧಿಪತಿಗಳ ಕಡೆ ಇದೆ. ಸಂಗ್ರಹಬುದ್ಧಿ ಮಠಾಧೀಶರಲ್ಲಿ ಬೆಳೆದಿದೆ.

ಗಾಂಧೀಜಿ ಮತ್ತು ಧರ್ಮ

There is no religion higher than truth and Rituousness.

"ಹಿಂದು ಧರ್ಮ ಉಳಿದೆಲ್ಲ ಧರ್ಮಗಳಿಗಿಂತ ಮೌಲಿಕವಾದದ್ದು ಎಂದು ತಿಳಿದಿರುವೆನಾದರೂ ಮನುಷ್ಯ ಸ್ವಭಾವವನ್ನು ಪರಿವರ್ತನೆ ಮಾಡುವ, ಸತ್ಯಕ್ಕೆ ಅಂಟಿಕೊಳ್ಳುವಂತೆ ಮಾಡುವ, ನಮ್ಮ ಮನಸ್ಸಿನ ಮಾಲಿನ್ಯವನ್ನು ತೊಳೆಯುವ ಧರ್ಮವನ್ನೇ ನಾನು ಪ್ರತಿಪಾದಿಸುವುದು. ಎಲ್ಲರನ್ನೂ ಒಂದುಗೂಡಿಸುವುದೇ ಧರ್ಮದ ಗುರಿ.

ನೈತಿಕತೆಯ ಅನುಷ್ಠಾನವೇ ಧರ್ಮ. ಧರ್ಮ ಮಾನವನನ್ನೂ ದೇವರನ್ನೂ ಒಂದುಗೂಡಿಸುವ ಸಾಧನ.

No Politics without religion but not the religion of the superstitious and the blind

Religion that hates and fights is no religion. Politics without morality is a thing to be avoided.

In Politics also we have to establish the kingdom of heaven. Political Power is not an end in itself. In an ideal state there is not political power as such.

ಆಧುನಿಕ ಕಾಲದಲ್ಲೂ ಶ್ರೀರಾಮಕೃಷ್ಣ ಪರಮಹಂಸರು, ವಿವೇಕಾನಂದರು ಮಹಾತ್ಮಾಗಾಂಧಿಯವರು ಧರ್ಮ ಸಮನ್ವಯದ

ಕೆಲಸವನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಹಿಂದೂಧರ್ಮದಲ್ಲಿ ದೇವರನ್ನು ನಂಬುವವರಿಗೆ ಮಾತ್ರವಲ್ಲದೆ, ದೇವರನ್ನು ನಿರಾಕರಿಸಿದವರಿಗೂ ಸ್ಥಾನವಿದೆ. ಮೂರ್ತಿಪೂಜೆ ಮಾಡುವವರಿಗೂ, ನಿರಾಕರಿಸುವವರಿಗೂ ಹಿಂದುಧರ್ಮದಲ್ಲಿ ಅವಕಾಶವಿದೆ.

ಬಡತನ ನಿವಾರಣೆ, ಜಾತಿನಿರ್ಮೂಲನೆ, ಎಲ್ಲರಿಗೂ ಶಿಕ್ಷಣ, ಉದ್ಯೋಗ, ಶೋಷಣೆ ರಹಿತ ಸಮಾಜ ರಚನೆ ಈ ಮೂಲಭೂತ ಸಮಸ್ಯೆಗಳ ಕಡೆಗೆ ಗಮನಹರಿಸಬೇಕು. ಜಾತಿ ಧರ್ಮಗಳ ಅಫೀಮು ತಿನ್ನಿಸಿ ದಾರಿ ತಪ್ಪಿಸಿ ಮತಾಂಧರನ್ನಾಗಿ ಮಾಡುವ ಕೆಲಸವನ್ನು ಹಿಂದುರಾಷ್ಟ್ರ ಪ್ರತಿಪಾದಕರು ಮಾಡುತ್ತಿದ್ದಾರೆ. ಕುರ್ಚಿಯ ಭದ್ರತೆಗಾಗಿ, ವೋಟಿಗಾಗಿ ಜಾತಿಮತ, ಧರ್ಮಗಳನ್ನು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ. ಒಮ್ಮೆ ಮುಸ್ಲಿಮರನ್ನೋ, ಹರಿಜನರನ್ನೋ ಒಲಿಸಿಕೊಳ್ಳುವುದು, ಮತ್ತೊಮ್ಮೆ ಹಿಂದುಗಳನ್ನೋ, ಸಿಖ್ಖರನ್ನೋ ಎತ್ತಿಕಟ್ಟುವುದು, ಕೋಮುದ್ವೇಷ ಹರಡುವುದು ಅದರ ಲಾಭವನ್ನು ತಾವು ಪಡೆಯುವುದು ನಡೆದೇ ಇದೆ.

ವಿವಿಧ ಧರ್ಮಗಳ ನಡುವಿನ ಹೊಂದಾಣಿಕೆಯೇ ಧರ್ಮ

ಬುದ್ಧ, ಬಸವ, ಅಶೋಕ, ಅಕ್ಬರ್, ಸೂಫಿಗಳು, ಭಕ್ತಿಪಂಥದವರು, ಗುರುನಾನಕ್ ಇವರೆಲ್ಲ ಬೇರೆಬೇರೆ ಕಾಲಘಟ್ಟದಲ್ಲಿ ಬೇರೆಬೇರೆ ಮಾತುಗಳಲ್ಲಿ ಹೇಳಿದ ಮಾತಿನ ಸಾರ ಒಂದೇ. ಅದು ಸೌಹಾರ್ದತೆ ಮತ್ತು ಸಾಮರಸ್ಯ. ಭಾರತದಲ್ಲಿ ನೂರಾರು ವರ್ಷಗಳಿಂದ ನೆಲೆಸಿರುವ ಹಿಂದುಗಳು, ಕ್ರಿಶ್ಚಿಯನ್ನರು, ಪಾರ್ಸಿಗಳು, ಮಹಮದೀಯರು ಎಲ್ಲರೂ ಶಾಂತಿಯಿಂದ, ಸೌಹಾರ್ದದಿಂದ 'ನಾವೆಲ್ಲ ಭಾರತೀಯರು' ಎಂಬ ಭಾವನೆಯಿಂದ ಬದುಕಬೇಕು.

ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಮಹಾತ್ಮ ಗಾಂಧಿ ಅವರು ಇವರೆಲ್ಲ ಸರ್ವಧರ್ಮಗಳ ಸಮನ್ವಯ ಕಾರ್ಯವನ್ನು ಮುಂದುವರೆಸಿದರು. ಗಾಂಧೀಜಿ ಕೋಮುಸೌಹಾರ್ದಕ್ಕಾಗಿ ತಮ್ಮ ಬದುಕನ್ನೇ ಮುಡುಪಾಗಿಟ್ಟರು ಮಾತ್ರವಲ್ಲದೆ ಅದಕ್ಕೆ ಇನ್ನೊಂದು ಆಯಾಮವನ್ನೂ ಸೇರಿಸಿದರು. ಅದೆಂದರೆ ಪ್ರಜಾಪ್ರಭುತ್ವ ಪ್ರತಿಪಾದನೆ. ಇದು ಅವರ ವಿಶಿಷ್ಟ ಕೊಡುಗೆ. ಮನುಷ್ಯರಲ್ಲಿ ಪರಸ್ಪರ ಸಹಿಷ್ಣುತೆ, ಸಾಮರಸ್ಯಗಳೇ ಪ್ರಜಾಪ್ರಭುತ್ವದ ನೆಲೆಗಟ್ಟು. ಅದು ನಮ್ಮ ಜೀವನದಲ್ಲಿ, ನಡತೆಯಲ್ಲಿ, ಮಾತಿನಲ್ಲಿ, ಕೃತಿಯಲ್ಲಿ ಪ್ರತಿಪಾದಿತವಾಗಬೇಕು, ಅಭಿವ್ಯಕ್ತವಾಗಬೇಕು ಎಂದು ಅವರು ಸಾರಿ ಹೇಳಿದರು.

ವಿವಿಧ ಮತಗಳ ನಡುವಿನ ಹೊಂದಾಣಿಕೆಯೇ ನಿಜವಾದ ಧರ್ಮ, ಬಡಿದಾಡುವುದನ್ನು ಬಯಸುವ ಧರ್ಮ, ಧರ್ಮವೇ ಅಲ್ಲ. ಸಹನಶೀಲತೆ, ಸಂವೇದನೆ ಮತ್ತು ಮಾನವೀಯತೆ ಇವುಗಳನ್ನು ಪೋಷಿಸುವ ಸಾಧನವಾಗಬೇಕು ಧರ್ಮ. ಸ್ವಾತಂತ್ರ್ಯ ಪ್ರಾಪ್ತವಾದ ಕೆಲ ವರ್ಷಗಳು ರಾಷ್ಟ್ರದ ಅಖಂಡತೆ, ವಿವಿಧ ಮತಗಳಲ್ಲಿ

ಸೌಹಾರ್ದತೆ, ಸಹಕಾರ ಭಾವನೆಗಳನ್ನು ಕಾಪಾಡಿಕೊಂಡು ಬರಲು ಪ್ರಯತ್ನಗಳು ಅಖಂಡವಾಗಿ ನಡೆದವು.

ಆದರೆ ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರವನ್ನು ಛಿದ್ರಗೊಳಿಸುವ ಪ್ರವೃತ್ತಿ ಭಾರತದ ಅನೇಕ ಕಡೆ ತಲೆ ಎತ್ತಿದೆ. ಹಲವು ಹತ್ತು ವೈರುಧ್ಯತೆಗಳ ನಡುವೆಯೂ 'ಹಿಂದು' ಎಂಬ ಒಂದು ಚೌಕಟ್ಟಿನಡಿ ಒಟ್ಟುಗೂಡಿಸಬಲ್ಲ, ಈ ನೆಲದ ಬಹುಸಂಖ್ಯಾತ ಜನರ ಮುಗ್ಧತೆಯನ್ನು ರಾಜಕೀಯ ಕಾರಣಗಳಿಗಾಗಿ ದುರ್ಬಳಕೆ ಮಾಡಿಕೊಳ್ಳುವ ದುಷ್ಟ ಶಕ್ತಿಗಳಿಂದಾಗಿ ಇಂದು ಸಮಾಜ ಒಡೆಯುತ್ತಿದೆ. ಆ ಮಹನೀಯರೆಲ್ಲ ನಮಗೆ ಬೋಧಿಸಿಹೋದ ಸಾಮರಸ್ಯ, ಸೌಹಾರ್ದತೆಗಳು ಅಪಾಯದ ಅಂಚಿಗೆ ಬಂದು ತಲುಪಿವೆ. ಹಿಂದುಗಳೆಲ್ಲ ಸಾರಾಸಗಟಾಗಿ ಈ ಪ್ರವೃತ್ತಿಯನ್ನು ಸ್ವಾಗತಿಸುತ್ತಿಲ್ಲ. ಕೆಲವರು ಮಾತ್ರ ಈ ಸಮೂಹ ಸನ್ನಿಗೆ ಇಂಬುಗೊಡುತ್ತಿದ್ದಾರೆ. ಬಹುಸಂಖ್ಯೆಯ ಹಿಂದುಗಳು ಈ ಮನೋಭಾವವನ್ನು ಒಪ್ಪುವುದಿಲ್ಲ.

ಕೋಮು ಘರ್ಷಣೆ ಈಗ ಬಹುರೂಪ ತಾಳುತ್ತಿದೆ. ಗೋವನ್ನು ನೆಪವಾಗಿಟ್ಟುಕೊಂಡು ಅದರ ಸಾಗಾಣಿಕೆ ಮಾಡುವವರನ್ನು ಬರ್ಬರವಾಗಿ ಕೊಲ್ಲುವ ಪ್ರಕರಣಗಳು ನಡೆದಿವೆ. ಬೇರೆ ಧರ್ಮದ ಹುಡುಗ, ಒಬ್ಬ ಹುಡುಗಿಯ ಜತೆಗೆ ಹೋಗುತ್ತಿದ್ದರೆ, ಬೀದಿಯಲ್ಲಿ ನಿಂತು ಮಾತನಾಡುತ್ತಿದ್ದರೆ, ಅವರನ್ನು ಬೆದರಿಸುವ, ಹೊಡೆಯುವ, ಕೊಲ್ಲುವ ಘಟನೆಗಳೂ ಹೆಚ್ಚುತ್ತಿವೆ. ಸಮಾಜದ ಒಂದು ವಿಭಾಗ ಇನ್ನುಳಿದ ವಿಭಾಗಗಳ ಮೇಲೆ ಹೀಗೆ ಆಕ್ರಮಶೀಲವಾದಂತೆಲ್ಲ ಅವು ಸಹಾ ಇದೇ ಹಾದಿ ಹಿಡಿಯುವುದು ಸಹಜ. ಕ್ರಿಯೆ ಇದರಿಂದ ಸಹಜವಾಗಿ ಸಮಾಜದಲ್ಲಿ ಅಶಾಂತಿ, ದ್ವೇಷ ಭಾವನೆ ಹೆಚ್ಚಾಗುತ್ತದೆ. ನಿಜವಾದ ಹಿಂದೂಗಳು ಯಾವತ್ತೂ ಸೌಹಾರ್ದತೆಯನ್ನು ಬಯಸುತ್ತಾರೆಯೇ ವಿನಹ ದುಷ್ಟ ಹಿಂದೂತ್ವವಾದಿಗಳ ತಾಳಕ್ಕೆ ಹೆಜ್ಜೆಹಾಕುವುದಿಲ್ಲ.

ಭಾರತದಲ್ಲಿ ವಾಸ ಮಾಡುವ ಎಲ್ಲರನ್ನೂ ಹಿಂದೂಗಳು ಎಂದು ಕರೆಯುವ ರಾಜ್ಯಾಂಗದ ತಿದ್ದುಪಡಿಗೂ ಸಿದ್ಧತೆ ನಡೆದಿರುವ ವರ್ತಮಾನಗಳು ಕೇಳಿಬರುತ್ತಿವೆ. ಮುಸಲ್ಮಾನರು, ಕ್ರಿಶ್ಚಿಯನ್ನರು, ಪಾರ್ಸಿಗಳು, ಸಿಖ್ಖರು, ಜೈನರು ತಾವು ಹಿಂದೂಗಳಲ್ಲ ಎಂದು ಘೋಷಣೆ ಮಾಡಿದರೆ, ಅಂತಹವರನ್ನು ಭಾರತದ ಎರಡನೆಯ ದರ್ಜೆ ಪ್ರಜೆಗಳನ್ನಾಗಿ ಕಾಣಲಾಗುತ್ತದೆ. ಅಂತಹವರಿಗೆ ಮತದಾನದ ಹಕ್ಕನ್ನು ನಿರಾಕರಿಸುವ ಹುನ್ನಾರ ಇಂಥಾ ಪ್ರಯತ್ನಗಳ ಹಿಂದೆ ಅಡಗಿವೆ. ಇತರ ಧರ್ಮೀಯರನ್ನು ಕಾಲಕಸವಾಗಿ ಕಾಣುವ ಹುನ್ನಾರ ಈ ಮತಾಂಧ ಹಿಂದೂತ್ವ ಪ್ರತಿಪಾದಕರದು. ಸಹಜೀವಿಗಳಲ್ಲಿ ಹತಾಶೆ, ಆಕ್ರೋಶ, ಅಸಹಾಯಕತೆಗಳನ್ನು ಮಡುಗಟ್ಟಿಸಿ ಒಂದು ಸದೃಢ ಸಭ್ಯ ಸಮಾಜವನ್ನು ಕಟ್ಟಲು ಸಾಧ್ಯವಿಲ್ಲ.

ಪ್ರಧಾನಿ ಹುದ್ದೆಯಲ್ಲಿರುವವರು ಈ ಘೋರ ಪಾತಕಗಳನ್ನು ಕಂಡೂ ಕಾಣದಂತೆ ನಟಿಸುತ್ತಾರೆ. ಇಂಥಾ ಸಮಾಜ ವಿಭಜನೆಯ ಪ್ರತಿಪಾದಕರಿಗೆ ಮಂತ್ರಿಮಂಡಲದಲ್ಲಿ ಸ್ಥಾನ ಕೊಟ್ಟಿದ್ದಾರೆ. ಕೋಮುವಿದ್ವೇಷ ಬೆಳೆಸುವುದಕ್ಕಾಗಿಯೇ ಜನರ ತೆರಿಗೆ ದುಡ್ಡಲ್ಲಿ ಅಂಥವರಿಗೆ ಸಂಬಳ ಕೊಟ್ಟು ನೇಮಿಸಿಕೊಂಡಿದ್ದಾರಾ ಎಂಬ ಅನುಮಾನ ಮೂಡಿದೆ. ಅಂತಹ ಮಂತ್ರಿಗಳು ಕೋಮುವಿದ್ವೇಷ ಬೆಳೆಸುವ ಮಾತುಗಳನ್ನು ಪದೇಪದೇ ಆಡುತ್ತಾರೆ. ರಾಜ್ಯಾಂಗವನ್ನು ಬದಲಾಯಿಸುವ ಮಾತನ್ನಾಡುತ್ತಾರೆ.

ಹಿಂದುಗಳಲ್ಲಿ ಬಹುಸಂಖ್ಯೆಯ ಜನ ವಿಚ್ಛಿದ್ರಕಾರಿ ನಿಲುವನ್ನು ಒಪ್ಪುವುದಿಲ್ಲ. ರಾಜಕೀಯವಾಗಿ ಆಳುವ ಪಕ್ಷಕ್ಕೆ ಮತ ಹಾಕಿದವರಲ್ಲೂ ಬಹಳಷ್ಟು ಜನ ಕೋಮುವಿದ್ವೇಷವನ್ನು ಒಪ್ಪದವರಿದ್ದಾರೆ. ಹಿಂದಿನ ಸರ್ಕಾರಗಳ ವೈಫಲ್ಯ, ಭ್ರಷ್ಟಾಚಾರ, ಚಲನಶೀಲತೆ ಇಲ್ಲದ ಆಡಳಿತಗಳಿಂದ ಬೇಸತ್ತ ಜನ ಹೊಸ ಸರ್ಕಾರವನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಿದೆ.

ಸರ್ವಾಧಿಕಾರಿಗಳಿಗೆ ತಕ್ಕ ಶಾಸ್ತಿ

ಗಾಂಧೀಜಿ ಹೂಡಿದ ಸತತ ಹೋರಾಟಗಳು, ದೇಶಾದ್ಯಂತ ನಡೆದ ಸ್ವಾತಂತ್ರ್ಯ ಚಳವಳಿಗಳ ಕಾರಣ ಇಂಗ್ಲೀಷ್‌ರು ಭಾರತ ಬಿಟ್ಟು ಹೋದರು. ಆದರೆ ಸ್ವಾತಂತ್ರ ನಂತರದ ಕಾಲದಲ್ಲಿ, ನಿರ್ದಿಷ್ಟವಾಗಿ ಇಂದಿರಾಗಾಂಧಿ ಪ್ರಧಾನಿಯಾಗಿದ್ದಾಗ, ಆಡಳಿತದಲ್ಲಿ ಭ್ರಷ್ಟಾಚಾರ ಬೆಳೆಯಲು ಅವಕಾಶ ಮಾಡಿಕೊಟ್ಟರು. ಸರ್ವಾಧಿಕಾರಿ ಧೋರಣೆಯ ಇಂದಿರಾರನ್ನು ಅಂಕೆಯಲ್ಲಿರಿಸಲು ಕಾಂಗ್ರೆಸ್ ಹೈಕಮಾಂಡ್ ನಡೆಸಿದ ಪ್ರಯತ್ನಗಳು ವಿಫಲವಾದವು. ಇಂದಿರಾ ಗಾಂಧಿಯವರ ಹಿಡಿತ ಎಷ್ಟರಮಟ್ಟಿಗೆ ಬೆಳೆಯಿತೆಂದರೆ, ರಾಷ್ಟ್ರಪತಿ ಪದವಿಗೆ ಕಾಂಗ್ರೆಸ್ಸಿನ ಅಧಿಕೃತ ಅಭ್ಯರ್ಥಿ ಸಂಜೀವರೆಡ್ಡಿಯವರ ವಿರುದ್ಧವೇ ತನ್ನ ಅಭ್ಯರ್ಥಿ ವಿವಿ ಗಿರಿಯವರನ್ನು ನಿಲ್ಲಿಸಿ, ಅವರು ಗೆದ್ದು ಬರುವಂತೆ ನೋಡಿಕೊಂಡರು. ಇದರ ಪರಿಣಾಮವಾಗಿ ಕಾಂಗ್ರೆಸ್ ಸಂಸ್ಥೆ ಒಡೆದು ಸಂಸ್ಥಾ ಕಾಂಗ್ರೆಸ್, ಇಂದಿರಾ ಕಾಂಗ್ರೆಸ್‌ಗಳಾಗಿ ಇಬ್ಭಾಗವಾಯಿತು.

ಇಂದಿರಾಗಾಂಧಿ ಚುನಾವಣೆಯಲ್ಲಿ ಭ್ರಷ್ಟಾಚಾರ ಎಸಗಿದ್ದಾರೆಂದು ನ್ಯಾಯಾಲಯ ತೀರ್ಮಾನಿಸಿತು, ಅವರ ಮೇಲೆ ಕೆಲವು ನಿರ್ಬಂಧಗಳನ್ನು ವಿಧಿಸಿತು. ಇಂದಿರಾ ಅವರ ಭ್ರಷ್ಟಾಚಾರದ ವಿರುದ್ಧ ಜಯಪ್ರಕಾಶ್ ನಾರಾಯಣರು ಭಾರತದಾದ್ಯಂತ ಪ್ರವಾಸಮಾಡಿ, ಜನಜಾಗೃತಿ ಮೂಡಿಸಿದರು. ಇಂದಿರಾ ಗಾಂಧಿ ಅವರಿಗೆ ಜನ ತಮ್ಮ ವಿರುದ್ಧ ತಿರುಗಿ ಬೀಳಬಹುದೆಂಬ ಭಯ ಆವರಿಸಿದಂತಾಗಿ ತುರ್ತು ಪರಿಸ್ಥಿತಿ ಘೋಷಿಸಿದರು. ಜಯಪ್ರಕಾಶ್, ಮೊರಾರ್ಜಿ ದೇಸಾಯಿ, ಎಚ್. ಎಂ. ಪಟೇಲ್, ದಂಡವತೆ, ಅಶೋಕ್ ಮೆಹ್ತಾ, ಚಂದ್ರಶೇಖರ್ ಮುಂತಾದವರಲ್ಲದೆ, ಅಂದಿನ ಜನಸಂಘದ ವಾಜಪೇಯಿ, ಅದ್ವಾನಿ ಮುಂತಾದವರನ್ನು ಸೆರೆಮನೆಗೆ ಅಟ್ಟಿದರು. ಸೀತಾರಾಮ ಯೆಚೂರಿ,

ಪ್ರಕಾಶ್ ಕಾರಟ್, ಪಿಣರಾಯಿ ವಿಜಯನ್ ಮುಂತಾದ ಕಮ್ಯುನಿಸ್ಟ್ ಕಾರ್ಯಕರ್ತರನ್ನೂ ಜೈಲಿಗೆ ಹಾಕಲಾಯ್ತು. ಸರ್ವೋದಯ ಕಾರ್ಯಕರ್ತರು, ವಿರೋಧ ಪಕ್ಷಗಳ ಕಾರ್ಯಕರ್ತರು, ಇನ್ನಿತರೆ ಚಳವಳಿಗಾರರನ್ನೊಳಗೊಂಡ ಒಂದು ಲಕ್ಷದಷ್ಟು ಜನರು ಜೈಲು ಪಾಲಾದರು. ತನ್ನ ವಿರುದ್ಧ ದನಿಯೆತ್ತಿದ ಆಡಳಿತಾರೂಡ ಕಾಂಗ್ರೆಸ್ಸಿನ ಸಾವಿರಾರು ಕಾರ್ಯಕರ್ತರನ್ನೂ ಸೆರೆಗೆ ದೂಡಿದರು. ಅನಿರ್ದಿಷ್ಟ ಕಾಲ ಇವರನ್ನೆಲ್ಲ ಸೆರೆಮನೆಯಲ್ಲಿ ಇಡಲಾಯಿತು.

ಜಯಪ್ರಕಾಶ ನಾರಾಯಣರಿಗೆ ಇದ್ದ ಕಾಯಿಲೆಯೇ ಒಂದು. ಅವರಿಗೆ ನೀಡಿದ್ದ ಚಿಕಿತ್ಸೆಯು ಬೇರೊಂದು. ಹೀಗಾಗಿ ಜೆಪಿಯವರ ಆರೋಗ್ಯ ಬಿಗಡಾಯಿಸಿತು. ಜೈಲಿನಲ್ಲಿಯೇ ಕೊನೇ ಉಸಿರೆಳೆಯಬಹುದು ಎಂಬ ಆತಂಕ ಇಂದಿರಾಗಾಂಧಿಯವರನ್ನು ಕಾಡಿತು. ಜನರ ಆಕ್ರೋಶದಿಂದ ಪಾರಾಗಲು ಇಂದಿರಾ ಒಂದು ಸಂಚು ಹೂಡಿದರು. ಜೆಪಿ ಅವರಿಗೆ ಸರ್ಕಾರದ ಸಕಲ ಮರ್ಯಾದೆಗಳೊಂದಿಗೆ ಶವಸಂಸ್ಕಾರ ನಡೆಸಲು ತಯಾರಿ ನಡೆಸಿದರು. 200 ಮಂದಿ ಪೊಲೀಸರು ಖಾದಿಬಟ್ಟೆ ಧರಿಸಿ, ತಲೆಗೊಂದು ಗಾಂಧಿಟೋಪಿ ಹಾಕಿಕೊಂಡು ಶವದ ಮೆರವಣಿಗೆಯಲ್ಲಿ ಮುಂಚೂಣಿಯಲ್ಲಿರಬೇಕು. ಈ ಮೂಲಕ ಜನರಲ್ಲಿ ಕಾಂಗ್ರೆಸ್ಸಿಗರೇ ಶವಯಾತ್ರೆಯನ್ನು ನಡೆಸಿಕೊಡುತ್ತಿದ್ದಾರೆಂಬ ಭಾವನೆ ಮೂಡಿಸುವುದು ಅವರ ಹುನ್ನಾರವಾಗಿತ್ತು.

ಆದರೆ ಇಂದಿರಾ ನಿರೀಕ್ಷಿಸಿದಂತೆ ಜೆಪಿಯವರ ಸಾವು ಆಗ ಆಗಲಿಲ್ಲ. ಮುಂದಿನ ದಿನಗಳಲ್ಲಿ ಜಯಪ್ರಕಾಶರ ಆರೋಗ್ಯ ಮತ್ತಷ್ಟು ಹದಗೆಟ್ಟಿದ್ದರಿಂದ ಜೆಪಿಯವರನ್ನು ಬಂಧನದಿಂದ ಮುಕ್ತಗೊಳಿಸಲಾಯಿತು. ಆದರೆ ಸೆರೆಮನೆಯಲ್ಲಿ ಇದ್ದ ಇತರ ಹೋರಾಟಗಾರರಿಗೆ ಇಂದಿರಾಗಾಂಧಿ ತಮ್ಮನ್ನು ಅನಿರ್ದಿಷ್ಟಕಾಲ

ಸೆರೆಮನೆಯಲ್ಲಿ ಕೊಳೆಸುವರೆಂಬ ಸಂದೇಹ ಮೂಡಿತು. ಪ್ರೊ. ದಂಡವತೆಯವರು ನನಗೆ ಬರೆದ ಕಾರ್ಡಿನಲ್ಲಿ **'we will find our watery grave here in jail'** ಎಂದು ಬರೆದಿದ್ದರು.

ಹೀಗಿದ್ದಾಗ ಇಂದಿರಾ ಗಾಂಧಿಯವರಿಗೆ ಪಾರ್ಲಿಮೆಂಟ್ ಚುನಾವಣೆ ನಡೆಸುವ ವಿಚಾರ ಇದ್ದಕ್ಕಿದ್ದಂತೆ ಹೊಳೆಯಿತು. ವಿರೋಧಿ ನಾಯಕರು ಸೆರೆಮನೆಯಲ್ಲಿರುವುದರಿಂದ ಅವರಿಗೆ ಚುನಾವಣೆ ಸಿದ್ಧತೆ ಮಾಡಿಕೊಳ್ಳಲು ಸಾಕಷ್ಟು ಸಮಯ ಇರುವುದಿಲ್ಲ. ಆದ್ದರಿಂದ ನನ್ನ ಗೆಲುವು ಶತಸ್ಸಿದ್ಧ ಎಂಬುದು ಅವರು ಲೆಕ್ಕಾಚಾರವಾಗಿತ್ತು. ಆದರೆ ದೇಶದ ಮತದಾರರಿಗೆ ಇಂದಿರಾಗಾಂಧಿ ಅವರ ದಬ್ಬಾಳಿಕೆ ಜಿಗುಪ್ಸೆ ಉಂಟುಮಾಡಿತ್ತು. ಮತದಾನ ಮಾಡುವಾಗ ಮತದಾರರೆಲ್ಲ ತಮ್ಮ ಸೇಡು ತೀರಿಸಿಕೊಂಡರು. ಮತದಾರರೆಲ್ಲ ಇಂದಿರಾಗಾಂಧಿಯ ವಿರೋಧವಾಗಿ ಮತ ಚಲಾಯಿಸಿ ಇಂದಿರಾ ಕಾಂಗ್ರೆಸ್ಸನ್ನು ಪರಾಭವಗೊಳಿಸಿದರು. ಸರ್ವಾಧಿಕಾರಿ ನೀತಿ ಅನುಸರಿಸುವವರನ್ನು ಮತದಾರರು ಹೇಳಹೆಸರಿಲ್ಲದಂತೆ ಪರಾಭವಗೊಳಿಸಬಲ್ಲರು ಎಂಬುದಕ್ಕೆ ಜ್ವಲಂತ ಉದಾಹರಣೆ ಇದು.

ರಾಜಕೀಯ ಲಾಭಕ್ಕಾಗಿ ಸಮಾಜ ಒಡೆಯುವ ಕೆಲಸವನ್ನು ಪಕ್ಷಗಳು ಮಾಡುತ್ತಿದೆ. ಹಿಂದೂಗಳನ್ನು ಒಡೆಯುವ ಕೆಲಸವನ್ನು ಅರೆಸ್ಸೆಸ್, ಭಜರಂಗದಳ, ವಿಶ್ವಹಿಂದೂ ಪರಿಷತ್‌ಗಳಲ್ಲವೇ ಮಾಡುತ್ತಿರುವುದು? 'ಶಿಸ್ತಿಗೆ ನಾನು ಕರೆ ಕೊಟ್ಟರೆ ಸರ್ವಾಧಿಕಾರಿಪಟ್ಟ ಕಟ್ಟುತ್ತಾರೆ' ಎಂದು ತಮ್ಮ ಬಗ್ಗೆ ತಾವೇ ಅನುಕಂಪದ ಮಾತನ್ನಾಡುತ್ತಾರೆ. ಸಂಪುಟದಲ್ಲಿರುವವರ ವರ್ತನೆ ನೋಡಿದರೆ ಗಾಬರಿಯಾಗುತ್ತದೆ. ಜಾತಿ ದ್ವೇಷ ಬೆಳೆಸುವ, ಅವರ ಅಭಿಪ್ರಾಯಗಳನ್ನು ಒಪ್ಪದವರನ್ನು ಅವಾಚ್ಯ ಶಬ್ದಗಳಿಂದ ಟೀಕೆ ಮಾಡುವ, ಸಮಾಜದ ಸ್ವಾಸ್ಥ್ಯ

ಕೆಡಿಸುವವರನ್ನು ಪ್ರೋತ್ಸಾಹಿಸುವ-ಇಂಥವರೇ ಶಿಸ್ತಿನ ಪಾಠ ಕಲಿತವರು. ಅವರಿಗೆ ಅಧಿಕಾರ ನೀಡಿ, ಸಂಬಳ ಸವಲತ್ತು ಭತ್ಯೆ ಇತ್ಯಾದಿ ನೀಡುತ್ತಿರುವುದು ಇಂಥಾ ಕೆಲಸಗಳಿಗಾಗಿಯೇ? ಶಿಸ್ತು ಬೆಳೆಸುವುದು ಎಂದರೆ ಇದೇನಾ?

ಯುದ್ಧ ವಿಮಾನಗಳನ್ನು ಕೊಳ್ಳುವ ವಿಚಾರದಲ್ಲಿ ಫ್ರಾನ್ಸ್ ಸರ್ಕಾರದೊಂದಿಗೆ ಗುಟ್ಟಾಗಿ ಒಪ್ಪಂದ ಮಾಡಿಕೊಂಡು ಕೋಟ್ಯಾಧಿಪತಿ ಅಂಬಾನಿಗೆ ಸಾವಿರಾರು ಕೋಟಿ ಹರಿದು ಹೋಗುವಂತೆ ಮಾಡಿದ ಆರೋಪ ಹೊತ್ತಿರುವವರು ಸ್ವತಃ ಪಾರ್ಲಿಮೆಂಟನ್ನು ಕಡೆಗಣಿಸಿದ್ದು ಹಾಗಿರಲಿ, ಕ್ಯಾಬಿನೆಟ್‌ನ್ನೂ ಕಡೆಗಣಿಸಿದ್ದು ಎಷ್ಟು ಸರಿ? HALಗೆ ದೊರಕಬೇಕಾಗಿದ್ದ ಗುತ್ತಿಗೆ ಅಂಬಾನಿಗೆ ದೊರಕಿದ್ದಾದರೂ ಹೇಗೆ?

ನಿರುದ್ಯೋಗ ಸಮಸ್ಯೆ ಮತ್ತಷ್ಟು ಬಿಗಡಾಯಿಸುವಂತೆ ಮಾಡಿದ, ಅದೇ ವೇಳೆಯಲ್ಲಿ ಭ್ರಷ್ಟರು, ಕಳ್ಳಸಾಗಾಣಿಕೆದಾರರು, ಕೋಟ್ಯಾಧಿಪತಿಗಳು ತಮ್ಮಲ್ಲಿದ್ದ ಕಪ್ಪು ಹಣವನ್ನು ಬಿಳಿಯದಾಗಿ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟ ನೋಟು ರದ್ದತಿ ಎಷ್ಟು ಸಮಂಜಸ?

ಹಾದಿಬೀದಿಯಲ್ಲಿ ಜನರನ್ನು ಥಳಿಸಿ ಕೊಲ್ಲಲಾಗುತ್ತಿದೆ. ಇದ್ಯಾವುದರ ಬಗ್ಗೆಯೂ ಒಂದು ಚಕಾರ ಶಬ್ದ ಎತ್ತದೆ, ಹಿಂಸಾಚಾರಕ್ಕೆ ಪರೋಕ್ಷ ಬೆಂಬಲ ನೀಡಲಾಗುತ್ತಿದೆ. ದಲಿತರ, ರೈತರ, ಆದಿವಾಸಿಗಳ ಪರವಾಗಿ ಹೋರಾಡುತ್ತಿರುವವರನ್ನು, ತಮ್ಮ ದುರಾಡಳಿತವನ್ನು ಪ್ರಶ್ನಿಸುತ್ತಿರುವವರನ್ನು ಸುಳ್ಳುಕೇಸುಗಳನ್ನು ಹಾಕಿ ಜೈಲಿಗಟ್ಟುವ ಇಂದಿರಾ ಗಾಂಧಿಯ ಚಾಳಿಯನ್ನೇ ಅವರು ಅನುಸರಿಸುತ್ತಿದ್ದಾರೆ. ಈ ಎಲ್ಲ ಅಧಿಕಾರದ ಅಕ್ರಮಗಳ ಹಿಂದೆ ಭಾರೀ ಸಂಘಟಿತ ಶಕ್ತಿಯೊಂದು ಕೆಲಸ ಮಾಡುತ್ತಿದೆ. ಇದೂ ಸಹಾ ಒಂದರ್ಥದಲ್ಲಿ ಸರ್ವಾಧಿಕಾರವೇ. ಒಬ್ಬ ವ್ಯಕ್ತಿ ನಿರಂಕುಶವಾಗಿ ಅಧಿಕಾರ ಚಲಾಯಿಸುವುದು ಮಾತ್ರ

ಸರ್ವಾಧಿಕಾರವಾಗುವುದಿಲ್ಲ, ಭಿನ್ನ ಚಿಂತಕರ ದ್ವೇಷಿಸುತ್ತಾ ತಮ್ಮ ವಿಚಾರಗಳನ್ನಷ್ಟೇ ಪ್ರತಿಷ್ಠಾಪಿಸಲು ಒಟ್ಟುಗೂಡುವ ಚಿಂತನೆಗಳ ಸಮೂಹವೂ ಸರ್ವಾಧಿಕಾರಿ ಎನಿಸಿಕೊಳ್ಳುತ್ತದೆ. ಅಂತಹ ಸಮೂಹ ಸರ್ವಾಧಿಕಾರಕ್ಕೆ ಮುಖವಾಣಿಯಾಗುವುದು ದೇಶದ ವಿದ್ಯಮಾನಗಳಿಂದ ಸಾಬೀತಾಗುತ್ತದೆ. ಸರ್ವಾಧಿಕಾರಿಗಳಿಗೆ ಇತಿಹಾಸ ಕೊಟ್ಟ ಉತ್ತರವನ್ನು ಮರೆತಂತೆ ಕಾಣುತ್ತದೆ.

ಯುವ ನಾಯಕತ್ವದಲ್ಲಿ ಹೊಸ ಮನ್ವಂತರ ಹುಟ್ಟಿಕೊಳ್ಳಲಿ

'ನನ್ನ ರಾಷ್ಟ್ರಭಕ್ತಿ ಪ್ರಜೆಗಳನ್ನು ಪ್ರತ್ಯೇಕಗೊಳಿಸುವಂಥದ್ದಲ್ಲ; ಪರಸ್ಪರರನ್ನು ಒಗ್ಗೂಡಿಸುವಂಥದು. ನಮ್ಮ ಆದರ್ಶ ಉದಾರವಂತವಾದುದು-ವಸುದೈವ ಕುಟುಂಬಕಂ ಎಂಬ ಪರಂಪರೆ ನಮ್ಮದು. ನಾನಾ ಧರ್ಮದವರು ಭಾರತದಲ್ಲಿ ಸಂಪೂರ್ಣ ಸಹಕಾರದಿಂದ ಸ್ನೇಹದಿಂದ ಬಾಳುತ್ತಾರೆ ಎಂದರು ಗಾಂಧೀಜಿ'. ದೇಶಪ್ರೇಮ, ಧಾರ್ಮಿಕತೆ ಹಾಗೂ ಪರಂಪರೆಗಳ ಬಗ್ಗೆ ಗಾಂಧೀಜಿಯವರ ದೃಷ್ಟಿಕೋನ ಹೀಗಿತ್ತು. ಬ್ರಿಟಿಷರನ್ನು ಓಡಿಸಿ ಸ್ವರಾಜ್ಯ ಸ್ಥಾಪನೆಗಾಗಿ ಜೀವನವನ್ನೇ ಮುಡಿಪಾಗಿಟ್ಟ ಆ ಮಹಾತ್ಮನ ವಿಚಾರಗಳನ್ನು ಈಗಿನ ಪೀಳಿಗೆಗೆ ತಲುಪಿಸುವಲ್ಲಿ ನಾವು ವಿಫಲರಾಗಿದ್ದೇವೆ. ಬದಲಿಗೆ, ರಾಷ್ಟ್ರಭಕ್ತಿಯ ಪರಿಕಲ್ಪನೆಯನ್ನೇ ವಿಕೃತಗೊಳಿಸಿ ಇಂದಿನ ಯುವ ಪೀಳಿಗೆಯನ್ನು ದಿಕ್ಕು ತಪ್ಪಿಸುವ ಹೀನಕಾರ್ಯ ಎಗ್ಗಿಲ್ಲದೆ ಸಾಗಿದೆ.

'ಸ್ವರಾಜ್ಯ ಎಂದರೆ ಯಾವುದೇ ಒಂದು ಧರ್ಮದ ರಾಷ್ಟ್ರವಲ್ಲ; ಹಿಂದೂಗಳ ರಾಷ್ಟ್ರವೂ ಅಲ್ಲ. ತಮ್ಮ ಸ್ವಾರ್ಥ ಸಾಧನೆಗಾಗಿ 'ಹಿಂದೂ ರಾಷ್ಟ್ರ' ಸ್ಥಾಪಿಸಬೇಕೆನ್ನುವ ಕುಪ್ರಯತ್ನಗಳು ನಡೆಯುತ್ತಿವೆ. ನನ್ನ ಶಕ್ತಿಯನ್ನೆಲ್ಲ ಬಳಸಿ ಇದರ ವಿರುದ್ಧ ಹೋರಾಡುತ್ತೇನೆ. ಅಧಿಕಾರದ ಅಮಲಿನಲ್ಲಿ ಅಲ್ಪಸಂಖ್ಯಾತರನ್ನು ತುಳಿದುಹಾಕಿ ಹಿಂದೂ ರಾಷ್ಟ್ರವನ್ನು ಸ್ಥಾಪಿಸುವುದಾದರೆ ಅದು ಹಿಂದೂ ಧರ್ಮಕ್ಕೆ ದ್ರೋಹ ಬಗೆದಂತೆ. ಅದು ಹಾನಿಕಾರಕವೂ ಹೌದು' ಎಂದು ಗಾಂಧೀಜಿ ಸ್ಪಷ್ಟವಾಗಿ ಹೇಳಿದ್ದರು. ಆಗ ಹಿಂದು ದೇವಾಲಯಗಳಿಗೆ ಹರಿಜನರು ಬರುವಂತಿರಲಿಲ್ಲ. ಬಂದರೆ ಅವರನ್ನು ಸನಾತನಿಗಳು ಬರ್ಬರವಾಗಿ ನಡೆಸಿಕೊಳ್ಳುತ್ತಿದ್ದರು. 'ಹಿಂದುಗಳು ತಮ್ಮ ಇಂಥಾ ವರ್ತನೆಗಾಗಿ

ಪಶ್ಚಾತ್ತಾಪಪಡಬೇಕು' ಎಂದರು ಗಾಂಧೀಜಿ. ಹರಿಜನರಿಗೆ ದೇವಾಲಯಕ್ಕೆ ಪ್ರವೇಶದ ಹಕ್ಕನ್ನು ನೀಡಬೇಕೆಂದು ಹಿಂದುಗಳಲ್ಲಿ ವಿನಂತಿಸಿಕೊಂಡರು. ಸನಾತನಿಗಳು ಗಾಂಧಿ ಅವರ ನಿಲುವನ್ನು ಅಲ್ಲಗಳೆದರು. ಆಗ ಗಾಂಧೀಜಿ ಹರಿಜನರಿಗೆ ದೇವಾಲಯ ಪ್ರವೇಶಿಸಲು ಅವಕಾಶ ಮಾಡಿಕೊಡಬೇಕೆಂದು ಉಪವಾಸ ಸತ್ಯಾಗ್ರಹ ಆರಂಭಿಸಿದರು. ಹಳ್ಳಿಹಳ್ಳಿಗೂ ಗಾಂಧೀಜಿಯ ಉಪವಾಸದ ಸುದ್ದಿ ಕಾಳ್ಗಿಚ್ಚಿನಂತೆ ಮುಟ್ಟಿತು. ಗಾಂಧೀಜಿ ಅವರ ಉಪವಾಸ 21 ದಿನ ನಡೆಯಿತು. ಉಪವಾಸ ಮುಕ್ತಾಯಕ್ಕೆ ಮೊದಲೇ ಅನೇಕ ಕಡೆ ಹರಿಜನರ ದೇವಾಲಯ ಪ್ರವೇಶಕ್ಕೆ ಜನರು ಅವಕಾಶ ಮಾಡಿಕೊಟ್ಟರು. ನೈಜ ಸ್ವಾತಂತ್ರ್ಯ ಹಾಗೂ ಪ್ರಜಾತಂತ್ರವನ್ನು ನೆಲೆಗೊಳಿಸುವ ಅವರ ದೃಢ ಹೋರಾಟ ಮುಂದುವರಿಯುತ್ತಿದ್ದಂತೆಯೇ ಗಾಂಧೀಜಿ ಮತಾಂಧನ ಗುಂಡಿಗೆ ಬಲಿಯಾದರು. ಅದೇ ಹಂತಕ ಶಕ್ತಿಗಳು ಇಂದು ಮತ್ತಷ್ಟು ಬಲಿಷ್ಠವಾಗಿವೆ. ಎಲ್ಲೆಡೆ ಅಧರ್ಮ ತಾಂಡವವಾಡುತ್ತಿದೆ. ಹೀಗಾಗಿ ಇಂದು ನಾವು ಒಂದು ಧರ್ಮಯುದ್ಧ ಕೈಗೊಳ್ಳಬೇಕಿದೆ.

'ರಾಷ್ಟ್ರೀಯವಾದವು ದ್ವೇಷವನ್ನು ಪ್ರಚೋದಿಸಬೇಕಾದ ಅಗತ್ಯವಿಲ್ಲ. ಜನಾಂಗೀಯ ದ್ವೇಷ ಎಂಬುದು ರಾಷ್ಟ್ರೀಯವಾದದ ನಿಜವಾದ ಚೈತನ್ಯವನ್ನೇ ಕೊಂದುಹಾಕುತ್ತದೆ' ಎಂಬ ಗಾಂಧಿಯವರ ಮಾತು ಇಂದು ನಮಗೆ ಪ್ರೇರಣೆಯಾಗಬೇಕು. ಜಾತಿ, ಧರ್ಮ, ಭ್ರಷ್ಟ ಹಣ–ಇವುಗಳು ಇಂದಿನ ರಾಜಕೀಯದ ಗೆಲುವಿನ ಸಾಧನಗಳಾಗಿಬಿಟ್ಟಿವೆ. ಮತದಾರರೂ ಇವುಗಳ ಪ್ರಭಾವಕ್ಕೆ ಮಣಿದು ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುತ್ತಿದ್ದಾರೆ. ಇಂದಿನ ಈ ದುಸ್ಥಿತಿಯಿಂದ ನಮ್ಮ ಜನ ಹೊರಬರಬೇಕು. ಅಧಿಕಾರದ ಅಮಲಿನ ರಾಜಕಾರಣವನ್ನು ವಿರೋಧಿಸುವುದು ನಮ್ಮ ಉದ್ದೇಶವಾಗಬೇಕು. ದ್ವೇಷ, ಅಸಭ್ಯ ವರ್ತನೆ ಬೇಡವೇ ಬೇಡ.

ಸಮಾಜದಲ್ಲಿ ದ್ವೇಷ, ಅಶಾಂತಿಗಳನ್ನು ಸೃಷ್ಟಿಸುವ ಮೂಲಕವೇ ಗದ್ದುಗೆ ಹಿಡಿದಿರುವ ಅಧಿಕಾರ ಉಳಿಸಿಕೊಳ್ಳಲು ದುರ್ಮಾರ್ಗದಲ್ಲೇ

ನಡೆಯುವ ಲಕ್ಷಣಗಳು ನಿಚ್ಚಳವಾಗಿವೆ. ಜನರ ನಿಜವಾದ ಪ್ರಗತಿಯನ್ನು ತಮ್ಮ ಆಡಳಿತ ವೈಖರಿಯಾಗಿಸಿಕೊಳ್ಳದವರು ಧರ್ಮ, ದ್ವೇಷಗಳ ಆಧಾರದಲ್ಲಿ ಗೆಲ್ಲಲು ಹವಣಿಸುತ್ತಾರೆ. ಅಂಥವರು ಸಾಕಷ್ಟು ಕೀಳು ಹುನ್ನಾರಗಳನ್ನೂ ನಡೆಸುತ್ತಾರೆ. ನಿಮಗೆ ನೆನಪಿರಬಹುದು 2002–2012ರ ಅವಧಿಯಲ್ಲಿ ಮೋದಿ ಅವರು ಗುಜರಾತಿನ ಮುಖ್ಯಮಂತ್ರಿಯಾಗಿದ್ದರು. ಆಗೊಮ್ಮೆ ಚುನಾವಣೆ ಹತ್ತಿರ ಬರುತ್ತಿದ್ದಂತೆ ಅವರ ಹತ್ಯೆಗೆ ಪ್ರಯತ್ನ ನಡೆಯುತ್ತಿದೆ ಎಂದು ಗುಜರಾತ್ ಪೊಲೀಸರ ಮೂಲಕ ಸುಳ್ಳು ಸುದ್ದಿಯ ಪ್ರಚುರಪಡಿಸಲಾಗಿತ್ತು. ಆ ಚುನಾವಣೆಯಲ್ಲಿ ಗೆದ್ದರು ಕೂಡಾ. ಇಂಥದೇ ಆರೋಪದ ಮೇಲೆ ಟೀಕಾಕಾರರನ್ನು, ಸಾಮಾಜಿಕ ಕಾರ್ಯಕರ್ತರನ್ನು ಜೈಲಿಗೆ ತಳ್ಳಲಾಗುತ್ತಿದೆ.

ಆದಾಗ್ಯೂ ಕ್ಲಿಷ್ಟ ಸಂದರ್ಭದಲ್ಲಿ ಯುವ ನಾಯಕರು ಜನಮಾನಸದಲ್ಲಿ ನಾಯಕರಾಗಿ ಮೂಡಿಬರುತ್ತಾರೆ. ಇಂತಹ ಯುವ ನಾಯಕತ್ವದ ಮೂಲಕ ಹೊಸ ಮನ್ವಂತರ ಹುಟ್ಟಿಕೊಳ್ಳಲಿದೆ. ಅವರ ಜೊತೆಗೆ ನಾವೆಲ್ಲ ಕೈ ಜೋಡಿಸಬೇಕಿದೆ. ವಿರೋಧ ಪಕ್ಷಗಳೂ ಕೂಡ ದುರಾಡಳಿತವನ್ನು ಕೊನೆಗೊಳಿಸಲು ಒಂದುಗೂಡಿದರೆ ದುಷ್ಟ ಆಡಳಿತವನ್ನು ತೊಲಗಿಸುವುದು ಕಷ್ಟದ ಕೆಲಸವಲ್ಲ.

ಕರ್ನಾಟಕದ ಯುವಕ ಯುವತಿಯರೂ ಇದೇ ಗುರಿ ಸಾಧನೆಗಾಗಿ ಸಂಘಟನೆ ಕಟ್ಟುತ್ತಿದ್ದಾರೆ. ಯುವನಾಯಕರು ವಿಚಾರ ಕ್ರಾಂತಿಯ ಮೂಲಕ ಶೋಷಣೆರಹಿತ ಧರ್ಮ–ನಿರಪೇಕ್ಷ, ಭ್ರಷ್ಟಾಚಾರಮುಕ್ತ ಸರ್ವಸಮಾನತೆಯ ಸಮಾಜ ಒಂದನ್ನು ಕಟ್ಟುವ ಸಂಕಲ್ಪ ಮಾಡಲಿ ಎಂದು ಹಾರೈಸುತ್ತೇನೆ.

ನಾಸ್ತಿಕ ಗೋ. ರಾಮಚಂದ್ರರಾಯರು ಮತ್ತು ಗಾಂಧೀಜಿ

ಗೋ. ರಾಮಚಂದ್ರರಾಯರು ನಾಸ್ತಿಕರು. ಅವರು ಸಸ್ಯಶಾಸ್ತ್ರ ಎಂಎಸ್ಸಿ ಪದವೀಧರರೂ ಹೌದು. ನಾಲ್ಕಾರು ಕಾಲೇಜುಗಳಲ್ಲಿ ಅಧ್ಯಾಪಕರಾಗಿದ್ದವರು. ಬ್ರಾಹ್ಮಣರಾಗಿದ್ದ ಗೋರಾಸರಸ್ವತಿ ಎಂಬ ಹರಿಜನ ಮಹಿಳೆಯನ್ನು ಮದುವೆಯಾದರು. ವಿಜಯವಾಡ ಹತ್ತಿರದ ಪಟನುಟಾ ಎಂಬ ಹಳ್ಳಿಯಲ್ಲಿ ಆಶ್ರಮವನ್ನು ಕಟ್ಟಿ ಅಲ್ಲಿಯೆ ಸಂಸಾರ ಸಮೇತ ವಾಸವಿದ್ದರು. ಗೋರಾ ಹೆಚ್ಚು ಸಮಯವನ್ನು ನಾಸ್ತಿಕ ಚಳವಳಿ, ಮುಖ್ಯಮಂತ್ರಿಗಳು ಮತ್ತು ಪ್ರಧಾನಿಗಳು ನಡೆಸುವ ವೈಭವೋಪೇತ ಜೀವನವನ್ನು ಕೈಬಿಡುವಂತೆ ಜನಾಭಿಪ್ರಾಯ ಮೂಡಿಸುವ ಚಳವಳಿಗಳು, ಅಸ್ಪೃಶ್ಯತಾ ನಿವಾರಣೆ ಮುಂತಾದವುಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಅಸ್ಪೃಶ್ಯರೊಡನೆ ಸಹಭೋಜನ, ಮಾಂಸಾಹಾರ ಸೇವಿಸುವ ಸಮಾರಂಭಗಳಲ್ಲಿ ನಿರತರಾಗಿರುತ್ತಿದ್ದರು.

ಅವರಿಗೆ ಇಬ್ಬರು ಗಂಡು ಮಕ್ಕಳು, ಒಬ್ಬ ಮಗಳು, ಗಾಂಧೀಜಿ ಅವರ ಉಪ್ಪಿನ ಸತ್ಯಾಗ್ರಹದ ನೆನಪಿಗಾಗಿ, ಹುಟ್ಟಿದ ಮೊದಲನೇ ಮಗನಿಗೆ ಲವಣಂ ಎಂದು. ಎರಡನೇ ಮಹಾಯುದ್ಧದ ಸಮಯದಲ್ಲಿ ಹುಟ್ಟಿದ ಎರಡನೆಯ ಮಗನಿಗೆ 'ಸಮರಂ' ಎಂದು. ಸಂತ ವಿನೋಬಾರವರ ಭೂದಾನ ಯಜ್ಞ ಚಳವಳಿಯ ಕಾಲಕ್ಕೆ ಹುಟ್ಟಿದ ಮಗಳಿಗೆ 'ಭೂಕ್ರಾಂತಿ' ಎಂದು ಹೆಸರನ್ನಿಟ್ಟರು.

ಎನ್. ಸಂಜೀವರೆಡ್ಡಿಯವರು ಆಂಧ್ರ ಪ್ರದೇಶದ ಮುಖ್ಯಮಂತ್ರಿ ಆಗಿದ್ದಾಗ ಅವರ ಸರ್ಕಾರಿ ನಿವಾಸದ ಮುಂದೆ ಗೋರಾ ಅವರು ಅನಿರ್ದಿಷ್ಟ ಕಾಲದ ಸತ್ಯಾಗ್ರಹವನ್ನು ಹಮ್ಮಿಕೊಂಡಿದ್ದರು. ಮುಖ್ಯಮಂತ್ರಿಗಳಾದವರು ಸಾಮಾನ್ಯ ಜನರಂತೆ ಸರಳ ಜೀವನ

ನಡೆಸಬೇಕು. ಅದು ಬಿಟ್ಟು ಸರ್ಕಾರಿ ಮಹಲಿನಲ್ಲಿದ್ದುಕೊಂಡು, ವೈಭವದ ಜೀವನ ನಡೆಸುವುದು ಅಸಭ್ಯತೆ. ಕೂಡಲೇ ಸರ್ಕಾರಿ ಬಂಗಲೆಯನ್ನು ಖಾಲಿ ಮಾಡಿ, ನಿಜವಾದ ಜನಪ್ರತಿನಿಧಿಯಂತೆ ನಡೆದುಕೊಳ್ಳಿ ಎಂಬ ಬೇಡಿಕೆ ಇಟ್ಟರು. ಸಂಜೀವ ರೆಡ್ಡಿಯವರು ಗೋರಾರವರ ಬೇಡಿಕೆಯನ್ನು ಈಡೇರಿಸುವುದಾಗಿ ಮಾತು ಕೊಟ್ಟರಾದರೂ, ಕೊಟ್ಟ ಮಾತಿನಂತೆ ನಡೆದುಕೊಳ್ಳಲಿಲ್ಲ.

ನಾಸ್ತಿಕರಾದ ರಾಮಚಂದ್ರರಾಯರು ಮಹಾತ್ಮ ಗಾಂಧಿಯವರನ್ನು ಕಂಡು ಅವರೊಡನೆ ನಾಸ್ತಿಕವಾದದ ಬಗ್ಗೆ ಚರ್ಚಿಸಲು ಅವರ ಆಶ್ರಮಕ್ಕೆ ಹೋದರು. ಗಾಂಧೀಜಿ ಅವರನ್ನು ಆಶ್ರಮದಲ್ಲಿ ಉಳಿಸಿಕೊಂಡು ಆಸ್ತಿಕತೆ-ನಾಸ್ತಿಕತೆಗಳ ಬಗೆಗೆ ಸುದೀರ್ಘ ಚರ್ಚೆ ನಡೆಸಿದರು. ಗಾಂಧೀಜಿ ಕೊನೆಗೆ ಗೋರಾಗೆ ಹೇಳಿದ ಮಾತು "ನಾನು ಆಸ್ತಿಕ. ನನಗೆ ದೇವರ ಇರುವಿನ ಬಗೆಗೆ ನಂಬಿಕೆ, ಶ್ರದ್ಧೆ ಎರಡೂ ಇದೆ. ನನ್ನ ಜೀವನದಲ್ಲಿ ಅನೇಕ ಸಾರಿ ಮುಂದಿನ ದಾರಿ ತೋರದ ಸನ್ನಿವೇಶ ಒದಗಿಬಂದಿದೆ. ದಾರಿ ತೋರಲು ಅನನ್ಯ ಭಕ್ತಿಯಿಂದ ಅಂತಹ ಸಂದರ್ಭಗಳಲ್ಲಿ ಭಗವಂತನಲ್ಲಿ ಮೊರೆಹೋಗಿ ಶರಣಾಗತನಾಗಿದ್ದೇನೆ. ಅವನು ಅಂತಹ ಸಂಕಟಮಯ ಸಂದರ್ಭದಲ್ಲಿ ನನ್ನ ನೆರವಿಗೆ ಬಂದಿದ್ದಾನೆ. ಅದನ್ನು ನಾನು 'inner voice' ಎಂದು ಗುರುತಿಸಿದ್ದೇನೆ. ಈ 'inner voice' ಆ ಸಂಕಟಮಯ ಪರಿಸ್ಥಿತಿಯಲ್ಲಿ ಮಾರ್ಗದರ್ಶನ ಮಾಡಿದೆ."

'ರಾಮಚಂದ್ರರವರೇ, ನೀವು ದೇವರನ್ನು ನಂಬುವವರಲ್ಲ. ಎಲ್ಲಾ ಜವಾಬ್ದಾರಿಯನ್ನೂ ನೀವೇ ವಹಿಸಿಕೊಂಡು ನಿಮ್ಮ ಸಂಕಟಮಯ ಸಂದರ್ಭಗಳನ್ನು ನೀವೇ ನಿರ್ವಹಿಸಿಕೊಳ್ಳುತ್ತೀರಿ. ಈ ದೃಷ್ಟಿಯಿಂದ ನೀವು ನನಗಿಂತ ಒಂದು ಹೆಜ್ಜೆ ಮುಂದೆ ಇರುವವರು. ನಾನು ಅಂತಹ ಸಂಕಟ ಪರಿಸ್ಥಿತಿಯಲ್ಲಿ ಅಸಹಾಯಕನಾಗಿ ಅನ್ಯಥಾ ಶರಣಂ ನಾಸ್ತಿ ಎಂದು ದೇವರಿಗೆ ಮುಗಿಬೀಳುತ್ತೇನೆ. ಅವನು ನನಗೆ ಮಾರ್ಗದರ್ಶನ ಮಾಡುತ್ತಾನೆ' ರಾಮಚಂದ್ರರಾಯರು ಗಾಂಧಿಯವರ

ಆಶ್ರಮದಲ್ಲಿದ್ದುಕೊಂಡು 'An atheist with Gandhi' ಎಂಬ ಕಿರುಹೊತ್ತಿಗೆ ಬರೆದಿದ್ದಾರೆ. ಅದನ್ನು ಗಾಂಧಿಯವರು ಸ್ಥಾಪಿಸಿದ 'Navajeevan Publication' ಹೊರತಂದಿದೆ.

ರಾಮಚಂದ್ರರಾಯರಿಗೆ ರಾಜಕೀಯ ಪಕ್ಷಗಳ ಹಾವಳಿ ತುಂಬ ಬೇಸರ ತಂದಿತು. ಅವರಿಗೆ ನನ್ನಂತಹ ಗಾಂಧಿ ಮಾರ್ಗಿಗಳನ್ನು ಕಟ್ಟಿಕೊಂಡು ದೆಹಲಿಗೆ ಕಾಲ್ನಡಿಗೆಯಲ್ಲಿ ಹೋಗಿ ಪಾರ್ಲಿಮೆಂಟ್ ಭವನದ ಮುಂದೆ ಧರಣಿ ಮಾಡಬೇಕೆಂಬ ಆಸೆ ಇತ್ತು. ಇದಕ್ಕಾಗಿ ಸಕಲ ಸಿದ್ಧತೆಯನ್ನೂ ಅವರು ಮಾಡಿಕೊಂಡಿದ್ದರು. ಎಲ್ಲ ರಾಜಕೀಯ ಪಕ್ಷಗಳ ಬಾವುಟಗಳನ್ನೂ ಒಟ್ಟುಗೂಡಿಸಿ ಅವುಗಳನ್ನು ಒಂದು ದಂಡಕ್ಕೆ ಬಿಗಿದು ಕಟ್ಟಿ ಕೊಂಡೊಯ್ಯಬೇಕೆಂದು ಯೋಚಿಸಿದ್ದರು. ಪಕ್ಷ ರಾಜಕೀಯ ತೊಲಗಲಿ. ನಿಜವಾದ ಪ್ರಜಾರಾಜ್ಯ ಸ್ಥಾಪನೆಯಾಗಲಿ ಎಂಬ ಘೋಷಣೆಯೊಂದಿಗೆ ಪಾದಯಾತ್ರೆ ಆರಂಭಗೊಳಿಸುವುದೆಂದು ತೀರ್ಮಾನ ತೆಗೆದುಕೊಂಡಿದ್ದರು. ಆದರೆ ಆಕಸ್ಮಿಕವಾಗಿ ಅವರಿಗೆ ಹೃದಯಾಘಾತವಾಗಿ ಸಾವನ್ನಪ್ಪಿದರು. ಅವರ ಕನಸು ನನಸಾಗದೆ ಉಳಿಯಿತು.

ಗೋರಾ ಮೊದಲನೆಯ ಅಂತರರಾಷ್ಟ್ರೀಯ ನಾಸ್ತಿಕ ಸಮ್ಮೇಳನವನ್ನು ಬೆಜವಾಡದಲ್ಲಿ ನೆರವೇರಿಸಿದರು. ದೇಶ-ವಿದೇಶಗಳಿಂದ ನಾಸ್ತಿಕ ಪ್ರತಿನಿಧಿಗಳು ಈ ಸಮ್ಮೇಳನಕ್ಕೆ ಬಂದಿದ್ದರು. ಅವರು ಜೀವಂತ ಇದ್ದಾಗಲೇ ಎರಡು ಅಂತರರಾಷ್ಟ್ರೀಯ ನಾಸ್ತಿಕ ಸಮ್ಮೇಳನಗಳು ಯುರೋಪಿಯನ್ ರಾಷ್ಟ್ರಗಳಲ್ಲಿ ನಡೆದವು. ಈಗ ಅವರ ಮಗ ಡಾ. ಲವಣಂ ಈ ಜವಾಬ್ದಾರಿಯನ್ನು ಹೊತ್ತು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.

ಗಾಂಧೀಜಿ ಅವರ ದೃಷ್ಟಿಯಲ್ಲಿ ಸುಭಾಷ್‌ಚಂದ್ರ ಬೋಸ್

ಹಿರಿಯ ಪತ್ರಕರ್ತ ಬಿ. ಎಂ. ಹನೀಫ್ ಅವರು ಸುಭಾಷ್‌ಚಂದ್ರ ಬೋಸ್ ಅವರ ಕುರಿತು ಬರೆದಿರುವ ಪುಸ್ತಕಕ್ಕೆ ಮುನ್ನುಡಿಯ ರೂಪದಲ್ಲಿ ನಾಲ್ಕು ಮಾತುಗಳನ್ನು ಬರೆಯುವುದಕ್ಕೆ ನನಗೆ ತುಂಬ ಸಂತೋಷವಾಗುತ್ತದೆ. ಇತಿಹಾಸವನ್ನು ವಿಕೃತಗೊಳಿಸುವ ಬರವಣಿಗೆಗಳು ಹೆಚ್ಚುತ್ತಿರುವ ಈ ದಿನಗಳಲ್ಲಿ ನಮ್ಮ ಹೆಮ್ಮೆಯ ರಾಷ್ಟ್ರೀಯ ನಾಯಕರ ಕುರಿತ ವಸ್ತುನಿಷ್ಠ ಬರವಣಿಗೆಗಳು ಹೆಚ್ಚಬೇಕು. ತನ್ಮೂಲಕ ಇತಿಹಾಸದ ಸಮದೃಷ್ಟಿಯ ಅವಲೋಕನ ಸಾಧ್ಯವಾಗಬೇಕು. ಈ ನಿಟ್ಟಿನಲ್ಲಿ ಈ ಪುಸ್ತಕ ಮಹತ್ವದ್ದು ಎನ್ನುವುದು ನನ್ನ ಭಾವನೆ.

ಸುಭಾಷ್‌ಚಂದ್ರ ಬೋಸ್ ಅವರದ್ದು ತಾರುಣ್ಯದ ಹುರುಪು. ಅವರ ಮತ್ತು ಮಹಾತ್ಮ ಗಾಂಧೀಜಿಯವರ ಮಧ್ಯೆ ತಾತ್ವಿಕ ಭಿನ್ನಾಭಿಪ್ರಾಯಗಳೇನೂ ಇರಲಿಲ್ಲ. ಭಿನ್ನಮತ ಏನಿದ್ದರೂ ಸ್ವಾತಂತ್ರ್ಯ ಪಡೆಯುವ ವಿಧಾನದ ಬಗ್ಗೆ. ಇವತ್ತು ಕೆಲವರು ಬೊಟ್ಟು ಮಾಡುವ ಹಾಗೆ ಅವರಿಬ್ಬರೂ ಬದ್ಧ ವೈರಿಗಳಾಗಿರಲಿಲ್ಲ. ಸುಭಾಷರು ಬರ್ಲಿನ್‌ನಿಂದ ಮಾಡಿದ ಬಾನುಲಿ ಭಾಷಣಗಳ ಗಾಂಧೀಜಿ ಅವರನ್ನು ರಾಷ್ಟ್ರಪಿತ ಎಂದೇ ಸಂಬೋಧಿಸುತ್ತಾರೆ. ಸುಭಾಷರು ಕಾಂಗ್ರೆಸ್‌ನ ರಾಜಕೀಯ ಗರಡಿಯಲ್ಲೇ ಪಳಗಿದವರು. ಅವರು ಮಹಾತ್ಮ ಗಾಂಧಿ ಅವರ ಬಳಿಗೆ ಬಂದು, 'ದೇಶದ ಜನ ಹೋರಾಟಕ್ಕೆ ಸಿದ್ಧವಾಗಿದ್ದಾರೆ. ನೀವು ಬ್ರಿಟಿಷರ ವಿರುದ್ಧ ಕೂಡಲೆ ತೀವ್ರತರ ಹೋರಾಟಕ್ಕೆ ಕರೆ ನೀಡಬೇಕು' ಎಂದು ಒತ್ತಾಯಿಸಿದಾಗ ಗಾಂಧೀಜಿಯವರು ಸಾವಧಾನದಿಂದಲೇ ಉತ್ತರಿಸುತ್ತಾರೆ. 'ಇದು ಅವಸರ ಮಾಡುವ ವಿಷಯವಲ್ಲ. ನಿನಗೆ ತುಂಬ ಅವಸರವಿದೆ. ನೀನು ನಿನ್ನ ಗುರುಗಳಾದ ಚಿತ್ತರಂಜನದಾಸರ ಬಳಿಗೆ ಹೋಗು. ಅವರು ನಿನಗೆ ಈ ವಿಷಯದಲ್ಲಿ

ಮಾರ್ಗದರ್ಶನ ನೀಡುತ್ತಾರೆ' ಎಂದು ಹೇಳಿ ಚಿತ್ತರಂಜನ್‌ದಾಸರ ಬಳಿಗೆ ಕಳುಹಿಸುತ್ತಾರೆ.

ಕೊಲ್ಕತ್ತಾಗೆ ಹೋದ ಸುಭಾಷರು ಅಲ್ಲಿ ಸ್ವಾತಂತ್ರ್ಯ ಹೋರಾಟದ ಚಳವಳಿಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಸೈಮನ್ ಕಮಿಷನ್ ಬಂದಾಗ ಅದರ ವಿರುದ್ಧ ನಡೆದ ಉಗ್ರ ಪ್ರತಿಭಟನೆಯಲ್ಲಿ ಭಾಗವಹಿಸುತ್ತಾರೆ. ಸುಭಾಷರು ಅತ್ಯಂತ ತುರ್ತಾಗಿ ಉಗ್ರ ಹೋರಾಟ ನಡೆಯಬೇಕೆಂದು ಬಯಸುತ್ತಿದ್ದರು. ಆದರೆ ಗಾಂಧೀಜಿಯವರು ತಮ್ಮ ಅಹಿಂಸಾ ವಿಧಾನವನ್ನು ಬಿಟ್ಟುಕೊಡಲು ತಯಾರಿರಲಿಲ್ಲ. ಜನರಿಗೆ ಅಹಿಂಸಾ ವಿಧಾನದ ಬಗ್ಗೆ ತಿಳುವಳಿಕೆ ನೀಡುತ್ತಲೇ ಹೋರಾಟ ರೂಪಿಸಬೇಕು ಎನ್ನುವುದು ಅವರ ನಿಲುವಾಗಿತ್ತು.

ರಾಷ್ಟ್ರೀಯತೆಯ ಪರಿಕಲ್ಪನೆಯ ವಿಚಾರದಲ್ಲಿ ಗಾಂಧೀಜಿ ಮತ್ತು ಬೋಸ್ ನಡುವೆ ವ್ಯತ್ಯಾಸವೇನೂ ಇರಲಿಲ್ಲ. ಬೋಸರು ಸ್ವಾತಂತ್ರ್ಯ ಹೋರಾಟಕ್ಕಾಗಿ ಸೈನ್ಯ ಕಟ್ಟಿದ್ದನ್ನು ಗಾಂಧೀಜಿ ಅವರು ಎಂದೂ ವಿರೋಧ ಮಾಡಲಿಲ್ಲ. ಆದರೆ ಸಮಾಜದಲ್ಲಿ ಘರ್ಷಣೆಗಳು ಉಂಟಾಗುವುದಕ್ಕೆ ಗಾಂಧೀಜಿ ಅವರ ವಿರೋಧ ಇತ್ತು. ಸುಭಾಷರು ಕಾಂಗ್ರೆಸ್ ಅಧ್ಯಕ್ಷರಾಗಿ ಒಂದಲ್ಲ, ಎರಡು ಸಲ ಆಯ್ಕೆಯಾಗಿ ಬರುತ್ತಾರೆ. ಯುವಕರೆಲ್ಲ ಅವರ ಜೊತೆಗೆ ಇರುತ್ತಾರೆ. ಬ್ರಿಟಿಷರ ವಿರುದ್ಧ ಉಗ್ರ ಚಳವಳಿ ಆರಂಭಿಸಬೇಕು ಎಂದು ಸುಭಾಷರು ಒತ್ತಾಯಿಸುತ್ತಾರೆ. ಆದರೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಯಾರೂ ಅದಕ್ಕೆ ತಯಾರಾಗಿರುವುದಿಲ್ಲ. ಹಾಗಾಗಿ ಗಾಂಧೀಜಿಯವರು ಸುಭಾಷರ ನಿಲುವಿಗೆ ಬೆಂಬಲ ಕೊಡಲು ಆಗಲಿಲ್ಲ. ರಾಜಗೋಪಾಲಾಚಾರಿ ಅವರು ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಹೇಳಿಯೇ ಬಿಟ್ಟರು–'ಸುಭಾಷರ ಜತೆಗೆ ಕೂಡಲು ಆಗುವುದಿಲ್ಲ. ಇವರ ಆತುರಕ್ಕೆ ನಾವು ಹೊಂದಿಕೊಳ್ಳಲು ಆಗುವುದಿಲ್ಲ. ಸುಭಾಷ್ ಅವರದ್ದು ಸೋರುವ ದೋಣಿ, ಈ ಸೋರುವ ದೋಣಿಯಲ್ಲಿ ನಮ್ಮನ್ನು ಕೂಡಿಸಿದ್ದಾರೆ. ಇದು ನಮ್ಮನ್ನು ಮುಳುಗಿಸಿಬಿಡುತ್ತೆ" ಎಂದು.

ಎರಡನೇ ಸಲ ಸುಭಾಷರು ಕಾಂಗ್ರೆಸ್ ಅಧ್ಯಕ್ಷರಾದಾಗಲೂ ಈ ಪ್ರಶ್ನೆ ಬಂತು. ಹಿರಿಯರೆಲ್ಲ–ನಮಗೆ ಈ ವರ್ಕಿಂಗ್ ಕಮಿಟಿಯಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲ, ನೀವು ಬೇಕಿದ್ದರೆ ಬೇರೆ ವರ್ಕಿಂಗ್ ಕಮಿಟಿ ಮಾಡಿಕೊಳ್ಳಿ, ನಮ್ಮನ್ನು ಬಿಡುಗಡೆ ಮಾಡಿ–ಎಂದು ಸುಭಾಷರಿಗೆ ಹೇಳಿದರು. ಹಾಗಾಗಿ ಸುಭಾಷರು ಅಧ್ಯಕ್ಷತೆಗೆ ರಾಜೀನಾಮೆ ಕೊಡಬೇಕಾಗುತ್ತದೆ. ಸ್ವಾತಂತ್ರ್ಯದ ಹೋರಾಟವನ್ನು ತ್ವರಿತವಾಗಿ ಆರಂಭಿಸಬೇಕು ಎನ್ನುವುದು ಸುಭಾಷರ ದೃಷ್ಟಿಯಾದರೆ, ಚಳುವಳಿ ನಿಧಾನವಾಗಿ ಎಲ್ಲ ಜನರನ್ನೂ ಅಹಿಂಸೆಯ ವಿಧಾನಕ್ಕೆ ಒಪ್ಪಿಸಿ ಮಾಡಬೇಕು ಎನ್ನುವುದು ಗಾಂಧೀಜಿಯವರ ನಿಲುವಾಗಿತ್ತು. ಅಷ್ಟೇ ವ್ಯತ್ಯಾಸ. ಇದು ಬಿಟ್ಟರೆ ಅವರಿಗೆ ಪರಸ್ಪರರ ಮೇಲೆ ಯಾವ ದ್ವೇಷವಾಗಲೀ ಇರಲಿಲ್ಲ.

ಇಂಗ್ಲೆಂಡಿನಿಂದ ಭಾರತಕ್ಕೆ ಬಂದ ಬಳಿಕ ಸುಭಾಷರು ಕಾಂಗ್ರೆಸ್ಸಿಗೆ ಸೇರುತ್ತಾರೆ. ಮದ್ರಾಸ್‌ನಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಭಾಗವಹಿಸುತ್ತಾರೆ. ಬ್ರಿಟಿಷರನ್ನು ಇಟ್ಟುಕೊಂಡೇ ನಾವು ಡೊಮಿನಿಯನ್ ಸ್ಟೇಟಸ್ ಪಡೆದುಕೊಂಡು ಆಡಳಿತ ನಡೆಸಬೇಕು ಎನ್ನುವ ನಿರ್ಣಯವದು. ಗಾಂಧೀಜಿ ಮಂಡಿಸುತ್ತಾರೆ; ಅದನ್ನು ಕಾಂಗ್ರೆಸ್ ಅಂಗೀಕರಿಸಿರುತ್ತದೆ. ಸುಭಾಷರು ಅದಕ್ಕೆ ತಿದ್ದುಪಡಿಯನ್ನು ತರುತ್ತಾರೆ. 'ಡೊಮಿನಿಯನ್ ಸ್ಟೇಟಸ್ ನಮ್ಮ ಗುರಿಯಲ್ಲ, ಪೂರ್ಣ ಸ್ವರಾಜ್ಯ ನಮ್ಮ ಗುರಿ' ಎನ್ನುತ್ತಾರೆ. ಯುವಕರೆಲ್ಲ ಸುಭಾಷರ ಪರವಾಗಿ ವೋಟ್ ಮಾಡುತ್ತಾರೆ. ಹಿರಿಯರೆಲ್ಲ ಗಾಂಧೀಜಿ ಅವರ ವಾದದ ಪರ ಮತ ಚಲಾಯಿಸುತ್ತಾರೆ. ಕೊನೆಗೆ ಅದು ಸುಮಾರು 50–60 ಮತಗಳ ಅಂತರದಲ್ಲಿ ಬಿದ್ದುಹೋಗುತ್ತದೆ. ಮುಂದೆ ಲಾಹೋರ್ ಅಧಿವೇಶನದಲ್ಲಿ ಸುಭಾಷ್‌ಚಂದ್ರಬೋಸ್ ಮತ್ತೆ ನಿರ್ಣಯಕ್ಕೆ ತಿದ್ದುಪಡಿ ತರುತ್ತಾರೆ. ಆಗ ಗಾಂಧೀಜಿ ಅವರೂ ಅದನ್ನು ಒಪ್ಪಿಕೊಳ್ಳುತ್ತಾರೆ. ಸಂಪೂರ್ಣ ಸ್ವರಾಜ್ಯ ರಾಷ್ಟ್ರೀಯ ಕಾಂಗ್ರೆಸ್ಸಿನ ಗುರಿ ಎಂದು ಘೋಷಿಸುತ್ತಾರೆ.

'ಸುಭಾಷರು ಮುಸ್ಲಿಮರ ಪಕ್ಷಪಾತಿಯಾಗಿದ್ದರು, ರೋಮನ್ ಕ್ಯಾಥೊಲಿಕ್ ಧರ್ಮಕ್ಕೆ ಸೇರಿದ ಹುಡುಗಿಯನ್ನು ಮದುವೆಯಾದ

ಬಳಿಕ ಅವರ ರಾಷ್ಟ್ರೀಯತೆಯ ಪರಿಕಲ್ಪನೆ ವ್ಯತ್ಯಾಸವಾಗಿತ್ತು' ಎನ್ನುವುದೆಲ್ಲ ಇತಿಹಾಸವನ್ನು ತಿರುಚಿ ಪ್ರಚಾರ ಮಾಡುವ ತಂತ್ರ ಸುಭಾಷರು ಕಟ್ಟಿದ ಇಂಡಿಯನ್ ನ್ಯಾಷನಲ್ ಆರ್ಮಿಯನ್ನೇ ನೋಡಿ– ಅಲ್ಲಿ ಎಲ್ಲ ಧರ್ಮದ ಜನರೂ ಕೂಡಿದ್ದಾರೆ. ಹಿಂದೂಗಳು, ಮುಸ್ಲಿಮರು, ಕ್ರಿಶ್ಚಿಯನ್ನರು, ಮಹಿಳೆಯರು, ತಮಿಳರು, ಬಂಗಾಳಿಗಳು, ಉತ್ತರ ಭಾರತದವರು– ಹೀಗೆ ಎಲ್ಲರನ್ನೂ ಸೇರಿಸಿಕೊಂಡು ಕಟ್ಟಿದ ಸೇನೆಯದು. ಅಲ್ಲಿ ಹೆಣ್ಣುಮಕ್ಕಳ ಪ್ರತ್ಯೇಕ ತುಕಡಿಯಿತ್ತು. ಸುಭಾಷರದ್ದು ವಿಶಾಲ ದೃಷ್ಟಿಕೋನ. ಈಗಿನ ಹಿಂದೂ ಬಲಪಂಥೀಯರು ಹೇಳುವಂತೆ ಇದನ್ನು ಹಿಂದೂ ರಾಷ್ಟ್ರ ಮಾಡಬೇಕೆಂಬ ಕುಬ್ಜ ದೃಷ್ಟಿ ಅವರದ್ದಾಗಿರಲಿಲ್ಲ. ಹಾಗೆಂದು ಸುಭಾಷರಿಗೆ ಇದನ್ನು ಕ್ರಿಶ್ಚಿಯನ್ ದೇಶ ಮಾಡಬೇಕು, ಮುಸ್ಲಿಮರನ್ನು ಓಲೈಸಬೇಕು ಎಂಬ ದೃಷ್ಟಿಕೋನವೂ ಇರಲಿಲ್ಲ. ಅವರಿಗೆ ಸಂಪೂರ್ಣವಾಗಿ ರಾಷ್ಟ್ರೀಯತೆಯ ದೃಷ್ಟಿ ಇತ್ತು.

ಸುಭಾಷರು ಭೂಗತರಾದ ಬಳಿಕ ಮತ್ತೆ ಸ್ವದೇಶಕ್ಕೆ ಮರಳಿದ್ದರೆ ಈ ದೇಶ ಖಂಡಿತ ಬದಲಾಗುತ್ತಿತ್ತು. ಕಾಂಗ್ರೆಸ್‌ಗೆ ವಿರೋಧವಾದ ಒಂದು ಸಮರ್ಥ ಪಕ್ಷವನ್ನು ಕಟ್ಟಿ ಅವರು ಇಡೀ ದೇಶದ ದಿಕ್ಕನ್ನು ಬದಲಾಯಿಸುವಂತಹ ಕೆಲಸ ಮಾಡುತ್ತಿದ್ದರು ಎನ್ನುವುದು ನನ್ನ ಅಭಿಪ್ರಾಯ. ಕಾಂಗ್ರೆಸ್‌ನವರು ಸುಭಾಷರಿಗೆ ಹೆದರಿಯೂ ಇದ್ದರು ಎನ್ನುವ ಮಾತು ಕೇಳಿದ್ದೇನೆ. ನೆಹರೂ ಅವರು – ನೀವು ಬಂದರೆ ಬಂಧಿಸುತ್ತೇವೆ–ಎಂದು ಸುಭಾಷರಿಗೆ ಕಾಗದ ಬರೆದಿದ್ದರು ಎಂದೂ ಕೇಳಿದ್ದೇನೆ. ಇದರ ಸತ್ಯಾಸತ್ಯತೆ ನನಗೆ ಸರಿಯಾಗಿ ಗೊತ್ತಿಲ್ಲ. ನೆಹರೂ ಅವರಿಗೆ ಸುಭಾಷ್ ತಮಗೆ ಸಮರ್ಥ ಪ್ರತಿಸ್ಪರ್ಧಿ ಆಗುತ್ತಾರೆ ಎನ್ನುವ ಭಯ ಇತ್ತು ಎನ್ನುವ ಮಾತುಗಳನ್ನೂ ನಾನು ಕೇಳಿದ್ದೇನೆ. ಭಾರತ ಪ್ರಜಾಪ್ರಭುತ್ವವಾದಿ ಮತ್ತು ಸಮಾಜವಾದಿಯಾಗಿಯೇ ಇರಬೇಕು. ಮುಖ್ಯವಾಗಿ ಎಲ್ಲರಿಗೂ ವ್ಯಕ್ತಿ ಸ್ವಾತಂತ್ರ್ಯ ಇರಬೇಕು. ಎಲ್ಲರೂ ತಮ್ಮ ಧರ್ಮಗಳನ್ನು ಆಚರಿಸಲಿ. ಹಿಂದೂಗಳಾಗಲೀ ಮುಸ್ಲಿಮರಾಗಲೀ ಅವರ ಧರ್ಮಗಳನ್ನು ತಮ್ಮ ಮನೆಯಲ್ಲಿ, ದೇವಾಲಯ, ಮಸೀದಿಗಳಲ್ಲಿ

ಆಚರಿಸಲಿ. ಧರ್ಮವನ್ನು ರಾಜಕೀಯಕ್ಕೆ ಬಳಸುವ ಕೆಲಸ ಮಾಡಬಾರದು. ಧರ್ಮವು ರಾಜಕೀಯದಿಂದ ಸಮಾನಾಂತರ ಕಾಯ್ದುಕೊಳ್ಳಬೇಕು. ರಾಜಕೀಯದಲ್ಲಿ ಧರ್ಮ ಬೆರೆಸುವ ಕೆಲಸ ಎಳ್ಳಷ್ಟೂ ಸರಿಯಲ್ಲ. ಆಡಳಿತ ಜಾತ್ಯತೀತ ರೀತಿಯಲ್ಲಿ ನಡೆಯಬೇಕು.

ಗಾಂಧೀಜಿ ಅವರು ರಾಜಕೀಯದಲ್ಲಿ ಧರ್ಮದೃಷ್ಟಿ ಇರಬೇಕು ಎಂದು ಹೇಳಿದ್ದು ಬೇರೆ ಅರ್ಥದಲ್ಲಿ. ಅವರ ಧರ್ಮದ ಪರಿಕಲ್ಪನೆ ವಿಶಾಲವಾದ ಮಾನವೀಯತೆಯ, ಎಲ್ಲರನ್ನೂ ಒಳಗೊಳ್ಳುವ ಮೌಲ್ಯಗಳ ದೃಷ್ಟಿ. ಯಾವ ಧರ್ಮವೂ ಹಿಂಸೆಯನ್ನು ಆರಾಧಿಸುವುದಿಲ್ಲ. ಅರಬಿಂದೊ ಅವರು ಹೇಳಿದ ಹಾಗೆ ಇಷ್ಟೊಂದು ಧರ್ಮಗಳು ಏಕೆ ಹುಟ್ಟಿಕೊಂಡಿವೆ ಅಂದರೆ, ಒಂದು ಧರ್ಮದಲ್ಲಿ ಸ್ವಲ್ಪ ಕೊರತೆ, ಗ್ಲಾನಿ ಕಂಡುಬಂದಾಗ ಇನ್ನೊಬ್ಬ ಜ್ಞಾನಿ ಬಂದು ಇನ್ನೊಂದು ಧರ್ಮವನ್ನು ಸ್ಥಾಪನೆ ಮಾಡಿದ ಎಂದು ಅರವಿಂದರು ಹೇಳುತ್ತಾರೆ. ಮಾನವರನ್ನು ಒಂದುಗೂಡಿಸುವ ಕೆಲಸವನ್ನೇ ಎಲ್ಲ ಧರ್ಮಗಳು ಮಾಡುತ್ತವೆ. ಗಾಂಧೀಜಿ ಅವರ ಧರ್ಮದ ದೃಷ್ಟಿಕೋನ ಸರ್ವಕಾಲೀನ ಮತ್ತು ಇಡೀ ಪ್ರಪಂಚಕ್ಕೇ ಸಂಬಂಧಪಟ್ಟ ವಿಶ್ವಮಾನವತ್ವವನ್ನು ಬೋಧಿಸುವಂತಹದು. ಅದರಲ್ಲಿ ಈ ಜಾತಿ, ಆ ಜಾತಿ, ಈ ದೇಶ, ಆ ದೇಶ ಎನ್ನುವ ಯಾವಪ್ರಶ್ನೆಯೂ ಬರುವುದಿಲ್ಲ. ಬಿ. ಎಂ. ಹನೀಫ್ ಅವರು ಸುಭಾಷ್‌ಚಂದ್ರ ಬೋಸರ ಕುರಿತು ಬರೆದಿರುವ ಪುಸ್ತಕ ಈ ಕಾಲಕ್ಕೆ ಅಗತ್ಯವಾಗಿದೆ. ರಾಷ್ಟ್ರೀಯತೆ ಮತ್ತು ಸರ್ವಧರ್ಮ ಸಮಭಾವದ ಕುರಿತು ಸಾಕಷ್ಟು ಗೊಂದಲಗಳನ್ನು ಕೆಲವರು ಸೃಷ್ಟಿಸುತ್ತಿರುವ ಈ ಕಾಲಘಟ್ಟದಲ್ಲಿ ಸುಭಾಷರ ರಾಷ್ಟ್ರೀಯತೆಯ ಮತ್ತು ಸರ್ವಧರ್ಮ ಸಮಭಾವದ ಕುರಿತ ವಿಚಾರಗಳು ಹೆಚ್ಚು ಹೆಚ್ಚು ಜನರಿಗೆ ತಲುಪಬೇಕು. ಈ ವಿಚಾರಗಳನ್ನು ಹೆಚ್ಚು ಹೆಚ್ಚು ಪ್ರಚಾರ ಮಾಡಬೇಕು.

ಕೋಮು ಸೌಹಾರ್ದ

ವಿಶ್ವದಲ್ಲೇ ಅತ್ಯಂತ ತೊಡಕಿನಿಂದ ಕೂಡಿದ ಸಮಾಜ ಭಾರತೀಯ ಸಮಾಜ, ಹಲವು ಜನಾಂಗಗಳವರು, ಹಲವು ಧರ್ಮಗಳವರು ಭಾರತ ತಮ್ಮ ಮನೆಯೆಂದು ಭಾವಿಸುತ್ತಾರೆ. ದ್ರಾವಿಡ, ಆರ್ಯ, ಮುಂಗೋಲ, ಸೆಮಿಟಿಕ್ ಮತ್ತು ನೀಗ್ರೋಯಿಡ್ ಮುಂತಾದ ಹಲವು 'ಮೂಲಗಳವರು' ಭಾರತೀಯರು. ಕ್ರೈಸ್ತ ಮತ ಕ್ರಿಸ್ತಶಕ 50ರಲ್ಲೇ ಭಾರತವನ್ನು ಪ್ರವೇಶ ಮಾಡಿದರೆ, ಇಸ್ಲಾಂ ಧರ್ಮ 8ನೇ ಶತಮಾನದಲ್ಲಿ ಕಾಲಿಟ್ಟಿತು. ವೈದಿಕ ಧರ್ಮದ ಸಮಕಾಲೀನ ಧರ್ಮಗಳೆಷ್ಟೋ ಭಾರತದಲ್ಲಿ ಹಿಂದೂ ಧರ್ಮದ ಜೊತೆಜೊತೆಯಲ್ಲೇ ಬೆಳೆದವು. ಭಾರತದಲ್ಲಿ ಹಲವು ಭಾಷೆಗಳಿದ್ದು, ಬೇರೆ ಬೇರೆ ಧರ್ಮಗಳವರು ಈ ಭಾಷೆಗಳನ್ನು ಪೋಷಿಸಿ ಬೆಳೆಸಿದ್ದಾರೆ. ಈ ರೀತಿ ಭಾರತೀಯ ಸಂಸ್ಕೃತಿಗೆ ಹಲವು ಭಾಷೆಗಳ, ಬೇರೆ ಬೇರೆ ಧರ್ಮಗಳ ಜನರು ಕೊಡುಗೆ ನೀಡಿದ್ದಾರೆ.

ನಮ್ಮದು ಅನೇಕತ್ವದ ಸಂಸ್ಕೃತಿ. ಸಾವಿರಾರು ವರ್ಷಗಳಿಂದ ವಿವಿಧ ಜಾತಿ, ಜನಾಂಗ, ಮತ, ಭಾಷೆಗಳ ಜನ ಕಲೆತು ಈ ಸಂಸ್ಕೃತಿಯನ್ನು ಪೋಷಿಸಿದ್ದಾರೆ. ಇಂದು ಶುದ್ಧವಾದ, ಪ್ರತ್ಯೇಕವಾದ ಹಿಂದೂ ಸಂಸ್ಕೃತಿ ಎಂಬುದಿಲ್ಲ. ಹಿಂದೂ ಧರ್ಮವೆಂಬುದು ಒಂದು ಪ್ರತ್ಯೇಕ ಮತವಾಗಿರದೆ ಹಲವು ಮತಗಳ ಒಂದು ಸಂಗಮವಾಗಿದೆ. ಹಿಂದೂ ದೇಶದಲ್ಲಿ ನೆಲೆ ಮಾಡಿಕೊಂಡಿರುವ ಈ ಎಲ್ಲ ಜನಾಂಗಗಳವರೂ, ಧರ್ಮಗಳವರೂ ಪರಸ್ಪರ ಹೊಂದಿಕೊಂಡು, ಶಾಂತಿಯಿಂದ, ನೆಮ್ಮದಿಯಿಂದ ಸಹ ಬಾಳ್ವೆಯ ಹಾದಿ ಹಿಡಿಯುವಂತೆ ಮಾಡಲು ಆ ಕಾಲದ ನಾಯಕ ವರ್ಗ ಮಾರ್ಗದರ್ಶನ ಮಾಡಿತು. ಬುದ್ಧ, ಅಶೋಕ, ಅಕ್ಬರ್, ಸೂಫಿಗಳು, ಭಕ್ತಿ ಪಂಥದವರು, ಗುರುನಾನಕ್ ಇವರೆಲ್ಲ ಮಾಡಿದ ಕೆಲಸ ಇದೇ. ಮುಂದೆ ಆಧುನಿಕ ಕಾಲದಲ್ಲೂ ಶ್ರೀ ರಾಮಕೃಷ್ಣ

ಪರಮಹಂಸರು, ಸ್ವಾಮಿ ವಿವೇಕಾನಂದರು ಧರ್ಮ ಸಮನ್ವಯದ ಕಾರ್ಯವನ್ನು ಮುಂದುವರೆಸಿದರು. ಮಹಾತ್ಮ ಗಾಂಧೀಜಿಯವರಾದರೋ ಕೋಮು ಸೌಹಾರ್ದಕ್ಕೆ ತಮ್ಮ ಜೀವನವನ್ನೇ ಮುಡುಪಾಗಿಟ್ಟರಲ್ಲದೆ, ಅದಕ್ಕೆ ಇನ್ನೊಂದು ಆಯಾಮ ಸೇರಿಸಿದರು. ಪ್ರಜಾಪ್ರಭುತ್ವ ಪ್ರತಿಪಾದನೆ ಅವರ ಕೊಡುಗೆ. ಪರಸ್ಪರ ಸಹಿಷ್ಣುತೆ ಮತ್ತು ಸಾಮರಸ್ಯ ಇವೇ ಪ್ರಜಾಪ್ರಭುತ್ವದ ನೆಲೆಗಟ್ಟು. ಅದು ನಮ್ಮ ಜನತೆಯ ನಿತ್ಯಜೀವನದಲ್ಲಿ, ಅವರ ಭಾವನೆಯಲ್ಲಿ, ನಡತೆಯಲ್ಲಿ, ಮಾತಿನಲ್ಲಿ, ಕೃತಿಯಲ್ಲಿ ಪ್ರತಿಫಲಿತವಾಗಬೇಕು, ಅಭಿವ್ಯಕ್ತವಾಗಬೇಕು ಎಂದು ಅವರು ಸಾರಿ ಹೇಳಿದರು.

ವಿವಿಧ ಮತಗಳ ಹೊಂದಾಣಿಕೆಯೇ ಧರ್ಮ, ಮತಗಳು ಬೇರೆ ಬೇರೆಯಾಗಿದ್ದರೂ ಅವು ಒಂದುಗೂಡಿ ಸೌಹಾರ್ದದಿಂದ ಬಾಳುವಂತೆ ಮಾಡುವುದನ್ನೇ ಧರ್ಮ ಎನ್ನುವುದು, ಬಡಿದಾಡುವ ಧರ್ಮ, ಧರ್ಮವೇ ಅಲ್ಲ. ಬಡಿದಾಡುವುದನ್ನು ಬಿಟ್ಟರೆ, ಮೈತ್ರಿಯಿಂದ ಬಾಳಿದರೆ, ವಿಶ್ವ ಒಂದೇ, ಮಾನವ ಸಮುದಾಯ ಒಂದೇ ಎಂಬ ಅರಿವು ಮೂಡುತ್ತದೆ. ಸಹನಶೀಲತೆ, ಸಂವೇದನೆ ಮತ್ತು ಮಾನವೀಯತೆ ಇವುಗಳನ್ನು ಪೋಷಿಸುವ ಸಾಧನವಾಗಬೇಕು ಧರ್ಮ. ಸ್ವಾತಂತ್ರ್ಯಾನಂತರ ಒಂದೆರಡು ದಶಕಗಳ ಕಾಲ ರಾಷ್ಟ್ರದ ಅಖಂಡತೆ, ವಿವಿಧ ಮತಗಳಲ್ಲಿ ಸೌಹಾರ್ದ ಸಹಕಾರ ಭಾವನೆಗಳನ್ನು ಕಾಪಾಡಿಕೊಂಡು ಬರಲು ಪ್ರಯತ್ನಗಳು ಅಖಂಡವಾಗಿ ನಡೆಯಿತು. ಇತ್ತೀಚಿನ ವರ್ಷಗಳಿಂದಲಂತೂ ರಾಷ್ಟ್ರವನ್ನು ಒಡೆಯುವ ಪ್ರವೃತ್ತಿ ಭಾರತದ ಹಲವು ಕಡೆ ಹೆಚ್ಚುಹೆಚ್ಚಾಗಿ ಬೆಳೆಯುತ್ತಿದೆ. ಕೋಮು ಸೌಹಾರ್ದ ದಿನೇದಿನೇ ಕೆಡುತ್ತಿದೆ. 1946-47ರಲ್ಲಿ ದೇಶ ಇಬ್ಭಾಗವಾಗಲಿದ್ದ ಸಂದರ್ಭದಲ್ಲಿ ಮತ್ತು ಇಬ್ಭಾಗವಾದ ಹೊಸದರಲ್ಲಿ- ಹಿಂದು ಮುಸ್ಲಿಂ ಮತಾಂಧರು ಧರ್ಮದ ಹೆಸರಿನಲ್ಲಿ ಬಂಗಾಳ, ಬಿಹಾರ, ಪಂಜಾಬ್ ಪ್ರಾಂತ್ಯಗಳಲ್ಲಿ ಹೊಯಿಕೈಯಾಗಿ ಹೇಗೆ ಕೊಲೆ, ಸುಲಿಗೆಗಳಲ್ಲಿ ತೊಡಗಿದ್ದರೆಂಬುದನ್ನು ನೋಡಿ ಅನುಭವಿಸಿರುವ

ನಮಗೆ ಆ ದಿನಗಳು ಮತ್ತೆ ಮರುಕಳಿಸಬಹುದೇ ಎಂಬ ಭಯ ಕಾಡುತ್ತಿದೆ.

ನಿಮ್ಮ ಕೋಮುವಾದಕ್ಕೆ ಪ್ರತಿಕ್ರಿಯೆಯಾಗಿ ನಮ್ಮ ಕೋಮುವಾದ ಎಂದು ವಾದ ಹೂಡಿ, ಹಿಂದೂ - ಮುಸ್ಲಿಂ - ಕ್ರಿಶ್ಚಿಯನ್ - ಸಿಖ್ ಕೋಮುವಾದಿಗಳು ತಮ್ಮನ್ನು ಸಮರ್ಥಿಸಿಕೊಳ್ಳುತ್ತಾರೆ. ವಾಸ್ತವವಾಗಿ ಮೊದಲು ಈ ಘರ್ಷಣೆ ಹುಟ್ಟಿದ್ದು ಯಾರಿಂದ ಎಂದು ಹೇಳುವುದು ಕಠಿಣವಾಗುತ್ತದೆ. ಒಮ್ಮೆ ಅದು ಹುಟ್ಟಿತೆಂದರೆ, ಅದು ಹಲವು ರೂಪ ತಳೆದು ಬೆಳೆಯುತ್ತ ಹೋಗುತ್ತದೆ.

ಕೋಮು ಘರ್ಷಣೆಗೆ ಕಾರಣಗಳು

ಕೋಮು ಘರ್ಷಣೆಗೆ ಕಾರಣ ಹಲವು, ಹದಿನಾರು. ವೈಯಕ್ತಿಕ ದ್ವೇಷ ಸಾಧನೆಗೆ ಕೋಮು ಬಣ್ಣ ಹಚ್ಚಿ ಜನರನ್ನು ಹುಚ್ಚೆಬ್ಬಿಸುವುದು ಸರ್ವೇಸಾಮಾನ್ಯ. ಕೀಟಲೆಗಾಗಿ ಮಸೀದಿಯ ಮುಂದೆ ಸತ್ತ ಹಂದಿಯನ್ನು ಎಸೆಯುವುದು, ಮಸೀದಿಯ ಮುಂದೆ ಹಿಂದೂ ದೇವರ ಉತ್ಸವ ಬಂದಾಗ ವಾದ್ಯಗಳನ್ನು ನಿಲ್ಲಿಸಬೇಕೆಂದು ಮುಸ್ಲಿಮರು ಮೊಂಡು ಜಗಳ ಹೂಡುವುದು, ಹಿಂದೂ ಮುಸ್ಲಿಂರಿಬ್ಬರೂ ವೈಯಕ್ತಿಕ ಕಾರಣಗಳಿಗಾಗಿ ಜಗಳ ಮಾಡಿಕೊಂಡರೆ ಅದನ್ನು ಶಮನ ಮಾಡುವ ಬದಲು ಆಯಾ ಕೋಮಿನವರು ಅವರಿಬ್ಬರ ಪಕ್ಷ ಕೂಡಿಕೊಂಡು ಅದನ್ನು ಊರಿನ ಜಗಳವಾಗಿ ಪರಿವರ್ತಿಸುವುದು, ಯಾರೋ ಒಬ್ಬರು ಮತಾಂತರ ಮಾಡಿದರು ಎಂಬ ಕಾರಣಕ್ಕಾಗಿ ಹಿಂದೂಗಳು ಮುಸ್ಲಿಮರು ಎರಡು ಬಣವಾಗಿ ಕಡಿದಾಡುವುದು ಇವೆಲ್ಲ ಬಹುಕಾಲದಿಂದ ನಡೆದುಬಂದಿರುವ ಘಟನೆಗಳು.

ಇಂಗ್ಲಿಷರು ಈ ದೇಶದಲ್ಲಿ ಬೀಡುಬಿಟ್ಟ ಮೇಲೆ ತಮ್ಮ ಅಧಿಕಾರವನ್ನು ಅಬಾಧಿತವಾಗಿ ನಡೆಸಿಕೊಂಡು ಹೋಗುವ ಸಲುವಾಗಿ ಒಡೆದು ಆಳುವ ನೀತಿಯನ್ನು ಅನುಸರಿಸಿದರು. ಹಿಂದೂ-ಮುಸ್ಲಿಂ, ಬ್ರಾಹ್ಮಣ-ಅಬ್ರಾಹ್ಮಣ, ಹಿಂದೂ-ಹೊಲೆಯ ಹೀಗೆ ಒಂದು

ಕೋಮಿನವರನ್ನು ಇನ್ನೊಂದು ಕೋಮಿನ ಮೇಲೆ ಎತ್ತಿ ಕಟ್ಟಿದರು. ಭಾರತೀಯರು ಒಗ್ಗಟ್ಟಾಗದಂತೆ ಮಾಡಲು ಅವರು ಎಲ್ಲಾ ರೀತಿಯಲ್ಲೂ ಪ್ರಯತ್ನಿಸಿದರು. ಹೀಗೆ ಹೊತ್ತಿಸಿದ ವಿಷಜ್ವಾಲೆ ಭಾರತ ಇಬ್ಭಾಗವಾಗುವುದರಲ್ಲಿ ಪರ್ಯವಸಾನಗೊಂಡಿತು.

ಸ್ವಾತಂತ್ರ್ಯ ಪ್ರಾಪ್ತವಾದ 70 ವರ್ಷಗಳ ಅವಧಿಯಲ್ಲಿ ರಾಷ್ಟ್ರೀಯ ಸರ್ಕಾರ ಭಾರತದ ಸಂವಿಧಾನ ವಿಧಿಸಿರುವಂಥ ಧರ್ಮ ನಿರಪೇಕ್ಷ ವ್ಯವಸ್ಥೆಯನ್ನು ಪೋಷಿಸಿ ಬಲಪಡಿಸಲು ಅವಿರತ ಪ್ರಯತ್ನ ಮಾಡಬೇಕಾಗಿತ್ತು. ಓಟಿಗಾಗಿ ಜಾತಿ ಮತಗಳ ದುರುಪಯೋಗ ಮಾಡುವ ಹವಣಿಕೆಗಳನ್ನು ಹತ್ತಿಕ್ಕಬೇಕಾಗಿತ್ತು. ಒಮ್ಮೆ ಮುಸ್ಲಿಮರನ್ನೋ ಹರಿಜನರನ್ನೋ ಒಲಿಸಿಕೊಳ್ಳುವುದು, ಒಮ್ಮೆ ಹಿಂದೂಗಳನ್ನೋ ಸಿಖ್ಖರನ್ನೋ ಎತ್ತಿ ಕಟ್ಟುವುದು, ಕೋಮು ದ್ವೇಷ ಹರಡುವುದು, ಅದರ ಲಾಭ ತಾವು ಪಡೆಯುವುದು–ಇದಕ್ಕೆಲ್ಲ ಅವಕಾಶವೇ ಇಲ್ಲದಂತೆ ಮಾಡುವ ದಿಶೆಯಲ್ಲಿ ಹೆಜ್ಜೆ ಇಡಬೇಕಾಗಿತ್ತು.

ದಟ್ಟವಾಗಿ ಹರಡಿರುವ ಬಡತನ, ನಿರಕ್ಷರತೆ, ಅಸಮಾನತೆ, ನಿರುದ್ಯೋಗ ಮುಂತಾದ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಕಾರ್ಯಕ್ರಮ ಹಾಕಿಕೊಳ್ಳುವ ಬದಲು ಜಾತಿಜಾತಿಗಳಲ್ಲಿ ಘರ್ಷಣೆ ಉಂಟುಮಾಡುವ ಸಂಚು ಇಂದು ನಡೆದಿದೆ. ರಾಜಕೀಯಕ್ಕೆ ಕೋಮು ಘರ್ಷಣೆಯನ್ನು ಬಳಸುವ ವ್ಯಾಧಿ ಇಂಗ್ಲಿಷರ ಕೊಡುಗೆ, ಅದನ್ನು ಸ್ವಾತಂತ್ರ್ಯ ಪ್ರಾಪ್ತವಾದ ಮೇಲೂ ನಮ್ಮ ಕೆಲವು ರಾಜಕೀಯ ಪಕ್ಷಗಳು ಪೋಷಿಸಿಕೊಂಡು ಬರುತ್ತಿವೆ. ಇದು ನಾಚಿಕೆಗೇಡು. ಇದೂ ಅಲ್ಲದೆ ವಾಸ್ತವವಾಗಿ ಹಿಂದೂ–ಮುಸ್ಲಿಂ ಸಮುದಾಯಗಳೆರಡರಲ್ಲೂ ಬೇರು ಬಿಟ್ಟಿರುವ ಪರಸ್ಪರ ದ್ವೇಷಾಸೂಯೆ, ಸಂಶಯಗಳು ಕೋಮು ಘರ್ಷಣೆಗೆ ಮತ್ತೊಂದು ಪ್ರಮುಖ ಕಾರಣ ಎನ್ನಲಡ್ಡಿಯಿಲ್ಲ. ಆರ್ಥಿಕ ಅಸಮಾನತೆ, ಬಡತನ, ನಿರುದ್ಯೋಗ, ಅನಕ್ಷರತೆ ಇವು ಜಾತಿ ರಾಜಕೀಯ ಮಾಡುವವರಿಗೆ ಹುಲುಸಾದ ಕ್ಷೇತ್ರಗಳು, ಜನಸಾಮಾನ್ಯರನ್ನು ಪ್ರಚೋದಿಸಿ, ಅವರಲ್ಲಿ ಜಾತಿಯ ಆವೇಶ

ಉಂಟು ಮಾಡಿ, ವಿಧ್ವಂಸಕ ಕಾರ್ಯಗಳಲ್ಲಿ ಅವರು ತೊಡಗುವಂತೆ ಮಾಡುವುದು ಜಾತಿವಾದಿಗಳ ವ್ಯೂಹ ರಚನೆ. ಜಾತಿಯ ಮುಖ್ಯಸ್ಥರು ಹಾಗೂ ರಾಜಕೀಯ ಸಮಯಸಾಧಕರು, ರಾಜಕೀಯದಲ್ಲಿ ಜಾತೀಯತೆಯ ವಿಷಬೀಜ ಬಿತ್ತುತ್ತಾರೆ. ಚುನಾವಣೆಯ ಸಮಯದಲ್ಲಂತೂ ಇದರ ಹಾವಳಿ ಹೇಳತೀರದು.

ಮತೀಯ ಗಲಭೆಗಳಾದರೆ ಸಾವುನೋವಿಗೆ ಈಡಾಗುವವರು ಸಾಮಾನ್ಯ ಮುಗ್ಧ ಜನ, ಘರ್ಷಣೆಗಳಿಗೆ ಪ್ರಚೋದನೆ ನೀಡುವವರು ಅಲಕ್ ಆಗಿಬಿಡುತ್ತಾರೆ. ಅವರು ನಾಯಕರುಗಳೆನಿಸಿಕೊಂಡು ಬಿಡುತ್ತಾರೆ. ಬಲಿಪಶುವಾಗುವವರು, ಗುಂಡಿಗೆ ಆಹುತಿಯಾಗುವವರು ಈ ಪುಢಾರಿಗಳಲ್ಲ, ಅವರ ಪ್ರೇರಣೆಗೆ ಒಳಗಾದ ಬಡಪಾಯಿಗಳು.

ರಾಜಕಾರಣಿಗಳ ಸ್ವಾರ್ಥ, ಅಧಿಕಾರಶಾಹಿಯ ದಬ್ಬಾಳಿಕೆ, ಜಾತೀಯವಾದಿಗಳ ಕುಬ್ಜ ದೃಷ್ಟಿ, ಮತಧರ್ಮಗಳ ಹೆಸರಿನಲ್ಲಿ ನಡೆಯುವ ಘರ್ಷಣೆಗಳು, ಇವೆಲ್ಲ ದೇಶದ ಐಕ್ಯತೆ, ಸಮಗ್ರತೆಗಳನ್ನು ಒಡೆಯುವ ಮುಖ್ಯ ಸಾಧನಗಳು.

ಈ ನಮ್ಮ ಸಮಾಜದ ವ್ಯವಸ್ಥೆ ಒಂದು ಉಕ್ಕಿನ ಕೋಟೆ. ಇಲ್ಲಿ ಮೌಲ್ಯಗಳನ್ನೂ, ಆದರ್ಶಗಳನ್ನೂ, ಕಾರ್ಯಕ್ರಮಗಳನ್ನೂ ರೂಪಿಸುವವರು ರಾಜಕೀಯ ಹಿತಾಸಕ್ತಿಗಳು ಮತ್ತು ಜಾತಿವಾದಿಗಳು, ಅವರಿಗೆ ಬೆಂಬಲಿಗರಾಗಿ ನಿಲ್ಲುವ ಮಠಾಧಿಪತಿಗಳು, ಮುಲ್ಲಾಗಳು, ಧರ್ಮಗುರುಗಳು. ಇದೊಂದು ವೈಯಕ್ತಿಕ ಹಿತಾಸಕ್ತಿಯ ಜಾಲವೇ ಸರಿ. ಯಾರ ಬಳಿಯಲ್ಲಿ ಹಣವಿದೆಯೋ, ಯಾರಿಗೆ ಮುಗ್ಧ ಹಿಂದು, ಕ್ರಿಶ್ಚಿಯನ್ ಮುಸ್ಲಿಂ, ಸಿಖ್‌ರಲ್ಲಿ ಆವೇಶ ತುಂಬಿ, ಕೊಲೆ ಮಾಡಲು ಪ್ರೇರಣೆ ನೀಡುವ ಸಾಮರ್ಥ್ಯವಿದೆಯೋ ಅವರೇ ಈಗಿನ ನಮ್ಮ ನಾಯಕರು. ನಮ್ಮ ಹೆಂಡತಿ ಮಕ್ಕಳನ್ನು ಬಲಿಪಶುಗಳನ್ನಾಗಿ ಮಾಡಿ ಅವರ ಕೈಗೆ ಅಧಿಕಾರ ಹಸ್ತಾಂತರಿಗೊಳ್ಳುತ್ತಾರೆ. ಸಾಮಾಜಿಕ ರಾಜಕೀಯ ವ್ಯವಸ್ಥೆಗಳು ಎಷ್ಟು ಕಲುಷಿತವಾಗಿದೆ ಎಂದರೆ ಈ ಹಿಡಿ

ಜನ ದೇಶವನ್ನು ತಮ್ಮ ಅಧೀನ ಮಾಡಿಕೊಳ್ಳಬಲ್ಲರು. ಇವರು ಜಾತೀವಾದ ಎಬ್ಬಿಸುವುದು ಅಧಿಕಾರ ಮತ್ತು ಹಣಕ್ಕಾಗಿ, ಮಠಾಧಿಪತಿಗಳು ಕಾವೀ ಧರಿಸುವುದು ಅದೇ ಕಾರಣಕ್ಕಾಗಿ, ಶಸ್ತ್ರಾಸ್ತ್ರಗಳನ್ನು ಬಾಂಬ್‌ಗಳನ್ನು ತಯಾರಿಸುವುದೂ, ಮಂತ್ರಿಯಾಗುವುದೂ, ಶಾಸಕರಾಗುವುದೂ ಅದಕ್ಕಾಗಿಯೇ.

ಜನಸಾಮಾನ್ಯರು ಗಾಂಧೀಜಿಯ ಅಹಿಂಸೆಯಲ್ಲಿ ಪೂರ್ಣ ನಂಬಿಕೆ ಇಟ್ಟಿರಲಿಲ್ಲ. ಗಾಂಧಿಯವರಿಗೆ ಅಹಿಂಸೆ ಒಂದು ಧರ್ಮ (Creed) ಆಗಿತ್ತು. ಉಳಿದವರಿಗೆ ಅದು ಒಂದು Expediency ಅನುಕೂಲ ಸಿಂಧು ಮಾರ್ಗವಾಗಿತ್ತು. ಅನುಕೂಲಸಿಂಧುವಾಗಿ ಬಳಸಿಕೊಂಡವರ ಅಹಿಂಸೆಯನ್ನು ಗಾಂಧೀಜಿ ದುರ್ಬಲರ ಅಹಿಂಸೆ ಎಂದು ಕರೆದರು. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದು ಈ ದುರ್ಬಲರ ಅಹಿಂಸೆಯೇ. ಈ ದುರ್ಬಲರ ಅಹಿಂಸೆಯೇ ಬ್ರಿಟಿಷರನ್ನು ಗಂಟು ಮೂಟೆ ಕಟ್ಟಿಕೊಂಡು ಭಾರತವನ್ನು ಬಿಟ್ಟುಹೋಗುವಂತೆ ಮಾಡಿರಬೇಕಾದರೆ ನಿಜವಾದ ಅಹಿಂಸೆಗೆ ಇನ್ನೆಂಥ ಪ್ರಚಂಡ ಶಕ್ತಿ ಇರಬೇಕು ಎಂಬುದನ್ನು ನಾವು ಊಹಿಸಿಕೊಳ್ಳಬೇಕು. ಇಂದಿಗೂ ಭಾರತ ಅಹಿಂಸೆಯನ್ನು ಕಾಯಾ ವಾಚಾ ಮನಸಾ ಪಾಲಿಸುವುದಾದರೆ, ಅದರಿಂದ ಎಂಥ ಅದ್ಭುತ ಶಕ್ತಿ ಹೊರಹೊಮ್ಮೀತು. ಸಮಾಜದ ಮೇಲೆ ಅದು ಎಂಥ ಸತ್ಪರಿಣಾಮ ಬೀರೀತು ಎಂಬುದನ್ನು ಚಿತ್ರಿಸಿಕೊಳ್ಳಬಹುದು.

ಈ 75 ವರ್ಷಗಳಲ್ಲಿ ಇಂತಹ ಅಂತಃಸತ್ವವುಳ್ಳ ಅಹಿಂಸೆಯ ಸ್ಥಾನದಲ್ಲಿ ಹಿಂಸಾಚಾರದ ಕರಾಳಛಾಯೆ ಗಾಢವಾಗಿ ಪಸರಿಸಿದೆ. ಈ ದುಃಸ್ಥಿತಿಗೆ ಸರ್ಕಾರ ಮತ್ತು ಪ್ರಜೆ ಇಬ್ಬರೂ ಹೊಣೆಗಾರರು. ಸರ್ಕಾರ ಸಂಪೂರ್ಣವಾಗಿ ದಂಡಶಕ್ತಿಯನ್ನೇ ಅವಲಂಬಿಸಿದೆ. ಸರ್ಕಾರದ್ದು ವ್ಯವಸ್ಥಿತ ದಂಡಶಕ್ತಿ (Organised Violence). (ಮಿಲಿಟರಿ ಮತ್ತು ಪೊಲೀಸ್ ದಳದ ಮೂಲಕ) ಜನರ ಅಸಂಘಟಿತ ದಂಡಶಕ್ತಿಯನ್ನು

ತಡೆಗಟ್ಟಿ ತಹಬಂದಿಗೆ ತರಬಹುದೆಂಬ ವಿಶ್ವಾಸ ಸರ್ಕಾರಕ್ಕೂ ಇತ್ತು. ಜನತೆಗೂ ಇತ್ತು. ಇತ್ತೀಚೆಗೆ ದಂಡಶಕ್ತಿ ಉಪಯೋಗಿಸಿ ಶಾಂತಿ ತರಬಹುದೆಂಬ ವಿಶ್ವಾಸವನ್ನು ಸರ್ಕಾರ ಕಳೆದುಕೊಳ್ಳುತ್ತಿದೆ. ಪಂಜಾಬ್, ಕಾಶ್ಮೀರ ಮುಂತಾದ ಕಡೆ ವರ್ಷಗಟ್ಟಲೆಯಿಂದ ಅವ್ಯಾಹತವಾಗಿ ನಿರಪರಾಧಿಗಳ ಕೊಲೆ ಸುಲಿಗೆಗಳು ಉಗ್ರವಾದಿಗಳಿಂದ ನಡೆಯುತ್ತಿರುವುದೇ ಇದಕ್ಕೆ ಸಾಕ್ಷಿ. ಸರ್ಕಾರ ತನ್ನ ದಂಡಶಕ್ತಿಯ ಮೂಲಕ ಪ್ರದರ್ಶಿಸುವ ಅಮಾನುಷ ವರ್ತನೆ ಜನರ ಮೃಗೀಯ ಭಾವನೆಯನ್ನು ಮತ್ತಷ್ಟು ಕೆರಳಿಸುತ್ತದೆ. ದೇವ ಮಾನವನಾಗುವ ಅವಕಾಶ ತಪ್ಪಿ ಮಾನವ ಮೃಗಗಳಿಗಿಂತಲೂ ಕ್ರೂರಿಯಾಗುತ್ತಿದ್ದಾನೆ. ರಾಕ್ಷಸ ಪ್ರವೃತ್ತಿ ಅವನಲ್ಲಿ ಬೆಳೆಯುತ್ತಿದೆ.

ಸರ್ಕಾರ ಎಷ್ಟೇ ಬಲಯುತವಾದದ್ದಾದರೂ, ದಿನದಿನಕ್ಕೆ ಹೆಚ್ಚುತ್ತಿರುವ ಉಗ್ರವಾದಿಗಳ ಹಿಂಸೆಯನ್ನು ಅದು ತಡೆಗಟ್ಟಲಾಗಿಲ್ಲ. ಸಮಾಜದಲ್ಲಿ ಬೆಳೆಯುತ್ತಿರುವ ಹಿಂಸಾ ಪ್ರವೃತ್ತಿಯನ್ನು ಜನತೆ ಮಾತ್ರ ತಮ್ಮ ಸಂಘಟಿತ ಪ್ರಯತ್ನದಿಂದ ತಡೆಗಟ್ಟಬಲ್ಲರು. ಈ ಪ್ರಯತ್ನದಲ್ಲಿ ಅನೇಕ ಸಹೃದಯರ ಪ್ರಾಣಕ್ಕೆ ಸಂಚಕಾರ ಬಂದರೂ ಬರಬಹುದು. ಅವರು ತಮ್ಮ ಪ್ರಾಣಾರ್ಪಣೆಗೆ ಸಿದ್ಧರೂ ಆಗಬೇಕು. ಸಜ್ಜನರು ಸಜ್ಜಾಗಿ, ಗಲಭೆ ನಡೆಯುತ್ತಿರುವ ಜಾಗಗಳಿಗೆ ಅಧಿಕ ಸಂಖ್ಯೆಯಲ್ಲಿ ಹೋಗಬೇಕು, ಜನತೆಗೆ ಹಿಂಸೆಯ ನಿಷ್ಫಲತೆಯ ಬಗ್ಗೆ, ಮಾನವೀಯ ಗುಣ ಬೆಳೆಸಿಕೊಳ್ಳುವ ಬಗ್ಗೆ ಹೇಳುತ್ತಾ ಸಾಗಬೇಕು. ಹಿಂಸಾಚಾರವನ್ನು ಸ್ಥಳೀಯ ಜನತೆ ಧೈರ್ಯದಿಂದ, ಸಂಘಟಿತ ಪ್ರಯತ್ನದಿಂದ ಎದುರಿಸುವ ಮನೋಭಾವ ಬೆಳೆಸಿಕೊಳ್ಳಲು ಪ್ರೇರಣೆ ನೀಡಬೇಕು. ಹೀಗೆ ಒಂದು ದೀರ್ಘಕಾಲೀನ ಕಾರ್ಯಕ್ರಮವನ್ನು ಜನ ಹಾಕಿಕೊಂಡ ಹೊರತು, ಬೆಳೆದು ನಿಂತಿರುವ ಈ ಹಿಂಸಾಚಾರ ಕೊನೆಗೊಳ್ಳುವ ಸಂಭವವಿಲ್ಲ.

ಗಾಂಧಿಯವರು ಮಾಡಿದ ಒಂದು ಪ್ರಯತ್ನವನ್ನು ಉದಾಹರಣೆಗಾಗಿ ಇಲ್ಲಿ ಉಲ್ಲೇಖಿಸುವುದು ಅಗತ್ಯ. ಭಾರತ

ಇಬ್ಭಾಗವಾದ ಕಾಲ, ಮೌಂಟ್‌ಬ್ಯಾಟನ್ ಗೌರ್ನರ್ ಜನರಲ್ ಆಗಿದ್ದ ಸಮಯ. ಆಗ ಪಂಜಾಬ್ ಮತ್ತು ಬಂಗಾಳದಲ್ಲಿ ಏಕಕಾಲದಲ್ಲಿ ಹಿಂದು ಮುಸ್ಲಿಂ ಘರ್ಷಣೆ ನಡೆದುಹೋಯಿತು. ಈ ಸಂಘರ್ಷವನ್ನು ತಡೆಹಿಡಿಯಲು ಮೌಂಟ್‌ಬ್ಯಾಟನ್ 5500 ಜನರ ಸಶಸ್ತ್ರ ಪಡೆಯೊಂದನ್ನು ಪಂಜಾಬಿಗೆ ಕಳಿಸಿಕೊಟ್ಟರು. ಬಂಗಾಳದ ಹಿಂಸಾಕಾಂಡವನ್ನು ತಹಬಂದಿಗೆ ತರಲು ಗಾಂಧೀಜಿ ತಮ್ಮ ಆಯ್ದ ಅನುಯಾಯಿಗಳೊಂದಿಗೆ ಬಂಗಾಳಕ್ಕೆ ಶಾಂತಿಸ್ಥಾಪನೆಗಾಗಿ ಹೋದರು. ಗಾಂಧೀಜಿಯವರನ್ನು ಮೊದಮೊದಲು ಅಲ್ಲಿಯ ಜನ ಪ್ರತಿಭಟಿಸಿದರು.

ದೇಶದಲ್ಲಿ ಹಿಂಸೆ ಹೆಚ್ಚುತ್ತಿದೆ

ಸ್ವಾತಂತ್ರ್ಯ ಪೂರ್ವದಲ್ಲಿ ಗಾಂಧೀಜಿ ಅಹಿಂಸೆಗೆ ಒತ್ತುಕೊಟ್ಟು ಸಮಾಜದಲ್ಲಿ ಹಿಂಸೆ ಬೆಳೆಯದಿರುವುದಕ್ಕೆ ಭಾರಿ ಪ್ರಯತ್ನ ಮಾಡಿದರು. ಅದರಲ್ಲಿ ಸ್ವಲ್ಪಮಟ್ಟಿಗೆ ಅವರು ಯಶಸ್ವಿಗಳೂ ಆದರು. ಅಹಿಂಸೆ ನಕಾರಾತ್ಮಕ ಪದವೆನಿಸಿದರೂ, ಅದು ಒಂದು ಧನಾತ್ಮಕ ಪರಿಕಲ್ಪನೆ (Positive Concept) ಹಿಂಸೆ ಎಂಬುದು ಮೃಗೀಯ ಭಾವನೆ. ಸಂಯಮಶೀಲರ ಆಯುಧ ಅಹಿಂಸೆ, ಹಿಂಸೆಯಲ್ಲ. ಪ್ರತಿ ಮಾನವನಲ್ಲೂ ಅಲ್ಪ ಸ್ವಲ್ಪ ಮೃಗೀಯ ಭಾವನೆ ಇದ್ದದ್ದೇ. ಇದನ್ನು ಶ್ರದ್ಧಾಪೂರ್ವಕವಾಗಿ, ಪ್ರಯತ್ನಪೂರ್ವಕವಾಗಿ ಮನುಷ್ಯ ದೂರಮಾಡುತ್ತಾ ಬಂದಲ್ಲಿ ಅವನು ಮಾನವತ್ವಕ್ಕೆ ಏರುತ್ತಾನೆ. ತನ್ನಲ್ಲಿರಬಹುದಾದ ಅಲ್ಪಸ್ವಲ್ಪ ಮೃಗೀಯ ಭಾವನೆಯನ್ನು ದೂರಮಾಡಲು ಪ್ರಯತ್ನ ಮಾಡುತ್ತಾನೆ. ಅಹಿಂಸೆ ಹೇಡಿಗಳು ಧರಿಸುವ ಒಂದು ಮುಖವಾಡವಲ್ಲ. ಅದು ಸಬಲರ ಅಸ್ತ್ರ ಎಂಬುದು ಗಾಂಧಿಯವರ ಪ್ರಸಿದ್ಧ ವಾಕ್ಯ, ಆಸ್ತಿಪಾಸ್ತಿಗಳನ್ನು ಕಳೆದುಕೊಂಡು ಬೀದಿಪಾಲಾಗಿರುವ ನಮಗೆ ಶಾಂತಿ ಬೋಧಿಸಲು ಬಂದಿರುವಿರಲ್ಲವೇ? ನೀವು ಸುಮ್ಮನೆ ಹಿಂತಿರುಗಿ, ಇಲ್ಲವಾದರೆ ನಿಮ್ಮ ಪ್ರಾಣಕ್ಕೇ ಸಂಚಕಾರ ಬಂದೀತು" ಎಂದು ಉದ್ರೇಕದಿಂದ ಎಚ್ಚರಿಕೆಯ ಮಾತನ್ನಾಡಿದರು. ಗಾಂಧೀಜಿ ಧೃತಿಗೆಡಲಿಲ್ಲ. "ಬಹುಕಾಲದಿಂದ ಅಣ್ಣ ತಮ್ಮಂದಿರಂತೆ

ಬದುಕಿ ಬಾಳುತ್ತಿರುವ ನೀವು ಯಾರದೋ ಕೆಲವರ ಅವಿವೇಕದಿಂದ ಕೊಲೆ ಸುಲಿಗೆಯಾಯಿತೆಂದು, ಪರಸ್ಪರ, ಹಿಂದು ಮುಸಲ್ಮಾನ ಸಹೋದರರು ಒಬ್ಬರ ಕುತ್ತಿಗೆಯನ್ನು ಮತ್ತೊಬ್ಬರು ಹಿಸುಕಲು ತೊಡಗಿರುವುದು ಸಾಧುವಲ್ಲ. ಶಾಂತಿ ತಂದುಕೊಳ್ಳಿ. ತಪ್ಪು ಎಲ್ಲಾಗಿದೆ ಎಂಬುದನ್ನು ಕಂಡುಕೊಳ್ಳಿ. ಅದನ್ನು ತಿದ್ದುಕೊಂಡು ಸಖ್ಯದಿಂದ ಬಾಳುವುದನ್ನು ಕಲಿಯಿರಿ" ಎಂದು ಹೇಳುತ್ತಾ ಗಾಂಧೀಜಿ ಮನೆಯಿಂದ ಮನೆಗೆ ಹಳ್ಳಿಯಿಂದ ಹಳ್ಳಿಗೆ ಹೋದರು. "ಶಾಂತಿ ಸ್ಥಾಪನೆಯ ಈ ಪ್ರಯತ್ನದಲ್ಲಿ ನಾನು ಪ್ರಾಣ ನೀಗಬೇಕೆಂಬುದು ಭಗವಂತನ ಇಚ್ಛೆಯಾದಲ್ಲಿ ಅದಕ್ಕೆ ನಾನು ಸಿದ್ಧ" ಎಂದು ಗಾಂಧೀಜಿ ಘೋಷಣೆ ಮಾಡಿದರು. ಗಾಂಧೀಜಿ ಅವರ ಪ್ರಾರ್ಥನಾ ಸಭೆಗಳಿಗೆ ಮೊದಮೊದಲು ಜನರು ಬರುತ್ತಿರಲಿಲ್ಲ. ಜನರಲ್ಲಿ ತಿಳಿವಳಿಕೆ ಮೂಡಿದಂತೆ ಹೆಚ್ಚು ಹೆಚ್ಚು ಜನ ಬರಲು ಆರಂಭಿಸಿದರು. ದುಷ್ಕೃತ್ಯದಲ್ಲಿ ತೊಡಗಿದ್ದವರು ತಮ್ಮಲ್ಲಿದ್ದ ಮಚ್ಚು, ಕತ್ತಿ, ಕೋವಿಗಳನ್ನು ಗಾಂಧೀಜಿಗೆ ಒಪ್ಪಿಸಿ, ಇನ್ನು ಮುಂದೆ ಹಿಂಸಾಕೃತ್ಯದಲ್ಲಿ ತೊಡಗುವುದಿಲ್ಲವೆಂದು ವಚನವಿತ್ತರು. ಕಾಲಕ್ರಮದಲ್ಲಿ ಬಂಗಾಳದಲ್ಲಿ ಸಂಪೂರ್ಣವಾಗಿ ಶಾಂತಿ ನೆಲೆಸಿತು. ಹಾಗೆಯೇ ಪಂಜಾಬಿಗೆ ಕಳಿಸಲ್ಪಟ್ಟ 5,500 ಮಂದಿ ಆಯುಧಪಾಣಿಗಳೂ ಕೊಲೆಗಡುಕರನ್ನು ದಮನ ಮಾಡಿ ಹಿಂಸಾಕೃತ್ಯಗಳು ಮುಂದುವರೆಯದಂತೆ ತಡೆಗಟ್ಟಿದರು. ಆಗ ಮೌಂಟ್‌ಬ್ಯಾಟನ್ ಗಾಂಧೀಜಿಯವರನ್ನು ಕುರಿತು ಆಡಿದ ಒಂದು ಮಾತು ಬಹಳ ಮಾರ್ಮಿಕವಾಗಿದೆ.

"Yours is a one man Boundary Force" ಇದು ಮೌಂಟ್‌ಬ್ಯಾಟನ್ ಗಾಂಧೀಜಿಗೆ ಹೇಳಿದ ಮಾತು. "ಪಂಜಾಬಿನಲ್ಲಿ 5,500 ಜನ ಸಶಸ್ತ್ರ ಪಡೆಯವರು ಸಾಧಿಸಿದ ಕೆಲಸವನ್ನು ಬಂಗಾಳದಲ್ಲಿ ಅಹಿಂಸೆ ಮತ್ತು ಪ್ರೇಮ ಸಂದೇಶ ಹರಡುವ ಮೂಲಕ ಒಂಟಿಯಾಗಿ ನೀವು ಸಾಧಿಸಿದ್ದೀರಿ" ಎಂದರು ಮೌಂಟ್ ಬ್ಯಾಟನ್. ಅಹಿಂಸೆಯ ಅಂತಃಸತ್ವ ಎಷ್ಟು ಎಂಬುದನ್ನು ಈ ಮಾತು ಎತ್ತಿ ತೋರಿಸುತ್ತದೆ.

ಅಹಿಂಸೆಯಲ್ಲಿ ಪೂರ್ಣ ನಂಬಿಕೆಯುಳ್ಳ ಜನ ಗಾಂಧೀಜಿಯವರಂತೆ ಅಹಿಂಸೆ ಮತ್ತು ಪ್ರೇಮದಿಂದ ದೇಶದ ಉದ್ದಗಲಕ್ಕೂ ಅಡ್ಡಾಡಿ ಈ ವ್ಯಾಪಕ ಹಿಂಸೆಯನ್ನು ತಡೆಗಟ್ಟಲು ಕೂಡಲೇ ಕಾರ್ಯೋನ್ಮುಖರಾಗದಿದ್ದರೆ, ಹಿಂಸಾಕಾಂಡ ಇಡೀ ದೇಶದಲ್ಲಿ ಅನತಿಕಾಲದಲ್ಲಿಯೇ ಹರಡಿಕೊಳ್ಳುವ ಸಂಭವವಿದೆ. ಆಗ ಈ ನಮ್ಮ ದೇಶ ಆ ಪಕ್ಷ, ಈ ಪಕ್ಷಗಳ ಕೈಲಿರುವುದಿಲ್ಲ. ಗೂಂಡಾಗಳ ಕೈಗೆ ಹೋಗುತ್ತದೆ.

ಗಿರೀಶ್ ಕಾರ್ನಾಡ್‌ರು ಹೇಳುವಂತೆ ಬಡತನ, ಹಸಿವು ಅಥವಾ ದುರಾಸೆಗಳಿಂದ ಹುಟ್ಟುವ ಹಿಂಸೆಗೆ ಪರಿಹಾರ ಕಂಡುಹಿಡಿದುಕೊಳ್ಳಬಹುದು. ಅಮೂರ್ತ ಪರಿಕಲ್ಪನೆಗಳಿಂದ **(Abstract Concept)**, ಅಧ್ಯಾತ್ಮದಲ್ಲಿ ಅಪಾರ್ಥ ಕಲ್ಪಿಸುವುದರಿಂದ **(Philosophical Distortion)**, ಘೋಷಣೆಗಳಿಂದ ಸೃಷ್ಟಿಯಾದ ಹಿಂಸಾಚಾರಗಳು ಮಾನವ ಜೀವನವನ್ನು ಹುರುಳಿಲ್ಲದ್ದಾಗಿ ಮಾಡಿ ಇದಕ್ಕೇನು ಪರಿಹಾರ ಮಾರ್ಗ ಎಂದು ಎಲ್ಲರೂ ಯೋಚಿಸುವಂತಾಗಿದೆ.

ಅಹಿಂಸೆಯ ಕ್ರಿಯಾಶಕ್ತಿಯನ್ನು ಅರ್ಥಮಾಡಿಕೊಂಡಿರುವವರು ಒಂದುಗೂಡಿ ಜನಸಂಘಟನೆ ಮಾಡಬೇಕು. ಅವರು ನಿಷ್ಕ್ರಿಯರಾಗಿರುವುದರಿಂದ ಈ ದುರವಸ್ಥೆ ಈಗ ತಲೆದೋರಿದೆ. ಈ ಜನ ಕೃತಿಗಿಳಿದಾಗಲೇ ಅಹಿಂಸೆಯ ಅಂತಃಶಕ್ತಿಯ ಆವಿರ್ಭಾವವಾಗುವುದು. ಹಿಂಸಾಚಾರದಲ್ಲಿ ತೊಡಗಿರುವವರು ಮಾನವ ಗುಣಗಳನ್ನು ಕಳೆದುಕೊಂಡಿದ್ದಾರೆ. ತಮಗೆ ಹೃದಯ, ಬುದ್ಧಿಗಳಿವೆ ಎಂಬುದನ್ನು ಮರೆತಿದ್ದಾರೆ. ಅವರ ಹೃನ್ಮನಗಳಲ್ಲಿ ಸುಪ್ತವಾಗಿ ಮಲಗಿರುವ ಮಾನವೀಯ ಗುಣಗಳನ್ನು ಜಾಗೃತಗೊಳಿಸುವ ದೊಡ್ಡ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ.

ಜಾತ್ಯಾತೀತ ರಾಜ್ಯ (Secular State)

ಪಾಕಿಸ್ತಾನದಲ್ಲಿ ಮತದ ಆಧಾರದ ಮೇಲೆ ರಾಜ್ಯ ನಡೆಸುತ್ತಾರೆ. ಅಲ್ಲಿ ಒಂದು ಮತದವರ ಸರ್ವಾಧಿಕಾರ ಇದೆ ಎಂದರೂ ತಪ್ಪಾಗುವುದಿಲ್ಲ. ನಮ್ಮಲ್ಲಿ ಹಿಂದೂಗಳು ಬಹುಸಂಖ್ಯಾತರಾಗಿರುವುದರಿಂದ, ಹಿಂದೂರಾಷ್ಟ್ರ ಇದಾಗಬೇಕೆಂದು ಬಯಸುವ ಜನರೂ ನಮ್ಮ ದೇಶದಲ್ಲಿದ್ದಾರೆ. ಭಾರತ ಪಾಕಿಸ್ತಾನಗಳ ಈ ಬಗೆಯ ಹೋಲಿಕೆ ಸರಿಯಲ್ಲ. ಭಾರತ ಅನೇಕ ಧರ್ಮಗಳ ತವರು ಹಾಗೂ ಅನೇಕ ಧರ್ಮಗಳಿಗೆ ಶತಮಾನಗಳಿಂದ ಆಶ್ರಯ ನೀಡುತ್ತಾ ಬಂದಿದೆ. ಹಿಂದೂ ಧರ್ಮ ವಿಶಾಲ ತಳಹದಿಯ ಮೇಲೆ ಕಟ್ಟಲಾದ ಧರ್ಮ. ಇಂಥಾ ಭಾರತದಲ್ಲಿ ಯಾವುದೇ ಬಗೆಯ ಸಂಕುಚಿತತೆ, ದ್ವೇಷಭಾವನೆ, ಈರ್ಷೆ, ಸಣ್ಣತನಗಳಿಗೆ ಅವಕಾಶವಿರಬಾರದು. ನಮ್ಮದು ಧರ್ಮ ನಿರಪೇಕ್ಷ ರಾಜ್ಯ ಎಂದು ನಮ್ಮ ಸಂವಿಧಾನ ಸಾರುತ್ತದೆ. ಇಲ್ಲಿ ಜಾತಿ, ಪಂಥ, ಲಿಂಗ, ಕುಲ ಅಥವಾ ಮತದ ಪರಿಗಣನೆಯಿಲ್ಲದೆ ರಾಜ್ಯದ ದೃಷ್ಟಿಯಲ್ಲಿ ಎಲ್ಲ ಪ್ರಜೆಗಳೂ ಸಮಾನರು. ಕಾನೂನು ಯಾವುದೇ ಪಕ್ಷಪಾತ ಮಾಡುವುದಿಲ್ಲ ಎಂಬುದೇ ಸರ್ವಧರ್ಮ ಸಮಭಾವ ಎಂಬುದರ ಅರ್ಥ. ಅಂತೆಯೇ ಜಾತ್ಯತೀತತೆ ಪ್ರಜಾಪ್ರಭುತ್ವದ ಒಂದು ಬಹುಮುಖ್ಯ ಲಕ್ಷಣ. ನಮ್ಮ ರಾಜಕೀಯ ತೀರ್ಮಾನಗಳನ್ನು ತೆಗೆದುಕೊಳ್ಳುವುದರಲ್ಲಿ ರಾಮ, ರಹೀಮರ ಅಭಿಪ್ರಾಯಗಳಿಗೆ ಸ್ಥಾನವೇ ಇಲ್ಲ. ಧರ್ಮಗಳ ಮಧ್ಯೆ ವಾದವಿವಾದ ಎದ್ದರೆ ಸರ್ಕಾರ ಮಧ್ಯೆ ಪ್ರವೇಶಿಸಿ ಆ ವಾದವಿವಾದಗಳನ್ನು ಬಗೆಹರಿಸಿಕೊಡಬೇಕು. ಸರ್ಕಾರಕ್ಕೆ ಅದು ಸಾಧ್ಯವಾಗಲಿಲ್ಲ ಎನಿಸಿದರೆ ಅದನ್ನು ನ್ಯಾಯಾಲಯಗಳಲ್ಲಿ ಬಗೆಹರಿಸಿಕೊಡಬೇಕು. ಇದನ್ನು ಸಂವಿಧಾನದಲ್ಲಿ ಸ್ಪಷ್ಟಪಡಿಸಲಾಗಿದೆ.

ಯಾವುದೇ ಜಾತಿಯವರು, ಧರ್ಮದವರು ತಮ್ಮವರ ಅಭ್ಯುದಯಕ್ಕೆ ಕೆಲಸ ಮಾಡುವುದು ಜಾತೀಯತೆಯಲ್ಲ. ಇನ್ನೊಂದು ಧರ್ಮ ಅಥವಾ ಜಾತಿಯನ್ನು ದ್ವೇಷ ಮಾಡುವುದಾಗಲಿ, ಶತ್ರು ಭಾವದಿಂದ ನಡೆದುಕೊಳ್ಳುವುದಾಗಲಿ ಜಾತೀಯತೆ ಎನಿಸಿಕೊಳ್ಳುತ್ತದೆ. ಜಾತ್ಯತೀತ ರಾಷ್ಟ್ರದಲ್ಲಿ ಸರ್ಕಾರದ ದೃಷ್ಟಿಯಲ್ಲಿ ಯಾವ ಜಾತಿಯೂ, ಧರ್ಮವೂ ಶ್ರೇಷ್ಠವಲ್ಲ. ಯಾವ ಧರ್ಮದವರೂ, ಜಾತಿಯವರೂ ಕನಿಷ್ಠರಲ್ಲ. ಸರ್ವ ಸಮಭಾವನೆಯಿಂದ ಎಲ್ಲರನ್ನೂ ಕಾಣಬೇಕು. ಸರ್ಕಾರ ಯಾವುದೇ ಒಂದು ಮತದ, ಕೋಮಿನ ಅಥವಾ ಧರ್ಮದ ಪಕ್ಷಪಾತಿ ಎನ್ನುವ ಅನುಮಾನ ಬರಲು ಅವಕಾಶ ನೀಡಬಾರದು. ಬಹುಸಂಖ್ಯಾತರು ಎಂಬ ಕಾರಣಕ್ಕಾಗಿ ಹಿಂದುಗಳಿಗೆ ವಿಶಿಷ್ಟವಾದ ಯಾವ ಹಕ್ಕೂ ಇರುವುದಿಲ್ಲ. ಸವಲತ್ತೂ ದೊರೆಯದು. ಅಲ್ಪಸಂಖ್ಯಾತರು ಎಂದು ಯಾರನ್ನೂ ಎರಡನೇ ದರ್ಜೆ ಪ್ರಜೆಗಳಂತೆ ಕಾಣಲು ಆಸ್ಪದವೂ ಇಲ್ಲ. ಹಾಗೆಯೇ ಅಲ್ಪಸಂಖ್ಯಾತರಿಗೆ, ಇತರರಿಗೆ ದೊರೆಯದ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟು ಅವರನ್ನು ತಲೆಯ ಮೇಲೆ ಕೂಡಿಸಿಕೊಳ್ಳುವುದೂ ಸರ್ಕಾರದ ಕೆಲಸವಲ್ಲ. ದೇವಾಲಯದಲ್ಲಿ, ಮಸೀದಿಯಲ್ಲಿ, ಗುರುದ್ವಾರದಲ್ಲಿ ಆಯುಧಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದೂ ಅಪರಾಧ. ಅನೇಕ ಜಾತಿಮತ ಪಂಥಗಳಿಗೆ ಸೇರಿದ ಜನರಿರುವ ಈ ನಮ್ಮ ಭಾರತ ಧರ್ಮನಿರಪೇಕ್ಷ ರಾಷ್ಟ್ರವಾಗಿರಬೇಕಾದದ್ದು ಅನಿವಾರ್ಯ. ಭೌತಿಕ ವಿಚಾರಗಳಲ್ಲಿ ಜಾತಿಧರ್ಮಗಳು ತಲೆಹಾಕದಂತೆ ರಾಜ್ಯ ನೋಡಿಕೊಳ್ಳಬೇಕು. ಕಾನೂನು, ಶಾಂತಿ ಪಾಲನೆಯ ಕಾರ್ಯಕ್ರಮ ರೂಪಿಸುವಾಗ ಯಾವುದೇ ದೇವರೂ ಜಾತಿಯೂ, ಧರ್ಮವೂ ಅಡ್ಡ ಬರದಂತೆ ನೋಡಿಕೊಳ್ಳಬೇಕು. ಜಾತ್ಯತೀತತೆ ಒಂದು ಮತಕ್ಕೆ, ಒಂದು ಪಂಥಕ್ಕೆ. ಒಂದು ಧರ್ಮಕ್ಕೆ ಅನ್ವಯಿಸುವಂಥದಲ್ಲ. ಅದು ಭಾರತದಲ್ಲಿ ವಾಸಿಸುವ ಎಲ್ಲರಿಗೂ ಅನ್ವಯವಾಗಬೇಕು. ಎಲ್ಲರೂ ಅದಕ್ಕೆ ಸ್ಪಂದಿಸಬೇಕು. ಯಾರೇ ಆಗಲಿ ತಮ್ಮ ಧಾರ್ಮಿಕ ಹಕ್ಕನ್ನು ಚಲಾಯಿಸುವ ಅಧಿಕಾರವನ್ನು ಏಕಪಕ್ಷೀಯವಾಗಿ ಕೇಳಿದಲ್ಲಿ ಅಂಥವರನ್ನು

ಪ್ರತ್ಯೇಕತಾವಾದಿಗಳು, ರಾಷ್ಟ್ರದ್ರೋಹಿಗಳು ಎಂದೇ ಪರಿಗಣಿಸಬೇಕು. ಸರ್ಕಾರ ಜಾತಿ, ಮತ, ಪಂಥದ ಆಧಾರದ ಮೇಲೆ ಜನರನ್ನು ಗುರುತಿಸಲು ಹೋಗಬಾರದು. ಪ್ರಜೆಗಳೂ ಪ್ರಭುತ್ವವೂ ಜನರಲ್ಲಿ ಭಾವೋದ್ರೇಕ ಉಂಟು ಮಾಡಲೂ, ಅಮಲೇರಿಸಲೂ ಧರ್ಮವನ್ನು ಬಳಸಬಾರದು. ರಾಷ್ಟ್ರವನ್ನು ಗುರುತಿಸುವಾಗ ಯಾರದೇ ಜಾತಿ, ಮತ, ಪಂಥ, ಅಥವಾ ಧರ್ಮವನ್ನು ಗಣನೆಗೆ ತೆಗೆದುಕೊಳ್ಳಬಾರದು. ಪ್ರಜೆಯ ನಿಷ್ಠೆ ಪ್ರಧಾನವಾಗಿ ಸಂವಿಧಾನಕ್ಕೆ ಮತ್ತು ರಾಷ್ಟ್ರಕ್ಕೆ. ರಾಷ್ಟ್ರೀಯತೆ ಬಲಗೊಳ್ಳಬೇಕಾದರೆ ವಿವಿಧ ಧರ್ಮಗಳನ್ನು ಅನುಸರಿಸುತ್ತಿರುವವರ ಮಧ್ಯೆ ಅರಿವು ಮತ್ತು ಪರಮತ ಸಹಿಷ್ಣುತೆ ಬೆಳೆಯಬೇಕು. ಅದಿಲ್ಲವಾದರೆ ವೈಷಮ್ಯ, ಜಗಳ, ಬಡಿದಾಟ, ರಕ್ತದ ಓಕುಳಿ ಇವುಗಳಲ್ಲಿ ಸಂಪೂರ್ಣವಾಗಿ ಅದ್ದಿಹೋಗಿ ರಾಷ್ಟ್ರ ನುಚ್ಚುನೂರಾಗುತ್ತದೆ.

ತನ್ನ ಧರ್ಮ, ತನ್ನ ಜಾತಿ, ತನ್ನ ಭಾಷೆ ಇವೆಲ್ಲಕ್ಕಿಂತ ಹೆಚ್ಚಾಗಿ ತನ್ನ ರಾಷ್ಟ್ರದ ಬಗೆಗೆ ಭಾರತೀಯರಲ್ಲಿ ಅಭಿಮಾನ ಬೆಳೆಯಬೇಕಾದದ್ದು ಅವಶ್ಯಕ. ರಾಷ್ಟ್ರೀಯತೆಗೂ, ಭಾಷೆಗೂ, ಘರ್ಷಣೆಯಾಗದಿರಲೆಂದು ನಮ್ಮ ರಾಜಕೀಯ ಧುರೀಣರು ಭಾಷಾವಾರು ಪ್ರಾಂತಗಳನ್ನು ರಚಿಸಿದರು. ಭಾಷೆಯ ಬೆಳವಣಿಗೆಗೂ ಆ ಮೂಲಕ ಪ್ರಾಂತದ ವಿಕಾಸಕ್ಕೂ ಎಡೆಮಾಡಿಕೊಟ್ಟರು. ಧರ್ಮ ಜಾತಿಗಳ ಹಾಗೂ ಭಾಷೆಯ ನಿಷ್ಠೆ ರಾಷ್ಟ್ರೀಯತೆಗೆ ಕಾಲ್ತೊಡಕಾಗಬಾರದು. ಪ್ರಭುತ್ವ ಜಾತಿ, ಮತ, ಪಂಥಗಳನ್ನು ಯಾವುದೇ ಕಾರಣದಿಂದ ಪ್ರೋತ್ಸಾಹಿಸಬಾರದು.

ಗಾಂಧೀಜಿ ಬಗೆಗೆ ಗಣ್ಯರು

ಜೋಸೆಫ್ ಡೋಕ್ (Joseph Doke)

ಇವರು ಜೋಹಾನ್ಸ್‌ಬರ್ಗ್‌ನಲ್ಲಿ ಬ್ಯಾಪ್ಟಿಸ್ಟ್ ಚರ್ಚಿನ ಪಾದ್ರಿಯಾಗಿದ್ದವರು. ಇವರು ಗಾಂಧೀಜಿಯಲ್ಲಿ ಏಸುಕ್ರಿಸ್ತನನ್ನು ಕಂಡರು. **An Indian Patriot in South Africa** ಎಂಬ ಶೀರ್ಷಿಕೆಯಡಿಯಲ್ಲಿ ಡ್ರೋಕ್ ಒಂದು ಜೀವನ ಚರಿತ್ರೆ ಬರೆದರು. (1909 ಲಂಡನ್ನಿನಲ್ಲಿ ಪ್ರಕಟಣೆ) ಗಾಂಧೀಜಿಯ ಸಂಗವೇ ಒಂದು ಉಚ್ಚ ಶಿಕ್ಷಣ ಎಂದ ಇವರು ಇಂಗ್ಲೆಂಡಿನ ಜನರಿಗೆ ಗಾಂಧೀಜಿಯ ಪರಿಚಯ ಮಾಡಿಕೊಡಲು ಬರೆದ ಪುಸ್ತಕ ಇದು.

ಟಾಲ್‌ಸ್ಟಾಯ್

ಡೋಕ್ ಅವರ ಪುಸ್ತಕ ಓದಿ ಪ್ರಭಾವಿತರಾದ ರಷ್ಯ ದೇಶದ ಟಾಲ್‌ಸ್ಟಾಯ್ ಗಾಂಧೀಜಿಗೆ ಬರೆದ ಮೆಚ್ಚುಗೆಯ ಪತ್ರದಲ್ಲಿ (ಸೆಪ್ಟೆಂಬರ್ 1910) ಹೀಗೆ ಹೇಳಿದರು: ನೀವು ಮಾಡುತ್ತಿರುವ ಕೆಲಸ ಅಗತ್ಯವಾಗಿ ಆಗಬೇಕಾದ್ದು. ಪ್ರಪಂಚದಲ್ಲಿಂದು ಜರುಗುತ್ತಿರುವ ವಿದ್ಯಮಾನಗಳಲ್ಲಿ ಅತಿ ಮಹತ್ವದ್ದು ಎಂದರೆ ಈ ಕದನಕೋಲಾಹಲ ಹಾಗೂ ಪ್ರೀತಿ, ಪಶುತ್ವ ಮತ್ತು ಹಿಂಸೆಯ ನಡುವಿನ ಹೋರಾಟ.

ಹೋಮ್ಸ್

ಅಮೆರಿಕದ ಜನರಿಗೆ ಗಾಂಧೀಜಿಯ ಪ್ರತಿಭೆಯನ್ನು ಪರಿಚಯ ಮಾಡಿಕೊಟ್ಟವರು, ನ್ಯೂಯಾರ್ಕ್ ನಗರದ ಪ್ರಮುಖ ಚರ್ಚೊಂದರ ಪಾದ್ರಿ ಹೋಮ್ಸ್ ಅವರು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಗಿಲ್ಬರ್ಟ್ ಮರ‍್ರೆ **Gilbert Murray** ಬರೆದ **on concentious objection to participation in war** ಓದಿದರು. **Hibbert**

Journal ಎಂಬ ಪತ್ರಿಕೆಯಲ್ಲಿ ಗಾಂಧೀಜಿ ಕುರಿತಾದ ನೀತಿಬೋಧಕ ಲೇಖನವನ್ನು ಬರೆದರು. 1930ರಲ್ಲಿ 'unity' ನಿಯತಕಾಲಿಕೆಯಲ್ಲಿ ಮತ್ತೆ ಅದನ್ನು ಪ್ರಕಟಿಸಿದರು. ಅಲ್ಲದೆ ತಮ್ಮ ಚರ್ಚ್ ಭಾಷಣದಲ್ಲಿ 'ಪ್ರಪಂಚದ ಅತಿ ಶ್ರೇಷ್ಠ ವ್ಯಕ್ತಿ ಈ ಮಹಾಪುರುಷ ಗಾಂಧಿ' ಎಂದು ಘಂಟಾಘೋಷವಾಗಿ ಸಾರಿದರು.

ರೊಮ್ಯೆನ್ ರೊಲ್ಯಾಂಡ್ Romain Rolland

1924ರಲ್ಲಿ 'Mahatma Gandhi' ಚರಿತ್ರೆ ಬರೆದ ರೊಮೆರೋಲಾ ಸುಪ್ರಸಿದ್ಧ ಫ್ರೆಂಚ್ ಕಾದಂಬರಿಕಾರರು ಹಾಗೂ ಚಿಂತಕರು. ಅವರು ತಮ್ಮ ಪುಸ್ತಕದಲ್ಲಿ ಗಾಂಧೀಜಿಯನ್ನು ಮತ್ತೊಬ್ಬ ಏಸುಕ್ರಿಸ್ತ ಎಂದು ಬಣ್ಣಿಸಿದ್ದಾರೆ. ರೊಮೆರೋಲಾ ಅವರ ಈ ಪುಸ್ತಕದಿಂದ ನೌಕಾದಳದ ಮುಖ್ಯಸ್ಥರಾಗಿದ್ದ Admiral Slade ಎಂಬುವವರ ಮಗಳು ಮೆಡೆಲೀನ್ ಪ್ರಭಾವಿತಳಾಗಿ ಸುಖಸಮೃದ್ಧಿಯ ತನ್ನ ಜೀವನವನ್ನು ತೊರೆದು ಭಾರತಕ್ಕೆ ಹೋಗಿ ಗಾಂಧೀಜಿಯ ಆಶ್ರಮದಲ್ಲಿ ಶಿಸ್ತಿನ ಜೀವನವನ್ನು ನಡೆಸುತ್ತಾ ಕೊನೆಯವರೆಗೂ ಉಳಿದರು. ಗಾಂಧೀಜಿ, ಇವರಿಗೆ "ಮೀರಾ" ಎಂಬ ಹೆಸರನ್ನಿಟ್ಟರು. ಈ ಪುಸ್ತಕ ಓದಲು ಆರಂಭಿಸಿದೆ. ಅದನ್ನು ಕೆಳಗೆ ಇಡಲಾಗಲಿಲ್ಲ. ಓದಿದೆ, ಮತ್ತೊಮ್ಮೆ ಓದಿದೆ. ಓದುತ್ತ ಹೋದಂತೆ ನನ್ನ ಹೃದಯದಲ್ಲಿ ಅರುಣೋದಯವಾದಂತೆ, ಅದು ಪ್ರಕಾಶಮಾನವಾಗಿ ಪ್ರಜ್ವಲಿಸತೊಡಗಿತು. ಆ ಕ್ಷಣದಿಂದಲೇ ನನ್ನ ಜೀವನವನ್ನು ಬಾಪೂಗೆ ಮೀಸಲಾಗಿಡಬೇಕೆಂದು ನಿರ್ಧರಿಸಿದೆ' ಎಂದು ಮೆಡಲೀನ್ ಹೇಳುತ್ತಾರೆ.

ಮಾರ್ಟಿನ್ ಲೂಥರ್ ಕಿಂಗ್ Martin Luther King (Jr)

1960ರಲ್ಲಿ ಕೂಡ ಕಪ್ಪು ವರ್ಣೀಯರಿಗೆ ನಾಗರಿಕರಿಗೆ ಅಮೆರಿಕದಲ್ಲಿ ಸಾಮಾನ್ಯ ಮಾನವೀಯ ಹಕ್ಕುಗಳು ಕನಸಿನ ಗಂಟಾಗಿಯೇ ಉಳಿದಿತ್ತು. ಅದಮ್ಯಚೇತನರಾದ ನೀಗ್ರೋ ಮುಖಂಡ ಜ್ಯೂನಿಯರ್ ಮಾರ್ಟಿನ್

ಲೂಥರ್ ಕಿಂಗ್ ವರ್ಣದ್ವೇಷದ ವಿರುದ್ಧ ಹಾಗೂ ನೀಗ್ರೋಗಳ ಹಕ್ಕಿಗಾಗಿ ಹಿಂಸಾತ್ಮಕ ಹೋರಾಟ ನಡೆಸಿದರು. ಆದರೆ ಅವರ ಹೋರಾಟವನ್ನು ಹತ್ತಿಕ್ಕಲಾಯಿತು. ಆ ಸಮಯದಲ್ಲೇ ಗಾಂಧೀಜಿಯನ್ನು ಭಾರತದಲ್ಲಿ ಭೇಟಿಮಾಡಿ ಅಮೇರಿಕಕ್ಕೆ ಹಿಂದುರಿಗಿದ್ದ Adi Joseph Mordecin ಅವರ ಭಾಷಣ ಕೇಳಿದ ಕಿಂಗ್, ಅದರಿಂದ ಪ್ರಭಾವಿತರಾಗಿ ಗಾಂಧಿ ಸಾಹಿತ್ಯವನ್ನು ತರಿಸಿಕೊಂಡು ಓದಲಾರಂಭಿಸಿದರು. **Stanly Jones 1948**ರಲ್ಲಿ ಬರೆದಿದ್ದ **Mahatma Gandhi - An Interpretation** ಪುಸ್ತಕ ಓದಿದರು. ಅಹಿಂಸಾ ಪದ್ಧತಿಯಲ್ಲಿ ಪ್ರೀತಿಯ ಮಹತ್ವವನ್ನು ಒತ್ತಿಹೇಳುವ ಕ್ರಿಶ್ಚಿಯನ್ ಸಿದ್ಧಾಂತವನ್ನು ಗಾಂಧೀಜಿ ಅಳವಡಿಸಿಕೊಂಡಿರುವುದನ್ನು ಮನಗಂಡ ಲೂಥರ್‌ಕಿಂಗ್ ದಬ್ಬಾಳಿಕೆಗೆ ಒಳಗಾದ ತನ್ನ ಜನಾಂಗದ ಉದ್ಧಾರಕ್ಕೆ ಸತ್ಯಾಗ್ರಹವೇ ಅತ್ಯಂತ ಶಕ್ತಿಯುತವಾದ ಆಯುಧ ಎಂಬ ತೀರ್ಮಾನಕ್ಕೆ ಬಂದರು.

ಕಿಂಗ್ ಹಿಂಸೆಗೆ ವಿದಾಯ ಹೇಳಿ ಗಾಂಧಿಮಾರ್ಗದಲ್ಲಿ ಮುನ್ನಡೆದರು. ತಮ್ಮ ನ್ಯಾಯವಾದ ಬೇಡಿಕೆಗಳನ್ನು **1963**ರ ಆಗಸ್ಟ್ 28ರಂದು ಅಮೆರಿಕದ ಸರ್ಕಾರದ ಮುಂದಿಡಲು ತೀರ್ಮಾನಿಸಿದರು. ವಾಷಿಂಗ್ಟನ್ನಿನ ಅಬ್ರಾಹಂ ಲಿಂಕನ್ ಭವನದ ಬಳಿ 2 ಲಕ್ಷ ಕಪ್ಪು ವರ್ಣೀಯರು ಸಮಾವೇಶಗೊಂಡರು. ಕಪ್ಪು ವರ್ಣೀಯರ ಮೆರವಣಿಗೆ ತೆಗೆದರು. ಬಿಳಿಯರ ಮನಕರಗುವಂತೆ ತಮ್ಮ ಭಾಷಣ ಮಾಡಿ ಹೃದಯಂಗಮವಾಗಿ ತಮ್ಮ ಸೋದರ-ಸೋದರಿಯರ ಬೇಡಿಕೆಯನ್ನಿಟ್ಟರು. ಅಮೆರಿಕೆಯ ಅಂದಿನ ಅಧ್ಯಕ್ಷ ಕೆನಡಿ ಅದಕ್ಕೆ ಸಮರ್ಪಕವಾಗಿ ಸ್ಪಂದಿಸಿದರು. ಹೀಗಾಗಿ ಕಿಂಗ್‌ನ ನೈತಿಕ ನಿಲುವಿಗೆ, ಅಹಿಂಸಾತತ್ವಕ್ಕೆ ಗೆಲುವಾಯಿತು. ಕಿಂಗ್ ಅಮೆರಿಕೆಯ ಗಾಂಧಿಯಾಗಿ ರೂಪುಗೊಂಡರು.

ಅಟೆನ್ ಬರೋ

ಪಾಶ್ಚಾತ್ಯ ದೇಶಗಳಲ್ಲಿ ಗಾಂಧೀಜಿಯ ಸಂದೇಶಗಳು ಗ್ರಂಥಗಳ ಮೂಲಕ, ಲೇಖನಗಳ ಮೂಲಕ, ರೇಡಿಯೋ ಮೂಲಕ ಪ್ರಚಾರ ಪಡೆದಿದ್ದವು. ಆದರೆ ಚಲನಚಿತ್ರದ ಮೂಲಕ ಆ ಗಾಂಧಿಯನ್ನು ಪರಿಚಯಿಸುವ ಕೆಲಸವನ್ನು Sir Richard Attenborough ಮಾಡಿದರು. ಭಾರತೀಯ ದೂತಾವಾಸದಲ್ಲಿ ಅಧಿಕಾರಿಯಾಗಿದ್ದ ಕೊಠಾರಿ ಎಂಬುವವರು ಗಾಂಧಿ ಚಲನಚಿತ್ರ ಮಾಡಬೇಕೆಂದು ನಟ ಸಾಮ್ರಾಟ್ ಸರ್ ರಿಚರ್ಡ್ ಅಟೆನ್‌ಬರೊ ಅವರನ್ನು ಕೋರಿದಾಗ ಅವರು, ಗಾಂಧಿ ಬಗೆಗೆ ತಮಗೇನೂ ಗೊತ್ತಿಲ್ಲವೆಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು. ಆಗ ಕೊಠಾರಿ ಅವರು ಅಟೆನ್‌ಬರೋಗೆ ಲೂಯಿಫಿಶರ್ ರಚಿಸಿದ 504 ಪುಟಗಳ ವಿಸ್ತಾರವಾದ ಗಾಂಧಿ ಜೀವನಚರಿತ್ರೆಯನ್ನು ಕೊಟ್ಟರು. ಅದನ್ನು ಓದಿದ ಅಟನ್‌ಬರೋ ಮೂಕವಿಸ್ಮಿತರಾದರು. ಗಾಂಧಿ ಚಿತ್ರ ತಯಾರಿಸುವ ನಿರ್ಧಾರ ತೆಗೆದುಕೊಂಡರು. ಬಹಳ ವೆಚ್ಚ ಬರಬಹುದೆಂದು ತಿಳಿದ ಅಟೆನ್‌ಬರೋ, ಧನಸಹಾಯಕ್ಕಾಗಿ ಪ್ರತಿಷ್ಠಿತ ಚಲನಚಿತ್ರ ಸಂಸ್ಥೆಯಾದ ರ್‍ಯಾಂಕ್ ಆರ್ಗನೈಸೇಷನ್‌ನ ಡೇವಿಸ್ ಅವರನ್ನು ಭೇಟಿ ಮಾಡಿದರು.

Why on Earth you want to make a film on some one like Mahatma Gandhi? The world knows nothing about him and I don't believe that they would be interested to knowing about him. I am convinced that it will be enormously expensive and I am sure- I must tell you this-that it has no box office potential whatever.

ಡೇವಿಸ್ ಅವರ ಪ್ರತಿಕ್ರಿಯೆ ನಿರಾಶಾದಾಯಕವಾಗಿತ್ತು. ಅರೆ ನಗ್ನ ಫಕೀರನ ಈ ಚಲನಚಿತ್ರದಲ್ಲಿ ಯಾರಿಗೂ ಆಸಕ್ತಿ ಇಲ್ಲ. ಈ ನಿಮ್ಮ ಪ್ರಯತ್ನಕ್ಕೆ ವಿಫಲತೆ ಕಟ್ಟಿಟ್ಟದ್ದು. ಎಲ್ಲಾ ಬಿಟ್ಟು ಗಾಂಧಿ ಚರಿತ್ರೆಯನ್ನು ಏಕೆ ಆರಿಸಿಕೊಂಡಿದ್ದೀರಿ? ಎಂದು ಅವರು ಕೇಳಿದರಲ್ಲದೆ ಚಲನಚಿತ್ರದ ಸಂಭಾಷಣೆಯ ಕರಡು ನೋಡದೇ ಅದರ ಗುಣಮಟ್ಟವನ್ನು ನಿರ್ಧರಿಸಲಾಗದು ಎಂದು ತಮ್ಮ ಮಾತಿನ ಒಗ್ಗರಣೆ ಹಾಕಿದರು. ಇದನ್ನು ಆಶಾದಾಯಕ ಸಕಾರಾತ್ಮಕ ಪ್ರತಿಕ್ರಿಯೆ ಎಂದೇ ಅಟೆನ್‌ಬರೋ ಭಾವಿಸಿದರು. ಅಟೆನ್‌ಬರೋ ಸಂಭಾಷಣೆ ಬರೆದು ಡೇವಿಸ್‌ಗೆ ಕೊಟ್ಟರು. ಅಟೆನ್‌ಬರೋಗೆ ಡೇವಿಸ್ ಅವರು ತಮ್ಮ ಸ್ವಂತ ಹಣದಿಂದ 5000 ಪೌಂಡ್ ಸಾಲವಾಗಿ ಕೊಟ್ಟರು. ಅಟೆನ್‌ಬರೋ ಬೇರೆ ಬೇರೆಯವರಿಂದ ಸಾಲ ಎತ್ತಲು ಆರಂಭಮಾಡಿದರು. ಅಟೆನ್‌ಬರೋ 1961 ರಿಂದ 1981ರವರೆಗೆ 20 ವರ್ಷಗಳ ಕಾಲದ ಅವಿಶ್ರಾಂತ ದುಡಿಮೆಯಿಂದ, ಅಪಾರ ತ್ಯಾಗಮನೋಭಾವದಿಂದ ನಿಷ್ಠೆಯಿಂದ 'ಗಾಂಧಿ' ಚಿತ್ರ ತಯಾರಿಸಿದರು.

ದೀನದಲಿತರ ಬಂಧು, ಅಹಿಂಸೆಯ ಸಾಕಾರಮೂರ್ತಿ, ಮಹಾಮಾನವತಾವಾದಿ ಗಾಂಧೀಜಿಯ ಆಚಾರವಿಚಾರಗಳು ಜಗತ್ತಿನ ಮೂಲೆಮೂಲೆಗೂ ತಲಪಬೇಕೆಂಬ ಅವರ ಹಂಬಲ 1981ರ ಜುಲೈನಲ್ಲಿ ಕಾರ್ಯಗತವಾಯಿತು. **'It seemed to me infinitely important that the work and faith of this remarkable man should be known to the widest possible number of people'** ಎಂದರು ಅಟೆನ್‌ಬರೋ ಗಾಂಧಿಚಿತ್ರವನ್ನು ಕೊಲಂಬಿಯಾ ವಿತರಣ ಸಂಸ್ಥೆಯ ಮೂಲಕ ಪ್ರಪಂಚದಾದ್ಯಂತ ಬಿಡುಗಡೆ ಮಾಡಲಾಯಿತು. ಪಾಕಿಸ್ತಾನ ಸೇರಿದಂತೆ ವಿಶ್ವದ ಎಲ್ಲ ಸಿನಿಮಾ ಮಂದಿರಗಳೂ ಗಾಂಧಿ ಚಿತ್ರವನ್ನು ಪ್ರದರ್ಶಿಸಿದವು. ಅಮೆರಿಕ ಒಂದರಲ್ಲೇ ಕೆಲವು ವಾರಗಳಲ್ಲಿ 38 ಮಿಲಿಯನ್ ಡಾಲರ್ ಸಂಗ್ರಹವಾಯಿತು. ಈ ಚಿತ್ರ ತಯಾರಿಕೆಗೆ 22 ಮಿಲಿಯನ್ ಡಾಲರ್

ಖರ್ಚಾಗಿತ್ತು. Times ಪತ್ರಿಕೆ 'ಇದೊಂದು ತಪ್ಪಿಸಿಕೊಳ್ಳಬಾರದ, ನೋಡಲೇಬೇಕಾದ ಚಿತ್ರ' ಎಂದು ಲೇಖನ ಬರೆಯಿತು.

ಅರ್ನಾಲ್ಡ್ ಟಾಯಿನ್‌ಬಿ

ಸುಪ್ರಸಿದ್ಧ ಆಂಗ್ಲ ಇತಿಹಾಸ ತಜ್ಞ **Arnold Toyn Bee** ತಮ್ಮ ಪುಸ್ತಕ **Study of History**ದಲ್ಲಿ ಗಾಂಧಿತತ್ವಗಳ ಪ್ರಸ್ತುತತೆ ಬಗೆಗೆ ಬರೆದಿದ್ದಾರೆ. **It is already becoming clear that a chapter which had a western beginning will have to have an Indian ending if it is not to end in the self-destruction of the human race. At this supremely dangerous moment in human history the only way of salvation for mankind is the Indian way-Emperor Ashoka's and Mahatma Gandhi's principles of non-voilence and Sri Ramakrishna's testimony to the harmony of Religions.**

ನೊಬೆಲ್ ಪ್ರಶಸ್ತಿ ಪುರಸ್ಕೃತರು

ಇತ್ತೀಚೆಗೆ 50 ಜನ ನೊಬೆಲ್ ಪಾರಿತೋಷಕ ಪುರಸ್ಕೃತರು ಒಂದು ಜಂಟಿ ಹೇಳಿಕೆ ನೀಡಿ, ಪ್ರಪಂಚದ ಬಡಜನರಿಗೆ ಅನ್ಯಾಯದ ಕಾಯಿದೆಗಳನ್ನು ಧಿಕ್ಕರಿಸಲು ಆದೇಶ ನೀಡಿದ ಇವರು, ಗಾಂಧೀಜಿಯಿಂದ ಈ ವಿಷಯದಲ್ಲಿ ಸ್ಫೂರ್ತಿ ಪಡೆಯಬೇಕೆಂದು ತಿಳಿಸಿದ್ದಾರೆ.

ನೆಲ್ಸನ್ ಮಂಡೇಲಾ

ನೆಲ್ಸನ್ ಮಂಡೇಲಾ ತಮ್ಮ ದೇಶಕ್ಕೆ ಸ್ವಾತಂತ್ರ್ಯ ಸಂಪಾದಿಸುವಲ್ಲಿ ತಾವು ಗಾಂಧಿ ಮಾರ್ಗ ತುಳಿದುದಾಗಿ ಸ್ಪಷ್ಟಪಡಿಸಿದ್ದಾರೆ. ನೆಲ್ಸನ್ ಮಂಡೇಲಾ ತಮ್ಮ ದೇಶದ ಬಿಡುಗಡೆಗಾಗಿ 27 ವರ್ಷಗಳ ಕಾಲ ಸೆರೆಮನೆಯಲ್ಲಿ ದಿನಗಳನ್ನು ಕಳೆದಿದ್ದಾರೆ.

ಮೇರಿ ಕಿಂಗ್

ಜಮನಾಲಾಲ್ ಬಜಾಜ್, ಅಂತರರಾಷ್ಟ್ರೀಯ ಪ್ರಶಸ್ತಿ ಪಡೆದ 'United Nations University for Peace' ನಲ್ಲಿ ಪ್ರೊಫೆಸರ್ ಆಗಿರುವ Mary King ಹೀಗೆ ಹೇಳಿದ್ದಾರೆ. 'I am deeply convinced that Gandhi's thoughts have a great utility today than ever before'.


ಬಿಬಿಸಿ

BBC ಗಾಂಧಿಜಿ ಜೀವನ ಸಾಧನೆ ಕುರಿತಂತೆ ಸುದೀರ್ಘ ಅವಧಿಯ ಕಾರ್ಯಕ್ರಮಗಳನ್ನು ಬಿತ್ತರಿಸಿತು. ಅದರ ಶೀರ್ಷಿಕೆ Talking of Gandhi.

ಇಂಗ್ಲೆಂಡ್ ಆಫ್ರಿಕಾ ಭಾರತಗಳಿಗೆ ಭೇಟಿ ಇತ್ತು ಗಾಂಧಿ ಸಂಪರ್ಕ ಹೊಂದಿದ್ದ Mary King ಗಾಂಧಿ ಅಭಿಮಾನಿಗಳು ಮತ್ತು ವಿರೋಧಿಗಳನ್ನು ಭೇಟಿ ಮಾಡಿದ್ದರ ಫಲವಾಗಿ 15 ಮೈಲ್ ಉದ್ದದ ಟೇಪನ್ನು ಬಿಬಿಸಿ ತಯಾರಿಸಿತು. ವಿದೇಶಿಯರೊಬ್ಬನನ್ನು ಕುರಿತು ಬ್ರಿಟನ್‌ನಲ್ಲಿ ಇಂತಹ ಕಾರ್ಯಕ್ರಮ ಎಂದೂ ಪ್ರಸಾರಗೊಂಡಿಲ್ಲ.

ಭಾರತ ಸರ್ಕಾರ 1919ರಲ್ಲಿ ಪ್ರಕಟಿಸಿದ ವರದಿಯಲ್ಲಿ Mr. Gandhi is generally considered as a man of high ideals and complete selflessness. In his case, he possesses the added strength that his manners are not confined to any religion and his readiness to take up the cudgels on behalf of any individual or sect whom he regards as being oppressed, has endeared him to the masses of his country. Believing as he does on the supremacy of the soul force over material might, Mr. Gandhi was led to believe that it was his duty to employ against the Rowellet Act that weapon of Passive Resistance which he had used effectively in South Africa.

ಲೇಖಕರ ಪರಿಚಯ



ಡಾ. ಎಚ್.ಎಸ್. ದೊರೆಸ್ವಾಮಿ

ದೊರೆಸ್ವಾಮಿ ಅವರು ಏಪ್ರಿಲ್ 10, 1918ರಲ್ಲಿ ಹಾರೋಹಳ್ಳಿ ಯಲ್ಲಿ ಜನಿಸಿದವರಾಗಿದ್ದಾರೆ. ಮಹಾತ್ಮ ಗಾಂಧಿ ಅವರ "ಮೈ ಅರ್ಲಿ ಲೈಫ್" ಕೃತಿಯಿಂದ ಪ್ರೇರಿತರಾಗಿ ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಅವರ ಪ್ರೌಢ ಶಿಕ್ಷಣದ ಸಮಯದಲ್ಲಿ, ಬೆಂಗಳೂರಿನಲ್ಲಿ ಸ್ವಾತಂತ್ರ್ಯ ಜಾಗೃತಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಎಲ್ಲ ನಾಯಕರ ಜೊತೆ ಇವರನ್ನೂ ಬಂಧಿಸಲಾಯಿತು. ಆನಂತರ ವಿದ್ಯಾರ್ಥಿಗಳನ್ನು ಸಂಘಟಿಸಿ ಅನೇಕ ಹೋರಾಟಗಳನ್ನು ನಡೆಸಿದರು. ಇದರಿಂದಾಗಿ ಬೆಂಗಳೂರಿಗೆ ಆಗಮಿಸುತ್ತಿದ್ದ ಅನೇಕ ನಾಯಕರುಗಳ ಒಡನಾಟ ಹೆಚ್ಚಾಯಿತು. ಇವರು ಬಿ.ಎಸ್.ಸಿ ಪದವಿ ಪೂರ್ಣಗೊಳಿಸಿ, ಉಪನ್ಯಾಸಕರಾಗಿ ವೃತ್ತಿಯನ್ನು ಆರಂಭಿಸಿದರು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಪಾಲ್ಗೊಂಡರು. ಅವರ ಸಹೋದರ ಹೆಚ್. ಎಸ್. ಸೀತಾರಾಮ್, ಸರ್ದಾರ್ ವೆಂಕಟರಾಮಯ್ಯ ಮತ್ತು ಎ.ಜಿ. ರಾಮಚಂದ್ರರಾವ್ ಬ್ರಿಟೀಷರ ವಿರುದ್ಧ ಪ್ರತಿಭಟನೆಯನ್ನು ಆಯೋಜಿಸಿದರು. ಎಚ್.ಎಸ್. ಸೀತಾರಾಂ ನಂತರ ಬೆಂಗಳೂರಿನ ಮೇಯರ್ ಆಗಿಯೂ ಸೇವೆ ಸಲ್ಲಿಸಿದ್ದರು. ಸರ್ಕಾರಿ ದಾಖಲೆಗಳನ್ನು ಹಾನಿ ಮಾಡಲು ಬಳಸಲು ಟೈಮ್ ಬಾಂಬ್‌ನ್ನು ತಯಾರಿಸಿದ ಆರೋಪದಲ್ಲಿ ಹೆಚ್.ಎಸ್.ಡಿ. ಅವರು 14 ತಿಂಗಳ ಕಾಲ ಸೆರೆವಾಸ ಅನುಭವಿಸಬೇಕಾಯಿತು. ಅನಂತರ ಗಾಂಧಿ ಅವರ ತತ್ವ ಸಿದ್ಧಾಂತಗಳಿಂದ ಪ್ರೇರಿತರಾಗಿ ಅಹಿಂಸೆ ಮತ್ತು ಸತ್ಯಾಗ್ರಹದ ಆದರ್ಶಗಳನ್ನು ಅನುಸರಿಸಲು ನಿರ್ಧರಿಸಿದರು. ಇವರು ಸಾಹಿತ್ಯ ಮಂದಿರವೆಂಬ ಪುಸ್ತಕ ಮಳಿಗೆ ಮತ್ತು ಪ್ರಕಾಶನ ಡಿಪೋವನ್ನು ಸ್ಥಾಪಿಸಿದರು. ಅಲ್ಲಿ ಆರ್.ಕೆ. ನಾರಾಯಣ್ ಮತ್ತು ಕೆ.ಎಸ್. ನರಸಿಂಹಸ್ವಾಮಿ ಇನ್ನೂ ಮುಂತಾದವರು ಇವರ ಆತ್ಮೀಯ ಬಳಗದಲ್ಲಿದ್ದರು.

ಪತ್ರಕರ್ತರಾಗಿ ಹೆಚ್.ಎಸ್.ಡಿ. : "ಪೌರವಾಣಿ" ಪತ್ರಿಕಾ ಸಂಪಾದಕತ್ವವನ್ನು 1947ರ ಜನವರಿಯಲ್ಲಿ ಹಿಂದಿನ ಸಂಪಾದಕರಾಗಿದ್ದ ಭದ್ರಣ್ಣ ಅವರಿಂದ ಪಡೆದ ನಂತರ, ಮೈಸೂರಿನಲ್ಲಿದ್ದ ಸಾಹಿತ್ಯ ಮಂದಿರ ಪ್ರಕಾಶನ ಮತ್ತು ಪುಸ್ತಕ ಮಳಿಗೆಯನ್ನು ಖಾಲಿ ಮಾಡಿ ಬೆಂಗಳೂರಿಗೆ ಬಂದು ನೆಲಸಿದರು. ಈ ಪತ್ರಿಕೆಯಲ್ಲಿ 'ಮೈಸೂರು ಚಲೋ' ಕುರಿತಾಗಿ ತಿ.ತಾ. ಶರ್ಮ ಅವರ ಲೇಖನಗಳನ್ನು ಪ್ರಕಟಿಸಿದ್ದಕ್ಕಾಗಿ ಅಂದಿನ ಆರ್ಕಾಟರ ಸರ್ಕಾರ, ಪೌರವಾಣಿ ಪತ್ರಿಕೆ ಕಚೇರಿಗೆ 1947ರ ಆಗಸ್ಟ್ 30ರಂದು ಬೀಗ ಮುದ್ರೆ ಹಾಕಿತ್ತು. ಅದಾಗ್ಯೂ, ದೊರೆಸ್ವಾಮಿ ಅವರು ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದ ಹಿಂದೂಪುರಕ್ಕೆ ಉಟ್ಟಬಟ್ಟೆಯಲ್ಲಿ ಹೊರಟು ಕೇವಲ 8 ದಿನದೊಳಗೆ 1947ರ ಸೆಪ್ಟಂಬರ್ 7 ರಂದು ಪೌರವಾಣಿ ಪತ್ರಿಕೆ ಪ್ರಕಟಿಸಿದರು. ಮತ್ತು ಅಂದಿನ ಸ್ವಾತಂತ್ರ್ಯ ಚಳುವಳಿಗಾರರು, ಬೆಂಗಳೂರಿನಲ್ಲಿ ತಂದು ವಿತರಣೆ ಮಾಡುತ್ತಿದ್ದರು. ಆದರೆ ಆಗಿನ ಸರ್ಕಾರ ಆ ಪತ್ರಿಕೆ, ಮೈಸೂರು ಸಂಸ್ಥಾನಕ್ಕೆ ಬರಬಾರದೆಂದು ಆದೇಶ ಹೊರಡಿಸಿತ್ತು. ಛಲ ಬಿಡದೆ, ಅದೇ ಪತ್ರಿಕೆಯನ್ನು 'ಪೌರವೀರ' ಎಂಬ ನಾಮಾಂಕಿತದಿಂದ ಪ್ರಕಟಿಸಲಾಯಿತು. ಭಾರತ ಸ್ವಾತಂತ್ರ್ಯದ ನಂತರ ಬೆಂಗಳೂರಿಗೆ ಬಂದು, ಎಲ್ಲಿಂದಲೇ ಪತ್ರಿಕೆ ಹೊರತಂದರು. ಸ್ವಾತಂತ್ರ್ಯಾ ನಂತರ 1953ರಲ್ಲಿ ಪತ್ರಕರ್ತರ ಸಂಘದ ಅಧ್ಯಕ್ಷತೆ, ಪತ್ರಕರ್ತರ ಸಹಕಾರ ಸಂಘದ ಸ್ಥಾಪನೆಯಾಯಿತು.

ಏಕೀಕರಣ ಚಳವಳಿಯಲ್ಲಿ ಬಳ್ಳಾರಿ ಸಿದ್ದಮ್ಮ, ಬಿ.ಎನ್. ಬೋರೇಗೌಡ, ನರಸಿಂಹಯ್ಯನವರೊಡಗೂಡಿ, ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಮಾಡಿ, ಜನ ಜಾಗೃತಿಗೊಳಿಸಿದ್ದರು. ನಂತರ ಏಕೀಕರಣವನ್ನು ಒತ್ತಾಯಿಸಲು, ದೆಹಲಿಗೆ ತೆರಳುವ ನಿಯೋಗದೊಂದಿಗೆ ತೆರಳಿ, ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ್ ಅವರು ಪ್ರಧಾನಿ ನೆಹರು, ವಲ್ಲಭಬಾಯ್ ಪಟೇಲ್ ಅವರನ್ನು ಭೇಟಿ ಮಾಡಿ, ನಿವೇದನೆ ಸಲ್ಲಿಸಿದರು. ಅಲ್ಲಿಂದ ಸಂದೇಶ ತಂದು, "ಮಹಾರಾಜರಿಗೆ ಸಿಂಹಾಸನ ತೆರವು ಮಾಡಬೇಕೆಂಬ" ನಿವೇದನೆಯನ್ನು ಪತ್ರಿಕೆಗಳ ಮೂಲಕ ಪ್ರಕಟಿಸಿದರು. ಅರಸೀಕೆರೆಯಲ್ಲಿ ಬಳ್ಳಾರಿ ಸಿದ್ದಮ್ಮ ಅವರ ಅಧ್ಯಕ್ಷತೆಯಲ್ಲಿ ಸರ್ವಪಕ್ಷಗಳ ಸಮ್ಮೇಳನ ಫಜಲ್ ಆಲಿ ಆಯೋಗದ ಮುಂದೆ ಪ್ರಸ್ತಾವನೆ ಮಂಡನೆ, 'Welcome Bellary' ಸ್ಮರಣ ಸಂಚಿಕೆ ಪ್ರಕಟಣೆ ಮಾಡಿದ್ದರು.

ವಿವಾಹ : ಶ್ರೀಮತಿ ಲಲಿತಮ್ಮ ಅವರನ್ನು 1950ರಲ್ಲಿ ವಾಸವಿ ಧರ್ಮಶಾಲೆಯಲ್ಲಿ ವಿವಾಹವಾದರು. ಇವರಿಗೆ ಒಬ್ಬಳು ಹೆಣ್ಣು ಮಗಳು ಮತ್ತು ಒಬ್ಬ ಮಗನಿದ್ದಾನೆ.

ಸಂಸ್ಥೆಯ ಸಂಚಾಲಕ : ರಾಷ್ಟ್ರ ಮಟ್ಟದ ಭಾರತ ಸೇವಕ ಸಮಾಜದ ಮೈಸೂರು ಪ್ರಾಂತ್ಯದ ಸಂಚಾಲಕರಾಗಿ ದೊರೆಸ್ವಾಮಿ ಅವರು ಕಾರ್ಯ ನಿರ್ವಹಿಸಿದರು. ದಾಸರ ಕಾಲೋನಿ, ವಾಲ್ಮೀಕಿನಗರ, ಸುಧಾರಣೆ ಚರ್ಮೋದ್ಯೋಗ ಸಹಕಾರ ಸಂಘ ಸ್ಥಾಪನೆ. ಭಾರತ ಸಾಧು ಸಮಾಜ ಆರಂಭ, ಶಾಲಾ ಶಿಕ್ಷಕರಿಗೆ ತರಬೇತಿ, ನರ್ಸರಿ ಸ್ಕೂಲ್ ಟೀಚರ್ ಅಸೋಸಿಯೇಷನ್ ಮತ್ತು **Nursery Teachers Training College** ಸ್ಥಾಪನೆ ಮಾಡಿದ್ದರು. ಅಂದಿನ ಕೆಂಗಲ್ ಹನುಮಂತಯ್ಯ ಸರ್ಕಾರದಿಂದ ಬಂದ ವಿಧಾನ ಪರಿಷತ್ ಸದಸ್ಯತ್ವದ ಪ್ರಸ್ತಾವನೆ ತಿರಸ್ಕಾರ, ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗಿ, 14 ತಿಂಗಳ ಸೆರೆಮನೆ ವಾಸ. ಕರ್ನಾಟಕ ಸರ್ವೋದಯ ಮಂಡಳಿಯಲ್ಲಿ ಭಾಗಿ ಭೂದಾನ ಚಳುವಳಿಯಲ್ಲಿ ಭಾಗಿ, ಹನುಮಂತನಗರ ಸಹಕಾರ ಬ್ಯಾಂಕ್ ಸ್ಥಾಪನೆ, ಭಾರತಮಾತಾ ವಿದ್ಯಾಮಂದಿರ ಸ್ಥಾಪನೆ, ಮೈಸೂರು ವಿ.ವಿ.ಯ ಸೆನೆಟ್ ಸದಸ್ಯ, ಬೆಳ್ಳೂರಿನಲ್ಲಿ ಕೋಮು ಸೌಹಾರ್ದತೆಗೆ ಶ್ರಮಿಸಿದ್ದು, ತುರ್ತು ಪರಿಸ್ಥಿತಿಯಲ್ಲಿ ಪ್ರಧಾನಿ ಇಂದಿರಾ ಗಾಂಧಿ ಅವರಿಗೆ ಪತ್ರ, ಜನಜಾಗೃತಿ ಮೂಡಿಸಲು ಕರ್ನಾಟಕದಾದ್ಯಂತ ಪ್ರವಾಸ, ಬಂಧನ, ನಾಲ್ಕು ತಿಂಗಳ ಸೆರೆಮನೆ ವಾಸ, ಕೈಗಾ ಅಣುಶಕ್ತಿ ಸ್ಥಾವರ ಸ್ಥಾಪನೆ ವಿರುದ್ಧ ಹೋರಾಟ–ಪಾದಯಾತ್ರೆ, ಗೋಹತ್ಯಾ ನಿಷೇಧ ಚಳುವಳಿಯಲ್ಲಿ, ಹರಿಹರ ಪಾಲಿಫೈಬರ್ಸ್ ವಿರುದ್ಧ ಹೋರಾಟ– ರೈತ ಚಳುವಳಿಯಲ್ಲಿ ರೈತ ನಾಯಕರೊಂದಿಗೆ ರಾಜ್ಯದಾದ್ಯಂತ ಜಾಗೃತಿ ಪ್ರವಾಸ, ಅಧ್ಯಯನ ಶಿಬಿರದಲ್ಲಿ ಭಾಗಿ, ನೈಸ್ ಕಂಪನಿಯ ಭೂ ಕಬಳಿಕೆ ವಿರುದ್ಧ ಹೋರಾಟ, ಮಂಡೂರು ಕಸ ಸಂಗ್ರಹಗಾರ ಜನಾರೋಗ್ಯ ನೈರ್ಮಲ್ಯಕ್ಕಾಗಿ ಚಳವಳಿ, ಎ.ಟಿ. ರಾಮಸ್ವಾಮಿ ಅವರೊಂದಿಗೆ ಭೂಕಬಳಿಕೆ ವಿರುದ್ಧ 2014ರಲ್ಲಿ ಆಂದೋಲನ, ಕಾವೇರಿ ನದಿ ನೀರು ಹಂಚಿಕೆ, ನ್ಯಾಯಯುತ ಹಂಚಿಕೆ ಸಂಧಾನದ ಮಾರ್ಗ ಸೂಚನೆ, ನಕ್ಸಲರ ಬಿಡುಗಡೆಯ ಮಾನವೀಯ ಹೋರಾಟ, ಭೂಮಿ ಮತ್ತು ವಸತಿ ಹಕ್ಕು ವಂಚಿತರ ಪರವಾಗಿ ಆಂದೋಲನದಲ್ಲಿ ಇಂದಿಗೂ ತೊಡಗಿಕೊಂಡಿರುವ ದಿವ್ಯ ಚೇತನ, ಡಾ. ಹೆಚ್.ಎಸ್. ದೊರೆಸ್ವಾಮಿ ಅವರಾಗಿದ್ದಾರೆ.

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	2.10.1869
ಕಸ್ತೂರ್‌ಬಾರೊಂದಿಗೆ ವಿವಾಹ	1883
ಮೆಟ್ರಿಕ್ಯುಲೇಶನ್ ಉತ್ತೀರ್ಣರಾದದ್ದು	1887
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	1888
ಬ್ಯಾರಿಸ್ಟರರಾಗಿ ದಾಖಲಾತಿ	1891
ಮರಳಿ ಭಾರತಕ್ಕೆ ಬೊಂಬಾಯಿ, ರಾಜ್‌ಕೋಟೆಯಲ್ಲಿ ವಕೀಲಿ ವೃತ್ತಿ	1891
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1893
ಬೋರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ ಇಂಡಿಯನ್ ಅಂಬುಲೆನ್ಸ್ ಕೋರ್ ನೇತೃತ್ವ	1899 ಮತ್ತು 1906
ಭಾರತಕ್ಕೆ ವಾಪಸ್ಸು	1901
ಭಾರತದಲ್ಲಿ ವ್ಯಾಪಕವಾದ ಪ್ರವಾಸ, ಕಲ್ಕತ್ತದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಭೆಯಲ್ಲಿ ಪಾಲ್ಗೊಂಡಿದ್ದು, ಬೊಂಬಾಯಿಲ್ಲಿ ಲಾಯರ್ ಆಫೀಸ್ ಪ್ರಾರಂಭ	1901
ಭಾರತೀಯರ ಕೋರಿಕೆಯಂತೆ ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣ	1902
ಟ್ರಾನ್ಸ್‌ವಾಲ್ ಬ್ರಿಟಿಷ್ ಇಂಡಿಯಾ ಅಸೋಸಿಯೇಷನ್	1903
ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ	1904
ಫೀನಿಕ್ಸ್ ಆಶ್ರಮ ಸ್ಥಾಪನೆ	1904

ಸೆಪ್ಟಂಬರ್ ವೀರಾಗಾಂನಲ್ಲಿ ಸಮುದ್ರ
ಪ್ರಯಾಣಿಕರ ಶೋಷಣೆಯ ವಿರುದ್ಧ
ಸತ್ಯಾಗ್ರಹ ಮಾಡುವ ಬೆದರಿಕೆ 1905
ಟ್ರಾನ್ಸ್‌ವಾಲ್‌ನ ಭಾರತೀಯ ವಲಸೆಗಾರರ
ಮೇಲೆ ಪ್ರಯೋಗಿಸಲಾಗುವ "ಏಷಿಯಾಟಿಕ್
ಆರ್ಡಿನೆನ್ಸ್ ವಿರುದ್ಧ ಚಳುವಳಿ 1906
ಬ್ರಹ್ಮಚರ್ಯ ವ್ರತ ಸ್ವೀಕಾರ 1906
ಇಂಗ್ಲೆಂಡಿಗೆ ಪ್ರಯಾಣ 1906
ಜೂನ್, ಸತ್ಯಾಗ್ರಹ ಏಷಿಯನ್ನರ ಬಲತ್ಕಾರದ
ನೋಂದಾವಣೆ (ಕರಾಳ ಕಾನೂನು) ವಿರುದ್ಧ
ಸತ್ಯಾಗ್ರಹ 1907
ಸತ್ಯಾಗ್ರಹ ನಡೆಸಿದ್ದಕ್ಕೆ ದಕ್ಷಿಣ ಆಫ್ರಿಕಾದ
ಜೋಹಾನ್ಸ್‌ಬರ್ಗ್‌ನಲ್ಲಿ ಪ್ರಥಮ ಜೈಲುವಾಸ 1908
ಇಂಗ್ಲೆಂಡಿಗೆ ಪ್ರಯಾಣ, ಭಾರತೀಯ
ವಲಸೆಗಾರರ ಪರವಾದಗಳು, ಸ್ತ್ರೀ ಸ್ವಾತಂತ್ರ್ಯ
ಹೋರಾಟ ಪರಿಶೀಲನೆ 1909
ಮೇ ಜೋಹಾನ್ಸ್‌ಬರ್ಗ್‌ನಲ್ಲಿ ಟಾಲ್‌ಸ್ಟಾಯ್
ಫಾರ್ಮ್ ಸ್ಥಾಪನೆ 1910
ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ 1913
ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಆಗಮನ 1914
ಮೇ ಅಹಮದಾಬಾದ್ ಬಳಿ ಸತ್ಯಾಗ್ರಹ
ಆಶ್ರಮ ಸ್ಥಾಪನೆ 1915
ಸಬರಮತಿ ಆಶ್ರಮ ಸ್ಥಾಪನೆ 1917
ಫೆಬ್ರವರಿ ಅಹಮದಾಬಾದ್ ಮಿಲ್
ಕೂಲಿಗಾರರ ಪರ ಹೋರಾಟ, ಮೂರು ದಿನ
ಉಪವಾಸ ಸತ್ಯಾಗ್ರಹ, ಭರತದಲ್ಲಿ ಇದೇ
ಮೊದಲ ಉಪವಾಸ

ಖೇಡಾದಲ್ಲಿ ಕರನಿರಾಕರಣೆ ಚಳುವಳಿ 1918
ಜಲಿಯನ್ ವಾಲಾಬಾಗ್ ಹತ್ಯಾಕಾಂಡ
ವಿರೋಧಿಸಿ ಏಪ್ರಿಲ್ 13–14ರಂದು ಉಪವಾಸ 1919
ಯಂಗ್ ಇಂಡಿಯಾ ಮತ್ತು
ನವಜೀವನ ಪತ್ರಿಕೆಗಳ ಆರಂಭ 1919
ಅಸಹಕಾರ ಚಳುವಳಿ, ಖಿಲಾಫತ್ ಚಳುವಳಿ
ಅಖಿಲ ಭಾರತ ಹೋಂರೂಲ್ ಲೀಗ್ ಅಧ್ಯಕ್ಷತೆ 1920
ಖಾದಿಯ ಪಂಚೆ ಉಡುವ ನಿರ್ಧಾರ ಮತ್ತು
ಖಾದಿ ಪ್ರಚಾರ ಆರಂಭ 1921
ಚೌರಿಚೌರಾ ಹತ್ಯಾಕಾಂಡ, ಅಸಹಕಾರ ಸತ್ಯಾಗ್ರಹ
ನಿಲುಗಡೆ, ಬಾರ್ದೋಲಿಯಲ್ಲಿ ಐದು ದಿನದ
ಉಪವಾಸ, ಯಂಗ್ ಇಂಡಿಯಾ
ಲೇಖನಗಳಿಗಾಗಿ ರಾಜದ್ರೋಹದ ಆಪಾದನೆ
ಮೇಲೆ ದಸ್ತಗಿರಿ ಭಾರತದಲ್ಲಿ ಪ್ರಥಮ ಜೈಲುವಾಸ 1922
ಫೆಬ್ರವರಿ ಯರವಾಡಾ ಜೈಲಿನಿಂದ ಬಿಡುಗಡೆ 1924
ಹಿಂದೂ ಮುಸ್ಲಿಂ ಏಕತೆಗಾಗಿ 21 ದಿನ ಉಪವಾಸ 1924
ಬೆಳಗಾವಿ ಕಾಂಗ್ರೆಸ್ ಅಧಿವೇಶನ 1924
ಚರಖಾ ಸಂಘದ ಸ್ಥಾಪನೆ 1925
ಬಾರ್ದೋಲಿ ಸತ್ಯಾಗ್ರಹ ಅನ್ಯಾಯದ ತೆರಿಗೆ ವಿರುದ್ಧ 1928
ಮೂರನೇ ಅಖಿಲ ಭಾರತ ಸತ್ಯಾಗ್ರಹ
ಜನವರಿ 26 ರಾಷ್ಟ್ರದಿನವೆಂದು ಸೂಚನೆ
ಉಪ್ಪಿನ ಸತ್ಯಾಗ್ರಹ ಮತ್ತು ದಂಡೀಯಾತ್ರೆ 1930
ಯೂರೋಪು ಸಂದರ್ಶನ ಮತ್ತು
ದುಂಡು ಮೇಜಿನ ಪರಿಷತ್ತು ವಿಫಲ 1931
ಹರಿಜನರಿಗೆ ಪ್ರತ್ಯೇಕ ಚುನಾವಣೆಗಳನ್ನು
ಏರ್ಪಡಿಸುವ ಬ್ರಿಟಿಷ್ ಯೋಜನೆಗಳನ್ನು

ವಿರೋಧಿಸಿ ಉಪವಾಸ ಸತ್ಯಾಗ್ರಹ	
ಹರಿಜನ ವಾರ ಪತ್ರಿಕೆ ಆರಂಭ	
ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ, ಮೂರು ಸಲ	
ಗಾಂಧೀಜಿಯ ಕೊಲೆಯ ಪ್ರಯತ್ನಗಳು	
ಅಖಿಲ ಭಾರತ ಗ್ರಾಮೋದ್ಯೋಗ ಸಂಘ ಆರಂಭ	1934
ವಾರ್ಧಾ ಸಮೀಪ ಸೇವಾಗ್ರಾಮ ಆಶ್ರಮ ಆರಂಭ	1936
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937
"ಭಾರತ ಬಿಟ್ಟು ತೊಲಗಿ" ಚಳುವಳಿ	1942
21 ದಿನಗಳ ಉಪವಾಸ ಸತ್ಯಾಗ್ರಹ ಆರಂಭ	1943
ಫೆ. 22 ಕಸ್ತೂರಬಾ ಮರಣ, 23ರಂದು	
ಆಗಾಖಾನ್ ಅರಮನೆ ಆವರಣದಲ್ಲಿ ದಹನ	1944
ಕೊನೆಯ ಬಾರಿಗೆ ಆಗಾಖಾನ್	
ಅರಮನೆಯಲ್ಲಿ ಸೆರೆವಾಸ	
ಕ್ಯಾಬಿನೆಟ್ ಮಿಷನ್, ಸಿಮ್ಲಾ ಸಮ್ಮೇಳನ	1945
ಕ್ಯಾಬಿನೆಟ್ ಅಂಗೀಕಾರ, ನೌಖಾಲಿ ಶಾಂತಿ	
ಪಾದಯಾತ್ರೆ	1946
ಭಾರತಕ್ಕೆ ಸ್ವಾತಂತ್ರ್ಯ ಮತ್ತು ದೇಶ ವಿಭಜನೆ	1947
ದೆಹಲಿಯಲ್ಲಿ ಕೋಮುವಾರು ಸೌಹಾರ್ದಕ್ಕಾಗಿ	
ಕೊನೆಯ ಉಪವಾಸ	1948
ಹಂತಕನ ಗುಂಡೇಟಿಗೆ ಹುತಾತ್ಮರು	30–1–1948
ರಾಜ್‌ಘಾಟದಲ್ಲಿ ದಹನ	31–1–1948

ಕಸ್ತೂರ್‌ಬಾ ಅವರ ಕಿರು ಜೀವನ ಚಿತ್ರಣ

ಪೋರಬಂದರದಲ್ಲಿ ಜನನ	11.04.1869
ಗಾಂಧಿ ಅವರೊಡನೆ ವಿವಾಹ	1888
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	1896
ಗಾಂಧಿ ಅವರ ಮೇಲೆ ಆಕ್ರಮಣ ಖಂಡನೆ	1897
ಜೋಹನ್ಸ್‌ಬರ್ಗ್‌ನಲ್ಲಿ ಪ್ಲೇಗ್ ಪೀಡಿತರ ಸೇವೆ	1904
ಜೋಹನ್ಸ್‌ಬರ್ಗ್‌ನಲ್ಲಿ ಭಾರತೀಯ ಮಹಿಳೆಯರಿಗೆ ಸಂದೇಶ	1909
ಗುಜರಾತಿನ ಕೊಚರಬಾದಲ್ಲಿ ಆಶ್ರಮ ಸ್ಥಾಪನೆ	1915
ಗಾಂಧೀಜಿ ಅವರೊಡನೆ ಭಾರತದಾದ್ಯಂತ ಪ್ರವಾಸ	1916
ಗಾಂಧೀಜಿ ಅವರೊಡನೆ ಚಂಪಾರಣ್ಯ ಚಳುವಳಿಯಲ್ಲಿ ಭಾಗಿ	1917
ಸಬರಮತಿ ಆಶ್ರಮದ ನಿರ್ವಹಣೆಯ ಜವಾಬ್ದಾರಿ	1920
ಗಾಂಧೀಜಿ ಅವರೊಡನೆ ವಿದೇಶಿ ವಸ್ತ್ರಗಳ ನಾಶ	1921
ವಿದೇಶಿ ವಸ್ತ್ರ ಬಹಿಷ್ಕಾರ ಮತ್ತು ನೂಲು ನೇಯಲು ಕಲಿಕೆ	1922
ಅಸಹಕಾರ ಚಳುವಳಿಯಲ್ಲಿ ಭಾಗಿ	1930
ಭಾರತೀಯ ಮಹಿಳೆಯರಿಂದ ಚಳುವಳಿಗಾಗಿ ಕಸ್ತೂರ್‌ಬಾಗೆ ನೆರವು	1931
ಅಸಹಕಾರ ಚಳುವಳಿಗಾಗಿ 6 ವಾರಗಳ ಸೆರೆಮನೆ ವಾಸ	1932
ಬ್ರಿಟಿಷರಿಂದ ಬಂಧನ ಮತ್ತೆ ಸೆರೆವಾಸ	1933
ಸಬರಮತಿ ಆಶ್ರಮ ಮುತ್ತಿಗೆ	1933

ಗಾಂಧಿಯವರೊಡನೆ ಪೂನಾದ ಮುನಿಸಿಪಲ್	
ಹಾಲ್‌ಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ	
ನಾಡಬಾಂಬ್ ಎಸೆತಕ್ಕೆ ಗುರಿ	**1934**
ಸೇವಾಗ್ರಾಮ ಆಶ್ರಮ ಸ್ಥಾಪನೆ	**1936**
ರಾಜ್‌ಕೋಟ್‌ನಲ್ಲಿ ಠಾಕೂರರ ದಬ್ಬಾಳಿಕೆ ವಿರುದ್ಧ	
ಮಹಿಳಾ ಹೋರಾಟಗಾರರಿಗೆ ನೆರವು	**1939**
ಬಂಧನ, ಕತ್ತಲ ಸೆರೆಮನೆವಾಸ	**1939**
ಕಸ್ತೂರ್‌ಬಾ ಕುರಿತು ಹರಿಜನ ಪತ್ರಿಕೆಯಲ್ಲಿ	
ಗಾಂಧೀಜಿ ಅವರ ಲೇಖನ ಪ್ರಕಟ	**1939**
ಕಾಂಗ್ರೇಸ್ ಅಧಿವೇಶನಕ್ಕೆ ಗಾಂಧೀಜಿ	
ಅವರೊಡನೆ ಮುಂಬೈಗೆ ಪಯಣ	**1942**
ಶಿವಾಜಿ ಪಾರ್ಕ್‌ನಲ್ಲಿ ಬೃಹತ್ ಸಾರ್ವಜನಿಕ	
ಸಮಾವೇಶದಲ್ಲಿ ಮಾಡಿದ ಭಾಷಣಕ್ಕಾಗಿ ಬಂಧನ	**1942**
ಸೆರೆಮನೆಯಲ್ಲಿ 2 ಬಾರಿ ಹೃದಯಾಘಾತ	**1944**
ಸೆರೆಮನೆಯಲ್ಲಿ 74ನೇ ವಯಸ್ಸಿನಲ್ಲಿ ನಿಧನ	**22.02.1944**

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

1.	ಆರೋಗ್ಯ ರಹಸ್ಯ	10–00
2.	ಕರ್ನಾಟಕದಲ್ಲಿ ಗಾಂಧೀ	5–00
3.	ರಾಮನಾಮ	6–00
4.	ಗಾಂಧೀ ಬಳಗದ ವಿದೇಶಿಯರು	40–00
5.	ಆರೋಗ್ಯ	8–00
6.	ಪ್ರಾರ್ಥನೆ	40–00
7.	ಸತ್ಯಾಗ್ರಹ	8–00
8.	ಮಹಿಳೆಯರಿಗಾಗಿ	8–00
9.	ಪಂಚಾಯತ್ ರಾಜ್	12–00
10.	ಆದರ್ಶಗಳು	12–00
11.	ನಮ್ಮ ಗಾಂಧೀ ತಾತ	22–00
12.	ದೇವನಗರಿಯಲ್ಲಿ ಗಾಂಧೀ ಧ್ವನಿ	2–00
13.	ನಮ್ಮ ಗಾಂಧೀ ತಾತ	15–00
14.	ಹೋರಾಟ ಶ್ರೀ	40–00
15.	ಮಹಾತ್ಮ ಗಾಂಧೀಜಿ ಅವರ ಜೀವನ ಮೈಲಿಗಲ್ಲುಗಳು	3–00
16.	ಗಾಂಧೀಜಿ ಜೀವನ ಚರಿತ್ರೆ	25–00
17.	ಕುವೆಂಪು ಕಂಡ ಗಾಂಧೀ	25–00
18.	ಉಪ್ಪಿನ ಸತ್ಯಾಗ್ರಹ	5–00
19.	ಹಿಂದ್ ಸ್ವರಾಜ್	50–00
20.	ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ	25–00
21.	ನನ್ನ ಕನಸಿನ ಭಾರತ	30–00
22.	ಹಿಂದೂ ಧರ್ಮ	25–00
23.	ಮಹಿಳೆಯರು	63–00
24.	ಸ್ವಾತಂತ್ರ್ಯ	42–00
25.	ಅಸ್ಪೃಶ್ಯತೆ	45–00
26.	ಒಳ್ಳೆಯ ಜೀವನ	60–00
27.	ಗಾಂಧೀ ಮತ್ತು ಕರ್ನಾಟಕ	200–00

28.	ಸತ್ಯ	38–00
29.	ವಿದ್ಯಾರ್ಥಿಗಳಿಗಾಗಿ	30–00
30.	ಸರ್ವೋದಯ	30–00
31.	ಖಾದಿ ಗ್ರಾಮೋದ್ಯೋಗ	58–00
32.	ನನ್ನ ಬಾಲ್ಯದ ನೆನಪುಗಳು	52–00
33.	ಗ್ರಾಮರಾಜ್ಯ ಆಡಳಿತ	5–00
34.	ನನ್ನ ಕನಸಿನ ಸ್ವರಾಜ್ಯ	42–00
35.	ಹಾಸ್ಯ ಮತ್ತು ಗಾಂಧೀ	44–00
36.	ನನ್ನ ಆದರ್ಶಗ್ರಾಮ	5–00
37.	ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ಧತಿ	48–00
38.	ಸತ್ಯಾಗ್ರಹಿ	40–00
39.	ಗ್ರಾಮದಾನ ಗ್ರಾಮ ಸ್ವರಾಜ್ಯ	25–00
40.	ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ	
41.	ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ	5–00
42.	ಸತ್ಯಾಗ್ರಹ	5–00
43.	ಹಿಂದ್ ಸ್ವರಾಜ್	5–00
44.	ಆರೋಗ್ಯ	5–00
45.	ಮಹಾತ್ಮ ಗಾಂಧಿ ಪ್ರಸ್ತುತತೆ	10–00
46.	ಬಹುರೂಪಿ ಗಾಂಧಿ	35–00
47.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	30–00
48.	ಕೃತಯುಗಿ ವಿನೋಬಾ ಭಾವೆ	15–00
49.	ಮೋಹನ ತರಂಗ	40–00
50.	ನಮ್ಮ ಗಾಂಧಿ ತಾತ	22–00
51.	ಗೀತಾ ಪ್ರವಚನ	80–00
52.	ಜೆ.ಪಿ. ಜೀವನ ಹಾದಿ	45–00
53.	ಗಣ್ಯರು ಕಂಡಂತೆ ಗಾಂಧಿ	20.0
54.	ಗೀತಾಮಾತೆ	80.00

55.	ಲೋಕ ಚಿಂತಕರು	145.00
56.	ಕರ್ನಾಟಕದ ಕಸ್ತೂರ್‌ಬಾ ಯಶೋಧರಮ್ಮ ದಾಸಪ್ಪ	38.00
57.	ಮಹದೇವ ದೇಸಾಯಿ	63.00
58.	ಸಮಾಜವಾದ : ಗಾಂಧೀ ದೃಷ್ಟಿಕೋನ	15.00
59.	ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ	28.00
60.	ಗಾಂಧೀ ಬಳಗದ ವಿದೇಶಿಯರು	89.00
61.	ಮಹಾತ್ಮ ಗಾಂಧೀ ಮತ್ತು ಸ್ವಚ್ಛ ಭಾರತ	33.00
62.	ಮಹಾತ್ಮ ಗಂಧೀಜಿ ಅವರ ಶೈಕ್ಷಣಿಕ ಸಿದ್ಧಾಂತ	80.00
63.	ಹುಕ್ಕೇರಿಕರ ರಾಮರಾಯರು	110.00
64.	ಮಹಿಳೆಯರು	63.00
65.	ನನ್ನ ಬಾಲ್ಯದ ನೆನಪುಗಳು	52.00
66.	ನಯೀ ತಾಲೀಂ	58.00
67.	ಚರಕ ಸಂಹಿತೆ	68.00
68.	ಸ್ವಚ್ಛ ಭಾರತಿ	82.00
69.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	66.00
70.	ಗಾಂಧಿಯೊಳಗಿನ ಪತ್ರಕರ್ತ ಮರು ವೀಕ್ಷಣೆ	68.00
71.	Nayi Talim	58.00
72.	Temple & Mosque	10-00
73.	Rastrapita Mahatma Gandhi	25-00
74.	Swarajya of My Dreams	5-00
75.	Gandhi My Grand Father	5-00
76.	Grand Pa Gandhi	5-00
77.	Relevance of Gandhi	20-00
78.	Vinoba Sage of the Age	20.00
79.	Kasturba	33.00
80.	Mahatma Gandhi and his Foreign Associates	87.00

ಕರ್ನಾಟಕದಲ್ಲಿ ಗಾಂಧೀಜಿ ಭೇಟಿ ನೀಡಿದ ಸ್ಥಳಗಳು

● ಬೆಂಗಳೂರು	ದಿ. 08–05–1915
● ಬೆಳಗಾವಿ	ದಿ. 27–04–1916 ರಿಂದ ದಿ. 01–05–1916 ರವರೆಗೆ
● ಬಿಜಾಪುರ (ವಿಜಯಪುರ)	ದಿ. 05–05–1918 ರಿಂದ ದಿ. 06–05–1918 ರವರೆಗೆ
● ಕಾಸರಗೋಡು	ದಿ. 19–08–1920
● ಮಂಗಳೂರು	ದಿ. 20–08–1920
● ಬೆಂಗಳೂರು	ದಿ. 21–08–1920
● ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ ಸಂಕೇಶ್ವರ, ಬೆಳಗಾವಿ	ದಿ. 08–11–1920
● ಬೆಳಗಾವಿ ಶಹಾಪುರ ಖಾನಾಪುರ, ನಂದಗಢ ಹಳ್ಯಾಳ	ದಿ. 09–11–1920
● ಧಾರವಾಡ	ದಿ. 10–11–1920
● ಹುಬ್ಬಳ್ಳಿ, ಗದಗ	ದಿ. 11–11–1920
● ಸಾಂಗಲಿ	ದಿ. 12–11–1920
● ಬಾಗಲಕೋಟೆ	ದಿ. 27–05–1921
● ಬಿಜಾಪುರ (ವಿಜಯಪುರ), ಸೊಲ್ಲಾಪುರ	ದಿ. 28–05–1921
● ಬಳ್ಳಾರಿ	ದಿ. 30–09–1921
● ಬೆಳಗಾವಿ	ದಿ. 21–12–1924 ರಿಂದ ದಿ. 30–12–1924 ರವರೆಗೆ
● ಗುಲ್ಬರ್ಗಾ	ದಿ. 22–02–1927 ರಿಂದ ದಿ. 23–02–1927 ರವರೆಗೆ
● ನಿಪ್ಪಾಣಿ	ದಿ. 27–03–1927 ರಿಂದ ದಿ. 31–03–1927 ರವರೆಗೆ
● ಬೆಳಗಾವಿ	ದಿ. 01–04–1927 ದಿ. 18–04–1027 ರಿಂದ ದಿ. 19–04–1927ರವರೆಗೆ
● ಬೆಂಗಳೂರು	ದಿ. 06–06–1927 ರಿಂದ ದಿ. 13–07–1927 ರವರೆಗೆ

● ತುಮಕೂರು	ದಿ. 14-07-1927
● ತುಮಕೂರು, ಮಧುಗಿರಿ	ದಿ. 15-07-1927
● ತುಮಕೂರು	ದಿ. 16-07-1927
● ಬೆಂಗಳೂರು	ದಿ. 17-07-1927
● ಬೆಂಗಳೂರು	ದಿ. 18-07-1927
● ಮೈಸೂರು	ದಿ.19-07-1927 ರಿಂದ ದಿ. 21-07-1927 ರವರೆಗೆ
● ಕೃಷ್ಣರಾಜಸಾಗರ, ಯಡತೊರೆ ಶ್ರೀರಂಗಪಟ್ಟಣ, ದರಿಯಾದೌಲತ್	ದಿ. 21-07-1927
● ಮೈಸೂರು	ದಿ. 23-07-1927
● ಬೆಂಗಳೂರು	ದಿ. 24-07-1927 ರಿಂದ ದಿ. 30-07-1927 ರವರೆಗೆ
● ಕ್ಲೊಸ್‌ಪೇಟೆ (ರಾಮನಗರ) ಕಾನಕಾನಹಳ್ಳಿ (ಕನಕಪುರ)	ದಿ. 31-07-1927
● ಬೆಂಗಳೂರು	ದಿ. 01-08-1927
● ಅರಸೀಕರೆ, ಹಾಸನ	ದಿ. 02-08-1927
● ಹಾಸನ	ದಿ. 03-08-1927
● ಹಾಸನ, ಹೊಳೆನರಸೀಪುರ	ದಿ. 04-08-1927
● ಬೆಂಗಳೂರು	ದಿ. 05-08-1927 ರಿಂದ ದಿ. 11-08-1927 ರವರೆಗೆ
● ದಾವಣಗೆರೆ	ದಿ. 12-08-1927
● ಹರಿಹರ, ಹೊನ್ನಾಳಿ ಮಲೆಬೆನ್ನೂರು	ದಿ. 13-08-1927
● ಶಿವಮೊಗ್ಗ	ದಿ. 14-08-1927 ರಿಂದ ದಿ. 15-08-1927 ರವರೆಗೆ
● ಆಯ್ಯನೂರು, ಕುಂಸಿ, ಸಾಗರ ಶಿವಮೊಗ್ಗ	ದಿ. 16-08-1927
● ಶಿವಮೊಗ್ಗ, ತೀರ್ಥಹಳ್ಳಿ ಮಂದಗದ್ದೆ, ರಾಜನೂರು	ದಿ. 17-08-1927
● ಭದ್ರಾವತಿ, ತರೀಕೆರೆ ಬೀರೂರು, ಕಡೂರು	ದಿ. 18-08-1927
● ಚಿಕ್ಕಮಗಳೂರು	ದಿ. 19-08-1927

- ಬೇಲೂರು, ಹಳೇಬೀಡು ಅರಸೀಕೆರೆ — ದಿ. 20-08-1927
- ತಿಪಟೂರು — ದಿ. 21-08-1927
- ಬೆಂಗಳೂರು — ದಿ. 22-08-1927
- ಬೆಂಗಳೂರು — ದಿ. 23-08-1927
- ಹೊಸೂರು, ಸೂಳಗಿರಿ ಕೃಷ್ಣಗಿರಿ — ದಿ. 24-08-1927
- ಬೆಂಗಳೂರು — ದಿ. 25-08-1927 ರಿಂದ ದಿ. 30-08-1927 ರವರೆಗೆ
- ಹಿಂದೂಪುರ, ವಿಧುರಾಶ್ವತ್ಥ ಗೌರಿಬಿದನೂರು ದೊಡ್ಡಬಳ್ಳಾಪುರ, ತುಮಕೂರು ತ್ಯಾಮಗೊಂಡ್ಲು, ನೆಲಮಂಗಲ ಬೆಂಗಳೂರು, ಮೈಸೂರು — ದಿ. 04-01-1934
- ತಗಡೂರು, ಬದನವಾಳ ನಂಜನಗೂಡು, ಮೈಸೂರು — ದಿ. 05-01-1934
- ಮಂಡ್ಯ, ಚನ್ನಪಟ್ಟಣ, ರಾಮನಗರ ಕನಕಪುರ, ಬಿಡದಿ, ಕೆಂಗೇರಿ — ದಿ. 06-01-1934
- ಬೆಂಗಳೂರು — ದಿ. 07-01-1934 ರಿಂದ ದಿ. 09-01-1934 ರವರೆಗೆ
- ಪೊನ್ನಂಪೇಟೆ, ಹುದಿಕೇರಿ — ದಿ. 22-02-1934
- ವಿರಾಜಪೇಟೆ, ಬೆಳ್ಳೂರು ಸೋಮವಾರ ಪೇಟೆ, ಗುಂಡುಕಟ್ಟೆ — ದಿ. 23-02-1934
- ಮಡಿಕೇರಿ, ಸಂಪಾಜೆ, ಸುಳ್ಯ ಪುತ್ತೂರು, ಉಪ್ಪಿನಂಗಡಿ ವಿಟಲಗಬ್ಬ, ಕಲ್ಲಡ್ಕ, ಪಾಣೆ ಮಂಗಳೂರು, ಬಂಟ್ವಾಳ, ಮಂಗಳೂರು — ದಿ. 24-02-1934
- ಮಂಗಳೂರು, ಗುರುಪುರ, ಬಜ್ಪೆ ಯಕ್ಕೂರು, ಕಟೀಲು, ಕಿನ್ನಗೋಳಿ ಮೂಲ್ಕಿ, ಪಡುಬಿದ್ರಿ, ಕಟಪಾಡಿ ಗುರುಪುರ, ಉದ್ಯಾವರ ಉಡುಪಿ, ಬ್ರಹ್ಮಾವರ, ಸಿದ್ದಾಪುರ — ದಿ. 25-02-1934
- ಕುಂದಾಪುರ — ದಿ. 26-02-1934

- ಕುಂದಾಪುರ, ಭಟ್ಕಳ ಹೊನ್ನಾವರ, ಕಾರವಾರ — ದಿ. 27-02-1934
- ಕಾರವಾರ, ಕುಮುಟಾ, ಅಂಕೋಲ ಚಂದಿಯಾ, ಶಿರಸಿ — ದಿ. 28-02-1934
- ಶಿರಸಿ, ಸಿದ್ದಾಪುರ, ದಾಸನಕೊಪ್ಪ ಇಸಲೂರು, ಏಕಾಂಬಿ, ಆಲೂರು ಬ್ಯಾಡಗಿ, ಮೋಟೆಬೆನ್ನೂರು — ದಿ. 01-03-1934
- ಹಾವೇರಿ, ರಾಣೆಬೆನ್ನೂರು, ಹರಿಹರ ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು ಕೂಡ್ಲಿಗೆ, ದುಗ್ಗಾವತಿ, ಕಣಿವೆಹಳ್ಳಿ ಸೊಂಡೂರು — ದಿ. 02-03-1934
- ಸೊಂಡೂರು, ಬಳ್ಳಾರಿ, ಹೊಸಪೇಟೆ ಭಾನಾಪುರ, ಗದಗ, ಜಕ್ಕಲಿ, ಹುಬ್ಬಳ್ಳಿ — ದಿ. 03-03-1934
- ಹುಬ್ಬಳ್ಳಿ, ಧಾರವಾಡ, ಅಮ್ಮಿನಭಾವಿ ಹಿರೇಉಳ್ಳಗೇರಿ, ಬೈಲಹೊಂಗಲ ಉಪ್ಪಿನ, ಬೆಟಗೇರಿ, ಸೌಂದತ್ತಿ ಸಂಪಗಾಂವ್, ಹೊಸೂರು, ಬೆಳಗಾವಿ — ದಿ. 04-03-1934
- ಬೆಳಗಾವಿ — ದಿ. 05-03-1934
- ಬೆಳಗಾವಿ — ದಿ. 06-03-1934
- ಬೆಳಗಾವಿ, ಯಮಕನಮರಡಿ, ವಂಟಮರಿ ಹುಕ್ಕೇರಿ, ಗೋಕಾಕ, ಸಂಕೇಶ್ವರ ನವಲೀಹಾಳ, ಚಿಕ್ಕೋಡಿ, ಅಂಕಲಿ — ದಿ. 07-03-1934
- ಶೆಡಬಾಳ, ಬನಹಟ್ಟಿ, ಅಥಣಿ ಬಿಜಾಪುರ (ವಿಜಯಪುರ), ತಿಕೋಟ, ತೊರವಿ ಇಳಕಲ್ — ದಿ. 08-03-1934
- ನಂದಿ ಬೆಟ್ಟ — 10-05-1936 ರಿಂದ 30-05-1936 ರವರೆಗೆ
- ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಕೋಲಾರ, ಬಂಗಾರ ಪೇಟೆ, ಕೆ.ಜಿ.ಎಫ್ — 31-05-1936
- ಬೆಂಗಳೂರು — 01-06-1936 ರಿಂದ 12-06-1936 ರವರೆಗೆ
- ಬೆಳಗಾವಿ ಜಿಲ್ಲೆಯ ಹುದಲಿ — 16-04-1937 ರಿಂದ 21-04-1937ರವರೆಗೆ

ಗಾಂಧಿ ಅವರ ನೀತಿ ಮಾರ್ಗ ಸೂಚಿ

ಏಕಾದಶ ವ್ರತಗಳು

ಸತ್ಯ	**Truth**
ಅಹಿಂಸೆ	**Ahimsa or Love**
ಅಸ್ತೇಯ (ಕದಿಯದಿರುವುದು)	**Non-Stealing**
ಬ್ರಹ್ಮಚರ್ಯ	**Brahmacharya or Chastity**
ಅಸಂಗ್ರಹ (ಅಪರಿಗ್ರಹ)	**Non-Possession**
ಶರೀರ ಶ್ರಮ	**Physical Labour**
ಅಸ್ವಾದ (ನಾಲಿಗೆ ಚಪಲ)	**Control on the Palate**
ಸರ್ವತ್ರ ಭಯವರ್ಜನ (ಅಭಯ)	**Fearlessness**
ಸರ್ವಧರ್ಮ ಸಮಾನತ್ವ	**Equality of Religion**
ಸ್ವದೇಶಿ	**Swadeshi**
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	**Removal of Untouchability**

ಏಳು ಸಾಮಾಜಿಕ ಪಾತಕಗಳು Seven Social Sins

ತತ್ವರಹಿತ ರಾಜಕಾರಣ	**Politics without Principles**
ದುಡಿಮೆ ಇಲ್ಲದ ಸಂಪತ್ತು	**Wealth without Work**
ಆತ್ಮಸಾಕ್ಷಿ ಇಲ್ಲದ ಸಂತೋಷ	**Pleasure without Conscience**
ಚಾರಿತ್ರ್ಯವಿಲ್ಲದ ಶಿಕ್ಷಣ	**Education without Character**
ನೀತಿ ಇಲ್ಲದ ವ್ಯಾಪಾರ	**Commerce without Morality**
ಮಾನವೀಯತೆ ಇಲ್ಲದ ವಿಜ್ಞಾನ	**Science without Humanity**
ತ್ಯಾಗ ಇಲ್ಲದ ಪೂಜೆ	**Worship without Sacrifice**

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು
18 CONSTRUCTIVE PROGRAMMES

ಮತೀಯ ಐಕ್ಯತೆ	**Communal Unity**
ಅಸ್ಪೃಶ್ಯತಾ ನಿವಾರಣೆ	**Removal of Untouchability**
ಪಾನನಿರೋಧ	**Prohibition**
ಖಾದಿ	**Khadi**
ಇತರೆ ಗ್ರಾಮೋದ್ಯೋಗಗಳು	**Other village industries**
ಗ್ರಾಮ ನೈರ್ಮಲ್ಯ	**Village Sanitation**
ಮೂಲ ಶಿಕ್ಷಣ	**Basic Education**
ವಯಸ್ಕರ ಶಿಕ್ಷಣ	**Adult Education**
ಮಹಿಳಾ ಸಬಲೀಕರಣ	**Women Empowerment**
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	**Hygiene & Health Education**
ಪ್ರಾದೇಶಿಕ ಭಾಷೆ	**Provincial Languages**
ರಾಷ್ಟ್ರಭಾಷೆ	**National Language**
ಆರ್ಥಿಕ ಸಮಾನತೆ	**Economic Equality**
ರೈತರ ಸಬಲೀಕರಣ	**Empowerment of Farmers**
ಕಾರ್ಮಿಕರ ಸಬಲೀಕರಣ	**Empowerment of Labours**
ಆದಿವಾಸಿ ಸಬಲೀಕರಣ	**Tribal Empowerment**
ಕುಷ್ಠರೋಗ ನಿರ್ಮೂಲನೆ	**Cure of Lepracy**
ವಿದ್ಯಾರ್ಥಿಗಳು	**Students**

ವರ್ತಮಾನದ ವಿಷಯಗಳನ್ನು ಕೂಲಂಕಷವಾಗಿ ಅವಲೋಕಿಸಿ, ವಿಶ್ಲೇಷಿಸಿದ ಅವರ ಲೇಖನಗಳು ಹೊಸ ಆಲೋಚನಾ ಕ್ರಮಗಳನ್ನು ನಮ್ಮಲ್ಲಿ ಬೆಳೆಸುತ್ತವೆ. ಸಾಮಾಜಿಕ ಚಿಂತಕರು, ರಾಜಕೀಯ ನೇತಾರರಿಗೆ ಮಾರ್ಗದರ್ಶನವಾಗುವ ವಿಚಾರಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಡಾ. ವೂಡೇ ಪಿ. ಕೃಷ್ಣ

ಗಾಂಧಿ ಅವರ ಚಳುವಳಿಗಳು, ಅಹಿಂಸೆ, ಕೋಮುಸೌಹಾರ್ದ, ಜಾತ್ಯಾತೀತತೆಯ ನೆಲೆಗಟ್ಟಿನ ಮೇಲೆ ನಡೆಸಿದ್ದನ್ನು "ಗಾಂಧಿ ಅವರ ಹೋರಾಟದ ವೈಖರಿ, ಸ್ವಾತಂತ್ರ್ಯ ಸಂಗ್ರಾಮ, ಅಹಿಂಸೆ, ಧರ್ಮ ಮತ್ತು ರಾಜಕೀಯ, ಅಣುಬಾಂಬ್‌ರಹಿತ ವಿಶ್ವ, ಜಾತ್ಯಾತೀತ ರಾಜ್ಯ" ಲೇಖನಗಳಲ್ಲಿ ವರ್ತಮಾನದ ದೃಷ್ಟಿಕೋನದಿಂದ ವಿಶ್ಲೇಷಿಸಿರುವುದನ್ನು ಗಮನಿಸಬಹುದಾಗಿದೆ.

ವಿಶ್ವಕ್ಕೆ ಇಂದಿಗೂ ತುರ್ತಾಗಿ ಅನ್ವಯವಾಗುವ ಸಮಾಜವಾದಿ ಸಿದ್ಧಾಂತ, ವಿಶ್ವಶಾಂತಿ, ಮಾನವೀಯ ರಾಜಕಾರಣ, ಕೋಮುಸೌಹಾರ್ದದ ಬಗ್ಗೆ ಇಲ್ಲಿನ ಲೇಖನಗಳಲ್ಲಿ ಚರ್ಚಿಸಿದ್ದಾರೆ.

ಇಂದಿರಾ ಕೃಷ್ಣಪ್ಪ

ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು